ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೫–೧೬ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

ಎನ್. ಬೋರಲಿಂಗಯ್ಯನವರ ಬದುಕು – ಬರಹ

ನಿಬಂಧಕಾರರು

ಯೋಗೀಶ ಜೆ.

ನೋಂದಣಿ ಸಂಖ್ಯೆ : KVTM/K 150901030047

ಕನ್ನಡ ಎಂ.ಫಿಲ್ ವಿದ್ಯಾರ್ಥಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎಚ್.ಪಿ.ಗೀತಾ

ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೫–೧೬

ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೫-೧೬ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

ಎನ್. ಬೋರಲಿಂಗಯ್ಯನವರ ಬದುಕು - ಬರಹ

ನಿಬಂಧಕಾರರು
ಯೋಗೀಶ ಜೆ.
ನೋಂದಣಿ ಸಂಖ್ಯೆ : KVTM/K 150901030047
ಕನ್ನಡ ಎಂ.ಫಿಲ್ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು
ಡಾ. ಎಚ್.ಪಿ.ಗೀತಾ
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೫-೧೬

ಮಾರ್ಗದರ್ಶಕರ ಪ್ರಮಾಣಪತ್ರ

೨೦೧೫-೧೬ನೆಯ ಸಾಲಿನಲ್ಲಿ ಕ್ರಮ ಸಂಖ್ಯೆ: KVTM/K 150901030047ರ ಹಂಪಿ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್ ಪದವಿಯ ವಿದ್ಯಾರ್ಥಿಯಾದ **ಯೋಗೀಶ ಜೆ.** ಅವರು ನನ್ನ ಮಾರ್ಗದರ್ಶನದಲ್ಲಿ **"ಎನ್. ಬೋರಲಿಂಗಯ್ಯನವರ ಬದುಕು - ಬರಹ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್ ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಈ ನಿಬಂಧವನ್ನು ಈ ಮೊದಲು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಯಾವುದೇ ತತ್ಸಮಾನ ಪರೀಕ್ಷೆಗಳಿಗಾಗಿ ಯಾವ ವಿಶ್ವವಿದ್ಯಾಲಯಕ್ಕೂ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೨೮-೦೭-೨೦೧೬

ಗೀತಾ ಎಚ್.ಪಿ.
(ಡಾ. ಎಚ್.ಪಿ.ಗೀತಾ)
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು

ಅಭ್ಯರ್ಥಿಯ ಘೋಷಣಾ ಪತ್ರ

"ಎನ್. ಬೋರಲಿಂಗಯ್ಯನವರ ಬದುಕು – ಬರಹ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಹಂಪಿ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್. ಪದವಿಯ ಕ್ರಮ ಸಂಖ್ಯೆ: KVTM/K 150901030047ರ ವಿದ್ಯಾರ್ಥಿಯಾದ ನಾನು ೨೦೧೫–೧೬ನೆಯ ಸಾಲಿನ ಪರೀಕ್ಷೆಗಾಗಿ **ಡಾ. ಎಚ್.ಪಿ. ಗೀತಾ, ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು** ಇವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ತತ್ಸಮಾನ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೨೮–೦೭–೨೦೧೬

(ಯೋಗೀಶ ಜೆ.)
೨೦೧೫–೧೬ನೇ ಸಾಲಿನ ಎಂ.ಫಿಲ್. ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಪ ರಿ ವಿ ಡಿ

ಎನ್. ಬೋರಲಿಂಗಯ್ಯನವರ ಬದುಕು – ಬರಹ

ಅಧ್ಯಾಯಗಳು		ಪಠ್ಯ ಶೀರ್ಷಿಕೆ	ಪುಟ ಸಂಖ್ಯೆ
ಅಧ್ಯಾಯ – ೧	:	ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ	೧–೬
ಅಧ್ಯಾಯ – ೨	:	ಎನ್. ಬೋರಲಿಂಗಯ್ಯನವರ ಬದುಕು – ಬರಹ	೭–೧೦
ಅಧ್ಯಾಯ – ೩	:	ಎನ್.ಬೋರಲಿಂಗಯ್ಯನವರ ಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆ	೧೧–೭೬
		೩.೧. ಕಾದಂಬರಿಗಳಲ್ಲಿ ಕೌಟುಂಬಿಕ ಪ್ರಜ್ಞೆ	
		೩.೨. ಕವನಗಳಲ್ಲಿ ಮಕ್ಕಳ ಪ್ರಜ್ಞೆ	
		೩.೩. ವಚನಗಳಲ್ಲಿ ವೈಚಾರಿಕ ಪ್ರಜ್ಞೆ	
		೩.೪. ಪ್ರಬಂಧಗಳಲ್ಲಿ ಲೈಂಗಿಕ ಪ್ರಜ್ಞೆ	
		೩.೫. ವಿಮರ್ಶಾ ಲೇಖನಗಳಲ್ಲಿ ನವೋದಯ ಪ್ರಜ್ಞೆ	
ಅಧ್ಯಾಯ – ೪	:	ಕೃತಿಗಳಲ್ಲಿ ಪ್ರತಿಪಾದಿಸುವ ತಾತ್ವಿಕತೆ	೭೭–೮೧
ಅಧ್ಯಾಯ – ೫	:	ಕೃತಿಗಳಲ್ಲಿ ವಸ್ತು, ಭಾಷೆ ಮತ್ತು ಶೈಲಿ	೮೨–೮೪
ಅಧ್ಯಾಯ – ೬	:	ಉಪಸಂಹಾರ	೮೫–೮೭
		ಗ್ರಂಥಋಣ	೮೮

*****

ಅಧ್ಯಾಯ – ೧
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪೀಠಿಕೆ

ಹೊಸಗನ್ನಡ ಸಾಹಿತ್ಯವು ವಿವಿಧ ಪಂಥಗಳಾಗಿ ಕವಲಾಗಿ ಹೊರಹೊಮ್ಮಿರುವುದನ್ನು ಕಾಣುತ್ತೇವೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ, ಮುಸ್ಲಿಂ ಸಂವೇದನೆ, ಸ್ತ್ರೀ ಸಂವೇದನೆಯ ಹಿನ್ನೆಲೆಯಲ್ಲಿ ಕಾವ್ಯ, ಕಥೆ, ಕಾದಂಬರಿ, ನಾಟಕ, ಲಲಿತ ಪ್ರಬಂಧ, ವಿಮರ್ಶೆ ಹೀಗೆ ಹಲವಾರು ಸಾಹಿತ್ಯ ಪ್ರಕಾರಗಳೊಂದಿಗೆ ನಮ್ಮ ಹೊಸಗನ್ನಡ ಸಾಹಿತ್ಯವು ಬೆಳೆದಿದೆ. ಹೊಸಗನ್ನಡ ಸಾಹಿತ್ಯವು ದೇಶಿಯ ಮತ್ತು ವಿದೇಶಿಯ ಪ್ರಭಾವ ಪ್ರೇರಣೆಗಳನ್ನು ಪಡೆದು ಹೊಸ ಹೊಸ ಚಿಂತನೆಗಳ ಮೂಲಕ ವಿವಿಧ ವಿಷಯಗಳನ್ನು ತಮ್ಮ ಸಾಹಿತ್ಯದ ವಸ್ತುವಾಗಿ ಆಯ್ದುಕೊಂಡು ತಮ್ಮ ಬದುಕಿನ ಅನುಭವವನ್ನು ಅಭಿವ್ಯಕ್ತಿಸುವ ಕಾರ್ಯವನ್ನು ಹೊಸಗನ್ನಡ ಬರಹಗಾರರು ಮಾಡಿದರು. ಅಂತೆಯೇ ಎನ್.ಬೋರಲಿಂಗಯ್ಯನವರು ತಮ್ಮ ಅನುಭವಗಳನ್ನು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅಭಿವ್ಯಕ್ತಿಸುವ ಮೂಲಕ ಸಹೃದಯ ಲೋಕಕ್ಕೆ ಪರಿಚಿತರಾಗಿದ್ದಾರೆ. ಅವರ ಸಾಹಿತ್ಯಕ ಬರವಣಿಗೆಯನ್ನು ಈ ಮುಂದಿನಂತೆ ವಿವಿಧ ಮಜಲುಗಳಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ.

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಎನ್.ಬೋರಲಿಂಗಯ್ಯನವರು ಆಧುನಿಕ ಕನ್ನಡ ಸಾಹಿತ್ಯದ ಬರಹಗಾರರಲ್ಲಿ ಒಬ್ಬರು. ಇವರು ಗಾಂಧೀಜಿಯವರ ತತ್ವ ಸಿದ್ಧಾಂತಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಸಮಕಾಲೀನ ಸಮಾಜಕ್ಕೆ ಗಾಂಧೀಜಿಯವರ ಚಿಂತನೆಗಳ ಅವಶ್ಯಕತೆಗಳನ್ನು ಒತ್ತಿ ಹೇಳಿದ್ದಾರೆ. ಮತ್ತೊಂದೆಡೆ ಯುಗದ ಕವಿ, ಜಗದ ಕವಿ ಕುವೆಂಪುರವರ ಸಾಹಿತ್ಯವನ್ನು ಅಧ್ಯಯನ ಮಾಡಿ ಅವರ ಸಾಹಿತ್ಯ ಇಂದಿನ ಸಮಾಜದಲ್ಲಿ ಬೀರುತ್ತಿರುವ ಪ್ರಭಾವವನ್ನು ಕುರಿತಂತೆ ಎನ್.ಬೋರಲಿಂಗಯ್ಯನವರು ಗುರುತಿಸಿದ್ದಾರೆ. ಹೀಗಾಗಿ ಎನ್.ಬೋರಲಿಂಗಯ್ಯ ಅವರ ಸಾಹಿತ್ಯ ಇಂದು ಪ್ರಸ್ತುತವಾಗುತ್ತದೆ. ಅವರ ಬರವಣಿಗೆಯನ್ನು ಅಧ್ಯಯನದ ಅನುಕೂಲಕ್ಕಾಗಿ ೫ ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ವಿವಿಧ ಆಕರ ಮತ್ತು ಮೂಲ ಸಾಮಗ್ರಿಯನ್ನು ಅಧ್ಯಯನ ಮಾಡುವುದರ ಮೂಲಕ ಎನ್.ಬೋರಲಿಂಗಯ್ಯರವರ ಸಾಹಿತ್ಯ ಕೃತಿಗಳನ್ನು ವಿವಿಧ ನೆಲೆಗಳಲ್ಲಿ ಒರೆ ಹಚ್ಚಿ ಅವರ ಸಾಹಿತ್ಯದಲ್ಲಿರುವ ಗಟ್ಟಿತನವನ್ನು ಹೊರಗೆಡವುದು ನನ್ನ ಸಂಶೋಧನೆ ಪ್ರಬಂಧದ ಉದ್ದೇಶವಾಗಿರುತ್ತದೆ. ಅಧ್ಯಯನದ ಅನುಕೂಲಕ್ಕಾಗಿ ೫ ಅಧ್ಯಾಯಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ.

೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ.

೨. ಎನ್.ಬೋರಲಿಂಗಯ್ಯ ನವರ ಬದುಕು ಬರಹ.

೩. ಎನ್.ಬೋರಲಿಂಗಯ್ಯ ನವರ ಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆ.

೪. ಎನ್.ಬೋರಲಿಂಗಯ್ಯ ನವರ ಕೃತಿಗಳಲ್ಲಿ ಪ್ರತಿಪಾದಿಸುವ ತಾತ್ವಿಕತೆ.

೫. ಎನ್.ಬೋರಲಿಂಗಯ್ಯ ನವರ ಕೃತಿಗಳಲ್ಲಿ ವಸ್ತು, ಭಾಷೆ ಮತ್ತು ಶೈಲಿ.

ಅಧ್ಯಾಯ – ೨ರಲ್ಲಿ

ಎನ್. ಬೋರಲಿಂಗಯ್ಯನವರ ಬದುಕು – ಬರಹ

ಶ್ರೀಯುತರು ೧೯೬೮ರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿಯನ್ನು ಪ್ರಾರಂಭಿಸಿ ಆನಂತರ ಮೈಸೂರಿನ ಯುವರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಶ್ರೀಯುತರು ೧೯೮೯ರಲ್ಲಿ ಸ್ವಯಂ ನಿವೃತ್ತಿ ಪಡೆದ ಮೇಲೆ ಸರ್ಕಾರದ ನಿವೃತ್ತಿ ವೇತನವನ್ನು ತಿರಸ್ಕರಿಸಿ, ಲೋಹಿಯ ಚಿಂತನೆ, ಗಾಂಧಿ ವಿಚಾರಧಾರೆಯಿಂದ ಪ್ರೇರಿತರಾಗಿ ದಾರಿದೀಪ ಸಂಶೋಧನಾ ಕೇಂದ್ರ ಮತ್ತು ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸಿ ಸಂಶೋಧನಾತ್ಮಕ ಮತ್ತು ಶೈಕ್ಷಣಿಕ ಚಟುವಟಿಕೆಯಲ್ಲಿ ತೊಡಗಿಸಿ-ಕೊಂಡಿದ್ದಾರೆ. ಆಧುನಿಕರ ಅಕ್ಷರದ ಅಹಂ ಅನ್ನು ತೊರೆದು ನಮ್ಮ ಜ್ಞಾನಗ್ರಹಿಕೆಯ ನೆಲೆಗಳನ್ನು ತಮ್ಮದೇ ಆದ ನೆಲೆಯಲ್ಲಿ ಗುರುತಿಸುತ್ತಾ ಬಂದವರು. ಇವರು ೧೯೬೧ ರಿಂದ ೧೯೬೪ರ ದಶಕದಲ್ಲಿ ಬಿ.ಎ. ವಿದ್ಯಾರ್ಥಿಯಾಗಿದ್ದಾಗ ಜಿ.ಎಚ್.ನಾಯಕ್, ಪಿ.ಎಚ್.ಗೌಡ, ಸಣ್ಣಗುಡ್ಡಯ್ಯ, ಶಿವರಾಮಕಾರಂತ, ಟಿ.ವಿ.ಚಿಕ್ಕವೀರಯ್ಯ, ಕುವೆಂಪು, ಡಿ.ಆರ್.ನಾಗರಾಜ್, ಒ.ಎಲ್.ನಾಗಭೂಷಣ ಮುಂತಾದವರ ಪ್ರೀತಿ ಸ್ನೇಹ, ಪ್ರೋತ್ಸಾಹದಿಂದ ಬೆಳೆದು ಬಂದ ಎನ್.ಬೋರಲಿಂಗಯ್ಯನವರು ಅತ್ಯಂತ ಸರಳ ಜೀವನ ನಡೆಸುತ್ತಿದ್ದಾರೆ. ಅವರು ಸಾಹಿತ್ಯದಲ್ಲಿ ಪ್ರತಿಪಾದಿಸುವ ತತ್ವಾದರ್ಶದಂತೆ ಬದುಕುತ್ತಿರುವ ಅತಿವಿರಳ ಲೇಖಕರಲ್ಲಿ ಎನ್.ಬೋರಲಿಂಗಯ್ಯನವರು ಮಹಾನ್ ವ್ಯಕ್ತಿಯಾಗಿ ನಿಲ್ಲುತ್ತಾರೆ.

ಅಧ್ಯಾಯ – ೩ ರಲ್ಲಿ

ಎನ್.ಬೋರಲಿಂಗಯ್ಯನವರ ಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆ

೧.೧. ಕಾದಂಬರಿಗಳಲ್ಲಿ ಕೌಟುಂಬಿಕ ಪ್ರಜ್ಞೆ

'ಜವನಕ್ಕ' ಮತ್ತು **'ಕಡಿವಾಣ'** ಕಾದಂಬರಿಗಳೆರಡು ಒಂದು ಮತ್ತೊಂದರ ಮುಂದುವರೆದ ಭಾಗವಾಗಿ ಕಾಣಿಸಿಕೊಳ್ಳುತ್ತವೆ. **'ಜವನಕ್ಕ'** ಕಾದಂಬರಿಯಲ್ಲಿ ಮಹಾತ್ಮಾ

ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ಕಾದಂಬರಿಯೊಳಗೆ ತರುವ ಮೂಲಕ ವಾಸ್ತವತೆ ಮತ್ತು ಕನಸನ್ನು ಅನಾವರಣಗೊಳಿಸಿದ್ದಾರೆ. ಜವನಕ್ಕ ಸ್ವಯಂ ಕೃಷಿ ಮಾಡಿ ಸ್ವತಂತ್ರವಾಗಿ ಬದುಕನ್ನು ಸಾಗಿಸುವ ರೀತಿಯನ್ನು ಮತ್ತು ಮಹಿಳೆಯ ಬದುಕಿನ ವಿವಿಧ ಹೋರಾಟಗಳನ್ನು ಸ್ತ್ರೀವಾದಿ ನೆಲೆಯಲ್ಲಿ ತಿಳಿಸಿದ್ದಾರೆ.

ಜಾಗತೀಕರಣದ ಸಂದರ್ಭದಲ್ಲಿ ಹಳ್ಳಿಗಳ ಉದ್ಧಾರವನ್ನು ಕುರಿತಂತೆ ಗ್ರಾಮೀಣ ಮೂಲ ಸಂಸ್ಕೃತಿಯನ್ನು ಕಾಪಾಡಬೇಕಾದ, ಉಳಿಸಬೇಕಾದ ಮಾರ್ಗವನ್ನು ಹೇಳಿದ್ದಾರೆ. ಅಂದರೆ ದೇಶಿಯತೆಗೆ ನೀಡಬೇಕಾದ ಒತ್ತು ಹೇಗಿರಬೇಕು ಮತ್ತು ದೇಶಿಯತೆ/ದೇಶಿತನ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸುವ ರೀತಿಯನ್ನು ಎನ್.ಬೋರಲಿಂಗಯ್ಯರವರು ತಿಳಿಸಿದ್ದಾರೆ. ಗ್ರಾಮೀಣ ಬದುಕಿನ ಏಳು–ಬೀಳು ಪರಿಣಾಮಗಳನ್ನು ಕುರಿತಂತೆ **'ಜವನಕ್ಕ'** ಕಾದಂಬರಿ ಪ್ರತಿಪಾದಿಸುತ್ತದೆ.

೧.೨. ಕವನಗಳಲ್ಲಿ ಮಕ್ಕಳ ಪ್ರಜ್ಞೆ

'ಸೃಜನಸಿರಿ' ಕಾವ್ಯ ಸಂಕಲನ, ಇದೊಂದು ಮಕ್ಕಳ ಸಾಹಿತ್ಯ. ಕವಿಯು ತನ್ನ ಜೀವನದ ಬದುಕಿನ ಅನುಭವಗಳನ್ನು ಸಾಹಿತ್ಯ ಬೆಳವಣಿಗೆಯ ವಸ್ತುವಾಗಿ ಸ್ವೀಕರಿಸುತ್ತಾನೆ. ಹಾಗಾಗಿ ಎಲ್ಲದಕ್ಕೂ ಕುಟುಂಬದ ಪ್ರಭಾವ ಪ್ರೇರಣೆಗಳು ಇರುತ್ತವೆ. ಅಂತೆಯೇ ಎನ್.ಬೋರಲಿಂಗಯ್ಯ ಅವರ ಈ ಕಾವ್ಯಸಂಕಲನದಲ್ಲಿ ಕೌಟುಂಬಿಕ ಪ್ರಧಾನ ಕಾವ್ಯ ಮತ್ತು ಕೌಟುಂಬಿಕ ಪ್ರಪಂಚದ ಹೊರಗಿನ ಕಾವ್ಯ ಎಂದು ವಿಂಗಡಿಸಿಕೊಂಡು ಅಧ್ಯಯನ ಮಾಡಬಹುದಾಗಿದೆ. ಕುಟುಂಬ ಬದುಕು ಮತ್ತು ಸಮಾಜದಲ್ಲಿ ತಾನು ಕಂಡ ಸಂದರ್ಭಗಳು ಮತ್ತು ತಾನು ಎದುರಿಸಿದ ಸವಾಲುಗಳನ್ನು ಕುರಿತಂತೆ ಇಲ್ಲಿನ ಕವನಗಳು ವಸ್ತುವಾಗಿ ಉಳ್ಳವು.

೧.೩. ವಚನಗಳಲ್ಲಿ ವೈಚಾರಿಕ ಪ್ರಜ್ಞೆ

'ವಚನ ಕಟ್ಟಿದ ಅಲ್ಲಮ' ೧೨ ನೇ ಶತಮಾನದ ವಚನಕಾರರಲ್ಲಿ ಅಲ್ಲಮಪ್ರಭುವೂ ಒಬ್ಬ. ಅಲ್ಲಮಪ್ರಭು ತನ್ನ ವಚನಗಳಿಂದ ಚಿರಪರಿಚಿತರಾಗಿದ್ದಾನೆ. ಇವನ ವಚನಗಳು ವೈಚಾರಿಕತೆಯನ್ನು ಬಿಂಬಿಸುತ್ತವೆ. ಎನ್.ಬೋರಲಿಂಗಯ್ಯನವರು ವಚನಗಳನ್ನು ಷಟ್‌ಸ್ಥಲ–ಗಳಾಗಿ ವಿಂಗಡಿಸಿಕೊಳ್ಳದೆ ಅಲ್ಲಮಪ್ರಭುವನ್ನು ಒಬ್ಬ ಸಮಾಜ ವಿಜ್ಞಾನಿಯಾಗಿ, ಒಬ್ಬ ತತ್ವ ಚಿಂತಕನನ್ನಾಗಿ, ದಾರ್ಶನಿಕನನ್ನಾಗಿ, ಜ್ಞಾನಭಂಡಾರದ ಗಣಿಯಾಗಿ ನೋಡಿದ್ದಾರೆ. ಅಲ್ಲಮಪ್ರಭುವಿನ ವಚನಗಳ ತಾತ್ವಿಕತೆಯನ್ನು ಅದರ ಸಾರವನ್ನು ಸಮಾಜಕ್ಕೆ ತಿಳಿಸುವುದು ಎನ್.ಬೊರಲಿಂಗಯ್ಯನವರ ಕೃತಿಯ ಉದ್ದೇಶವಾಗಿದೆ.

೧.೪. ಪ್ರಬಂಧಗಳಲ್ಲಿ ಲೈಂಗಿಕ ಪ್ರಜ್ಞೆ

'ಶಿಕ್ಷಣ ಮತ್ತು ಲೈಂಗಿಕ ಜೀವನ' ಈ ಕೃತಿಯು ಪ್ರಬಂಧ ಸಂಕಲನವಾಗಿದೆ. ಈ ಕೃತಿಯಲ್ಲಿ ನಾಲ್ಕು ಪ್ರಬಂಧಗಳಿವೆ. ೧. **ಸಮಾನತೆ ಮತ್ತು ಮಹಿಳೆ** ೨. **ಲೈಂಗಿಕ ಶಿಕ್ಷಣ** ೩. **ವಿವಾಹ ಪೂರ್ವ ಲೈಂಗಿಕ ಸಂಬಂಧಗಳ ಅವಶ್ಯಕತೆ ಮತ್ತು ಸ್ವರೂಪ** ೪. **ಮದುವೆ** ಈ ಲೇಖನಗಳ ಒಟ್ಟು ನೋಟವು ಈ ಕೆಳಕಂಡಂತಿದೆ. ಅಂದರೆ ಭಾರತೀಯ ಸಮಾಜದಲ್ಲಿ ವಿವಾಹ ಒಂದು ಸಾಮಾಜಿಕ ಪದ್ಧತಿಯಾಗಿದೆ. ನಮ್ಮ ಸಮಾಜದಲ್ಲಿ ವಿವಾಹವೆಂಬುದರ ಮೂಲಕ ವ್ಯಕ್ತಿಯು ಕುಟುಂಬವನ್ನು ಪ್ರವೇಶಿಸುತ್ತಾನೆ. ಕುಟುಂಬದಲ್ಲಿ ಮಹಿಳೆಯ ಸ್ಥಾನಮಾನ ಮತ್ತು ಇಂದಿನ ಸಮಾಜಕ್ಕೆ ಲೈಂಗಿಕ ಶಿಕ್ಷಣದ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಇಲ್ಲಿ ಸ್ತ್ರೀವಾದದ ನೆಲೆಯೊಂದಿಗೆ ವ್ಯಕ್ತಿಯ ಖಾಸಗಿ ಬದುಕಿಗೆ ಬೇಕಾದ ಲೈಂಗಿಕ ಶಿಕ್ಷಣದ ಪ್ರಸ್ತುತತೆಯನ್ನು ತಿಳಿಸಿದ್ದಾರೆ.

ಸಮಾನತೆ, ಸ್ವಾತಂತ್ರ್ಯವನ್ನು ಸಮಾಜದಲ್ಲಿ ಕಾಣಬೇಕಾದರೆ ಎಲ್ಲರೂ ಶಿಕ್ಷಣ ಪಡೆಯಬೇಕು. ಇದು ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಎನ್.ಬೋರಲಿಂಗಯ್ಯನವರು ತಿಳಿಸಿದ್ದಾರೆ ಮತ್ತು ಶಿಕ್ಷಣ ಮತ್ತು ಅನಕ್ಷರತೆಯ ಒಳಿತು-ಕೆಡಕುಗಳ ನೋಟವನ್ನು ತೆರೆದಿಡುವ ಪ್ರಯತ್ನ ಮಾಡಿದ್ದಾರೆ.

೧.೫. ವಿಮರ್ಶಾ ಲೇಖನಗಳಲ್ಲಿ ನವೋದಯ ಪ್ರಜ್ಞೆ

'ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು' ಈ ಕೃತಿಯು ವಿಮರ್ಶಾ ಕೃತಿಯಾಗಿದೆ. ನವೋದಯ ಸಾಹಿತ್ಯಿಕ ವಿಮರ್ಶೆಯು ಸಮಾಜಮುಖಿಯಾದದ್ದು. ಹಾಗಾಗಿ ಸಮಾಜ ಮತ್ತು ಸಾಹಿತ್ಯವನ್ನು ಕುರಿತ ವಿಮರ್ಶೆಗಳು ವಿಮರ್ಶಕರಿಂದ ಹೊರಹೊಮ್ಮಿದವು. ಅವು ಸಮಕಾಲೀನ ಸಮಾಜಕ್ಕೆ ಸಂಬಂಧಿಸಿದವು ಸಮಾಜಮುಖಿ ದೃಷ್ಟಿಕೋನದ ವಿಮರ್ಶಕರಾಗಿ ಕುವೆಂಪು, ದ.ರಾ.ಬೇಂದ್ರೆ, ಮಾಸ್ತಿ ಮೊದಲಾದವರು ಪ್ರಮುಖರು.

ನವೋದಯ ವಿಮರ್ಶಕರಿಂದ ಪ್ರಭಾವಿತರಾದ ಎನ್.ಬೋರಲಿಂಗಯ್ಯನವರು ಹೊಸಗನ್ನಡ ಸಾಹಿತ್ಯವನ್ನು ಕುರಿತಂತೆ ಬಂದಂತಹ ಆಧುನಿಕ ಪೂರ್ವ ಸಾಹಿತ್ಯ ವಿಮರ್ಶೆ ಮತ್ತು ವಿಮರ್ಶಾ ಬರಹಗಳನ್ನು ತಮ್ಮ ವಿಮರ್ಶೆಯ ವ್ಯಾಪ್ತಿಯಲ್ಲಿ ತರುವಂತಹ ಪ್ರಯತ್ನ ಮಾಡಿದ್ದಾರೆ. ಅಂದರೆ ಆಧುನಿಕ ಕನ್ನಡ ಕಾವ್ಯ, ಕಥೆ, ಕಾದಂಬರಿ, ನಾಟಕ, ವಚನ, ಪ್ರಬಂಧಗಳನ್ನು ಕುರಿತಂತೆ ಬೇರೆ ಬೇರೆ ವಿಮರ್ಶಾ ಲೇಖನಗಳಿವೆ. ನವೋದಯ ಸಾಹಿತ್ಯದ ವಿಮರ್ಶಾ ಮಾನದಂಡ ಮತ್ತು ನವ್ಯ ಸಾಹಿತ್ಯದ ವಿಮರ್ಶಾ ಮಾನದಂಡಗಳೆರಡು ಇವರ

ವಿಮರ್ಶಾ ಲೇಖನಗಳಲ್ಲಿ ಚರ್ಚಿತವಾಗಿದೆ. ಒಟ್ಟಿನಲ್ಲಿ ಇವರ ಸಾಹಿತ್ಯ ವಿಮರ್ಶೆ ಮತ್ತು ದೃಷ್ಟಿಕೋನ ನವೋದಯದ ಅದರಲ್ಲೂ ಕುವೆಂಪು ಸಾಹಿತ್ಯ ಶ್ರೇಷ್ಠ ಎಂಬ ಮನೋಧರ್ಮದ ಹಿನ್ನೆಲೆಯಲ್ಲಿ ರೂಪಿತವಾಗಿದೆ.

ಅಧ್ಯಾಯ – ೪ರಲ್ಲಿ

ಕೃತಿಗಳಲ್ಲಿ ಪ್ರತಿಪಾದಿಸುವ ತಾತ್ವಿಕತೆ

ಪ್ರಸ್ತುತ ಸಮಾಜದ ಸ್ಥಿತಿಗತಿಯನ್ನು ಕಣ್ಣಾರೆ ಕಂಡ ಎನ್.ಬೋರಲಿಂಗಯ್ಯನವರು ಸಮಾಜವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಪ್ರಯತ್ನವನ್ನು ಸಾಹಿತ್ಯ ಕೃತಿಗಳಲ್ಲಿ ಮಾಡಿದ್ದಾರೆ. ಎನ್.ಬೋರಲಿಂಗಯ್ಯನವರ ಕಾದಂಬರಿಗಳಲ್ಲಿ ಮಹಿಳೆಯ ಹೋರಾಟದ ವಿಧಾನವನ್ನು ಸ್ತ್ರೀವಾದದ ಸಮೀಕರಣದೊಂದಿಗೆ ತಿಳಿಸುತ್ತಾ ಗ್ರಾಮೀಣ ಸಮಾಜ ಕಲ್ಪನೆ, ಅಭಿವೃದ್ಧಿ, ಮೂಲಸಂಸ್ಕೃತಿ ಅಡೆ–ತಡೆಗಳು, ನಿವಾರಣೆಯ ಮಾರ್ಗಗಳನ್ನು ತಿಳಿಸಿದ್ದಾರೆ. ಪ್ರಬಂಧಗಳಲ್ಲಿ ಸಮಾನತೆ, ಸ್ವಾತಂತ್ರ್ಯವನ್ನು ಕಾಣಬೇಕಾದರೆ ಅದು ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಹೇಳುತ್ತಾ ಶಿಕ್ಷಣ ಇದ್ದಾಗ ಮಾತ್ರ ಸಮಾಜ ಪರಿವರ್ತನೆ ಸಾಧ್ಯ ಎಂದು ಹೇಳುತ್ತಾರೆ. ಕಾವ್ಯದಲ್ಲಿ ಕುಟುಂಬದ ಒಳ ಮತ್ತು ಹೊರಗಿನ ಸಂದರ್ಭಗಳನ್ನು ದಾಖಲಿಸುತ್ತಾರೆ. ವಿಮರ್ಶೆ ಕೃತಿಯಲ್ಲಿ ನವೋದಯ ವಿಮರ್ಶೆಯ ಗೊತ್ತುಗುರಿಗಳು ಮತ್ತು ಅವುಗಳ ಪ್ರಸ್ತುತತೆಯನ್ನು ತಿಳಿಸುತ್ತಾರೆ.

ಅಧ್ಯಾಯ – ೫ರಲ್ಲಿ

ಕೃತಿಗಳಲ್ಲಿ ವಸ್ತು ಮತ್ತು ಭಾಷೆ

ಸಮಾಜದಲ್ಲಿ ಎಲ್ಲಾ ರೀತಿಯ ದುಷ್ಪತನಗಳಿಗೆ ಸಿಲುಕಿ ನಲುಗಿ ಹೋಗುವ ಹಳ್ಳಿಗಾಡಿನ ಹೆಣ್ಣುಮಗಳೊಬ್ಬಳು ಈ ಸಮಾಜದ ಎಲ್ಲಾ ಹಂಗುಗಳಿಂದ ದೂರವಾಗಿ ಎಲ್ಲವನ್ನು ತೊರೆದು ಸ್ವತಂತ್ರವಾಗಿ ಬದುಕನ್ನು ಕಟ್ಟಿಕೊಂಡ ಪರಿ ಈ ಕಾದಂಬರಿಗಳಲ್ಲಿದೆ. ಈ ಕಾದಂಬರಿಗಳಲ್ಲಿನ ಭಾಷೆ, ಹಾಸನ ಜಿಲ್ಲೆಯ ಹಳ್ಳಿಗಾಡಿನ ಪರಿಸರಕ್ಕೆ ಸಂಬಂಧಿಸಿದಾಗಿದ್ದು, ಈ ಭಾಷೆಯನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ತರುವುದು ವಿಶಿಷ್ಟವಾಗಿ ಕಂಡುಬರುತ್ತದೆ. ಅರೆಮಲೆನಾಡು ಪ್ರಾಂತ್ಯಕ್ಕೆ ಸೇರಿದ ಪ್ರಾದೇಶಿಕ ಭಾಷೆ ಮತ್ತು ಸಂಸ್ಕೃತಿಯ ಚಿತ್ರಣ ಈ ಕಾದಂಬರಿಗಳಲ್ಲಿ ದಟ್ಟವಾಗಿ ಎದ್ದು ಕಾಣಿಸುತ್ತದೆ.

ಸಮಾಜಕ್ಕೆ ಮಾದರಿಯಾಗಿರುವ ಎನ್.ಬೋರಲಿಂಗಯ್ಯರವರ ಚಿಂತನೆಗಳು, ಆಲೋಚನೆಗಳು ಸಮಾಜ ಸುಧಾರಣೆ ಮಾಡುವಲ್ಲಿ ಸಹಕಾರಿಯಾಗುತ್ತದೆ ಎಂಬುದರಲ್ಲಿ

ಯಾವುದೇ ಸಂದೇಹವಿಲ್ಲ. ಹೀಗಾಗಿ ಅವರ ಚಿಂತನೆಗಳು ಮೌಲ್ಯಯುತವಾದುದ್ದಾಗಿವೆ. ಒಟ್ಟಾರೆಯಾಗಿ ಎನ್.ಬೋರಲಿಂಗಯ್ಯರವರ ಸಾಹಿತ್ಯ ಇಂದು ಹೆಚ್ಚಾಗಿ ಪ್ರಚಾರದಲ್ಲಿಲ್ಲದ್ದರೂ, ಜನಪ್ರಿಯತೆಯ ಉತ್ತುಂಗದಲ್ಲಿಲ್ಲದಿದ್ದರೂ ಕಾಡಿನಲ್ಲಿರುವ ಮಲ್ಲಿಗೆಯ ಪರಿಮಳದಂತೆ ಸೌರಭವನ್ನು ಸೂಸುತ್ತಿದೆ. ಎಲೆಮರೆಯ ಕಾಯಿಯಂತೆ ಪ್ರಚಾರ ಬಯಸದ ಎನ್.ಬೋರಲಿಂಗಯ್ಯರವರ ಸರಳ ವ್ಯಕ್ತಿತ್ವ ಬರಹದಂತೆ ಬದುಕಿದೆ ಎಂಬುದನ್ನು ಪ್ರತಿಪಾದಿಸುತ್ತದೆ.

ಅಧ್ಯಾಯ – ೨

ಎನ್.ಬೋರಲಿಂಗಯ್ಯ ಅವರ ಬದುಕು–ಬರಹ

ಹೊಸಗನ್ನಡ ಸಾಹಿತ್ಯದ ಬರಹಗಾರರಲ್ಲಿ ಎನ್.ಬೋರಲಿಂಗಯ್ಯ ಅವರು ಒಬ್ಬರು. ಹೊಸಗನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾವ್ಯ, ವಿಮರ್ಶೆ, ಪ್ರಬಂಧ, ಕಾದಂಬರಿ ಹೀಗೆ ಹಲವಾರು ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆ. ಹಾಗಾಗಿ ಎನ್.ಬೋರಲಿಂಗಯ್ಯ ಅವರು ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಮಹತ್ವದ ಬರಹಗಾರರಾಗಿ ನಿಲ್ಲುತ್ತಾರೆ.

ಎನ್.ಬೋರಲಿಂಗಯ್ಯ ಅವರು ೦೭–೦೮–೧೯೩೯ ರಂದು ಹಾಸನ ಜಿಲ್ಲೆಯ ಚನ್ನರಾಯ ಪಟ್ಟಣ ತಾಲ್ಲೂಕಿನ ಹಿರಿಸಾವೆಯ ನಿಂಬೆಹಳ್ಳಿ ಗ್ರಾಮದಲ್ಲಿ ತಂದೆ ನಿಂಗೇಗೌಡ, ತಾಯಿ ಮಾಯಮ್ಮ (ಸಣ್ಣ ತಾಯಮ್ಮ) ದಂಪತಿಗಳ ಐದನೆಯ ಮಗನಾಗಿ ಜನಿಸಿದರು.

ಇವರದು ಅವಿಭಕ್ತ ಕುಟುಂಬವಾಗಿದ್ದು ಹತ್ತು ಜನರು ಒಂದೇ ಮನೆಯಲ್ಲಿ ವಾಸವಾಗಿದ್ದರು. ಇವರದು ಕೃಷಿ ಪ್ರಧಾನವಾದ ಕುಟುಂಬವಾಗಿದ್ದು, ಕೃಷಿ ಅವರ ಮೂಲ ವೃತ್ತಿಯಾಗಿತ್ತು. ಪಶುಸಂಗೋಪನೆ ಅಂದರೆ ಕುರಿ, ಮೇಕೆ, ಕೋಳಿ ಸಾಕಾಣಿಕೆ ಇವರ ಪ್ರವೃತ್ತಿಯಾಗಿತ್ತು. ಕುಟುಂಬದ ಮತ್ತು ವ್ಯವಸಾಯದ ಎಲ್ಲ ಕೆಲಸ ಕಾರ್ಯಗಳಲ್ಲಿಯೂ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದರು.

ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಸಿಡುಬು, ಕಾಲರಾ, ದಡಾರದಂತಹ ಹಲವಾರು ಸಾಂಕ್ರಾಮಿಕ ರೋಗಗಳು ಕಾಣಿಸಿಕೊಳ್ಳುತ್ತಿದ್ದವು. ಬಾಲ್ಯದಲ್ಲಿ ಎನ್.ಬೋರಲಿಂಗಯ್ಯ ಅವರು ಸಿಡುಬು ರೋಗಕ್ಕೆ ತುತ್ತಾಗಿ, ಚಿಕಿತ್ಸೆಯ ಅಲಭ್ಯತೆಯ ಪರಿಣಾಮವಾಗಿ ಒಂದು ಕಣ್ಣಿನ ದೃಷ್ಠಿಯನ್ನು ಕಳೆದುಕೊಂಡರು. ಇದರಿಂದಾಗಿ ಪ್ರಾರಂಭದಿಂದಲೇ ವಿದ್ಯಾಭ್ಯಾಸವು ಒಂದು ಸವಾಲಾಯಿತು. ಓದಲು, ಅಕ್ಷರ ಕಲಿಯಲು ಪ್ರಯಾಸಪಡಬೇಕಾಯಿತು.

ವಿದ್ಯಾಭ್ಯಾಸ – ಹಾಸನ ಜಿಲ್ಲೆ ಚನ್ನರಾಯ ಪಟ್ಟಣ ತಾಲ್ಲೂಕಿನ ಮಾದಲಗೆರೆಯಲ್ಲಿ ಲಿಂಗಾಯಿತ ಅರ್ಚಕ ಕುಟುಂಬವಿತ್ತು. ಈ ಲಿಂಗಾಯತ ಮಠವು ಆ ಪ್ರಾಂತ್ಯದ ಎಲ್ಲ ಮಕ್ಕಳಿಗೆ ವಿದ್ಯಾರ್ಜನೆಯನ್ನು ಮಾಡುತ್ತಿತ್ತು. ಬೋರಲಿಂಗಯ್ಯನವರೂ ಕೂಡ ಈ ಲಿಂಗಾಯಿತ ಮಠದಲ್ಲಿಯೇ ಔಪಚಾರಿಕವಾಗಿ ತಮ್ಮ ಪ್ರಾರಂಭಿಕ ಹಂತದ ಅಕ್ಷರಾಭ್ಯಾಸವನ್ನು ಕಲಿತರು.

ಇದೇ ಗ್ರಾಮದ ಮೂಡ್ಲಿಗಿರಿಯಪ್ಪ ಎಂಬುವರು ಶಿಕ್ಷಿತರಾಗಿದ್ದು, ಕನ್ನಡ ಸಾಹಿತ್ಯದ ಕಂದ ಪದ್ಯಗಳು, ಮಟ್ಟುಗಳನ್ನು ಸೊಗಸಾಗಿ ಹಾಡುತ್ತಿದ್ದರು. ಜೈಮಿನಿ ಭಾರತ, ನಳ ಚರಿತ್ರೆ,

ಹರಿಭಕ್ತಸಾರ ಹೆಳವನಕಟ್ಟೆ ಗಿರಿಯಮ್ಮಳ 'ಚಂದ್ರಹಾಸ ಕಥೆ' ಮೊದಲಾದವುಗಳನ್ನು ಬಾಯಿಪಾಠದ ಮುಖಾಂತರ ಬೋರಲಿಂಗಯ್ಯನವರಿಗೆ ಕಲಿಸಿದರು. ಇವರು ಒಳ್ಳೆಯ ಗಮಕಿಯಾಗಿದ್ದರು.

ನಂತರ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಕಲ್ಕೆರೆಯ ಕಡಗಿ–ಹಳ್ಳಿಯಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೪ನೇ ತರಗತಿ ಪೂರೈಸಿ, ೫ ಮತ್ತು ೬ನೇ ತರಗತಿಯನ್ನು ತುರುವೇಕೆರೆಯ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಪ್ರವೇಶ ಪಡೆದು. ಈ ಶಾಲೆಯಲ್ಲಿ ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಮುಗಿಸಿದರು. ಈ ಶಾಲೆಯಲ್ಲಿ ಬೆಳಿಗ್ಗೆ ೭ ರಿಂದ ೧೧ ರ ವೇಳೆಗೆ ಮಾಧ್ಯಮಿಕ ತರಗತಿಗಳು, ೧೧ ರಿಂದ ಸಂಜೆ ೫ರ ವೇಳೆಯವರೆಗೆ ಪ್ರೌಢ ಶಾಲೆಯ ತರಗತಿಗಳು ನಡೆಯುತ್ತಿದುದು ವಿಶೇಷವಾಗಿತ್ತು. ಹಾಸನದಲ್ಲಿ ಪದವಿಪೂರ್ವ ಶಿಕ್ಷಣವನ್ನು ವಿಜ್ಞಾನ ವಿಭಾಗದಲ್ಲಿ ಪೂರೈಸಿದರು. ನಂತರ ತುಮಕೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನದ ವಿಭಾಗದಲ್ಲಿ ಪದವಿ ಪೂರ್ಣಗೊಳಿಸಿದರು. ಸಾಹಿತ್ಯಾಸಕ್ತಿ ಮತ್ತು ಮಾತೃಭಾಷಾ ಶಿಕ್ಷಣದ ಒಲವಿನಿಂದ ಪುನಃ ಕಲಾ ವಿಭಾಗಕ್ಕೆ ಅದೇ ಕಾಲೇಜಿನಲ್ಲಿ ಪ್ರವೇಶಾತಿ ಪಡೆದು ಪ್ರಥಮ ದರ್ಜೆಯಲ್ಲಿ ಪದವಿ ಪೂರೈಸಿದರು. ಕನ್ನಡ, ಸಮಾಜ ಶಾಸ್ತ್ರ, ರಾಜ್ಯಶಾಸ್ತ್ರ ಇವರ ಐಚ್ಛಿಕ ವಿಷಯಗಳಾಗಿದ್ದವು. ಈ ಸಂದರ್ಭದಲ್ಲಿ ಪ್ರಾಧ್ಯಾಪಕರಾಗಿದ್ದ ಎಚ್.ಜಿ.ಸಣ್ಣಗುಡ್ಡಯ್ಯ ಅವರ ಮಾರ್ಕ್ಸ್‌ವಾದಿ ಚಿಂತನೆಯೂ, ಜಿ.ಎಸ್.ಸಿದ್ದಲಿಂಗಯ್ಯ ಅವರ ವಿಚಾರ ವಿಮರ್ಶೆಗಳ ಪ್ರಭಾವಕ್ಕೊಳಗಾದರು.

ನಂತರ ಸ್ನಾತಕೋತ್ತರ ಪದವಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿಯಲ್ಲಿ ಮುಗಿಸಿದರು. ಈ ಅವಧಿಯಲ್ಲಿ ಸಾಹಿತ್ಯದೊಂದಿಗೆ ಕುಮಾರ ವ್ಯಾಸನ ಭಾರತ, ಅಮರಕೋಶ ಮೊದಲಾದ ಕೃತಿಗಳನ್ನು ಅಧ್ಯಯನ ಮಾಡಿದರು. ಪಾಧ್ಯಾಪಕರಾದ ಎಲ್.ಬಸವರಾಜು, ಡಿ.ಎಲ್.ನರಸಿಂಹಚಾರ್ಯರು, ತೀ.ನಂ.ಶ್ರೀಕಂಠಯ್ಯ ಅವರ ಬೋಧನೆ, ಉಪನ್ಯಾಸ, ಚರ್ಚೆ ಸಂವಾದಗಳು ಇವರನ್ನು ಸಾಹಿತ್ಯದಲ್ಲಿ ಹೆಚ್ಚು ಕ್ರಿಯಾಶೀಲರಾಗಿ ತೊಡಗುವಂತೆ ಪ್ರೇರಣೆ ನೀಡಿದವು. ವಿಶೇಷವಾಗಿ ಎಲ್.ಬಸವರಾಜುರವರ ಪ್ರೋತ್ಸಾಹ ವಿದ್ಯಾರ್ಥಿ ದೆಸೆಯಲ್ಲಿಯೇ ಸಿಕ್ಕಿತು.

ವೃತ್ತಿ – ಸ್ನಾತಕೋತ್ತರ ಪದವಿ ಪಡೆದ ಎನ್.ಬೋರಲಿಂಗಯ್ಯ ಅವರು ಮೈಸೂರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜು, ಮಹಾರಾಜ ಕಾಲೇಜು ಮತ್ತು ಯುವರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ ಸ್ವಯಂ ನಿವೃತ್ತಿಯನ್ನು ಪಡೆದರು.

ರಂಗಭೂಮಿ ಮತ್ತು ನಾಟಕಗಳಲ್ಲಿ ಇವರಿಗೆ ಆಸಕ್ತಿಯಿತ್ತು. ಅದರಲ್ಲಿಯೂ ಪೌರಾಣಿಕ ನಾಟಕಗಳು ಅವರಿಗೆ ಅಭಿರುಚಿಯಾಗಿದ್ದವು. ಮಾಸ್ಟರ್ ಹಿರಣ್ಣಯ್ಯ ಅವರು ರಚಿಸಿದ ಲಂಚಾವತಾರ, ದೇವದಾಸಿ ನಾಟಕಗಳನ್ನು ನೋಡಿ, ಕಲಿತು ತಮ್ಮ ಗ್ರಾಮದ ಜನರಿಗೆ ತರಬೇತಿ ನೀಡಿ, ಪ್ರಯೋಗ ಮಾಡಿದ್ದು ವಿಶೇಷವಾಗಿತ್ತು.

ಸ್ತ್ರೀವಾದಿ ಚಿಂತಕರಾಗಿದ್ದರು – ಎಲ್ಲ ಕ್ಷೇತ್ರದಲ್ಲಿಯೂ ಸಮಾನತೆಯನ್ನು ಬಯಸುವ ಬೋರಲಿಂಗಯ್ಯನವರು ಮನೆಗೆಲಸದಲ್ಲಿ ಮಹಿಳೆ–ಪುರುಷ ಎಂಬ ತಾರತಮ್ಯ ಮಾಡದೆ ಸಮಾನವಾಗಿ ದುಡಿಯುವುದು, ಒಂದೇ ಕುಟುಂಬದಲ್ಲಿ ಇಬ್ಬರು ಸರ್ಕಾರಿ ನೌಕರರಾಗಿ ದುಡಿದು ಸಂಪತ್ತು ಕ್ರೂಢೀಕರಿಸುವುದು ಸರಿಯಲ್ಲವೆಂದು ನಿರ್ಧರಿಸಿ ಸ್ವಯಂ ನಿವೃತ್ತಿಯನ್ನು ಪಡೆದು ತಮ್ಮ ಶ್ರೀಮತಿಯವರ ಉದ್ಯೋಗಕ್ಕೆ ಆಸರೆಯಾಗಿ, ಆದರ್ಶವಾಗಿ ಸರಳಜೀವನಕ್ಕಿಡಿದ ಕನ್ನಡಿಯಂತೆ ಬದುಕಿರುವಬೋರಲಿಂಗಯ್ಯನವರು ಬದುಕು ನಿಜಕ್ಕೂ ಶ್ಲಾಘನೀಯವಾದುದು.

ಮೈಸೂರಿನ ವಸಂತನಗರದಲ್ಲಿ ದಾರಿದೀಪ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯನ್ನು ತೆರೆದು ಬಡವರ ಮಕ್ಕಳಿಗೆ ಉಚಿತವಾಗಿ ಶಿಕ್ಷಣವನ್ನು ನೀಡುವುದರೊಂದಿಗೆ ದಾರಿದೀಪ ಪ್ರಕಾಶನ ಸಂಸ್ಥೆಯನ್ನು ಕಟ್ಟಿ ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಕನ್ನಡ ಸಾಹಿತ್ಯಕ್ಕೆ ತಮ್ಮದೆ ಆದ ಕೊಡುಗೆಯನ್ನು ನೀಡಿದ್ದಾರೆ.

ಸಾಹಿತ್ಯ ಬರವಣಿಗೆ

ಕಾರಂತರ 'ಹುಚ್ಚುಮನಸ್ಸಿನ ಹತ್ತು ಮುಖಗಳು' ಆತ್ಮಕಥನ ಇವರಲ್ಲಿ ಸಾಹಿತ್ಯದ ಅಬಿರುಚಿ ಬೆಳೆಯಲು, ಹೆಚ್ಚಾಗಲು ಕಾರಣವಾಯಿತು. ಸಾಹಿತ್ಯ ಅಧ್ಯಯನ, ಮಾತೃಭಾಷೆಯ ಒಲವು, ಕನ್ನಡ ಸಾಹಿತ್ಯದ ಕವಿಗಳು, ಬರಹಗಾರರು, ಆಧ್ಯಾತ್ಮಿಕ ಚಿಂತಕರು, ತತ್ವಜ್ಞಾನಿಗಳ ಪ್ರಭಾವಕ್ಕೆ ಎನ್.ಬೋರಲಿಂಗಯ್ಯ ಒಳಗಾದರು. ಹೊಸಗನ್ನಡ ಸಾಹಿತ್ಯದ ಕಾವ್ಯ, ಕಾದಂಬರಿ ಪ್ರಬಂಧ ವಿಮರ್ಶೆ ಹೀಗೆ ಹಲವಾರು ಮಜಲುಗಳಲ್ಲಿ ಕೃಷಿಗೈಯುವುದರ ಮೂಲಕ ಇವರು ಸಾಹಿತ್ಯ ವಲಯದೊಳಗೆ ತಮ್ಮದೇ ರೀತಿಯಲ್ಲಿ ಗುರುತಿಸಿಕೊಂಡಿದ್ದಾರೆ.

ಎನ್.ಬೋರಲಿಂಗಯ್ಯನವರ ಕೃತಿಗಳು

ಕಾನೂರು ಹೆಗ್ಗಡತಿ ವಿವೇಚನೆ ಸಂಕರ್ಷ	– ೧೯೭೨ – ೨೦೧೦
ಸಂಕರ್ಷ	– ೧೯೭೩
ಹಾಸು–ಹೊಕ್ಕು	– ೧೯೮೨
ಶಿಕ್ಷಣ ಮತ್ತು ಲೈಂಗಿಕ ಜೀವನ	– ೧೯೮೨
ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು	– ೨೦೦೫
ವಚನ ಕಟ್ಟಿದ ಅಲ್ಲಮ	– ೨೦೦೫
ಜವನಕ್ಕ	– ೨೦೧೧
ಕಡಿವಾಣ	– ೨೦೧೪

ಸಂಪದಾಕ ಕೃತಿಗಳು

ಕ್ರಾಂತಿ ಕಹಳೆ	– ೧೯೭೬

(ಕುವೆಂಪು ಅವರ ಎರಡು ವೈಚಾರಿಕ ಪ್ರಬಂಧಗಳು)

ಗ್ಯಾಟ್ ಒಪ್ಪಂದ	– ೧೯೯೪
ಸಾಕ್ಷರತೆ: ಪರಿಕಲ್ಪನೆ ಮತ್ತು ಪ್ರಯೋಗ	– ೧೯೯೫
ಕೇಂದ್ರ ಮತ್ತು ರಾಜ್ಯ ಆಯವ್ಯಯ	– ೧೯೯೫

ಅಧ್ಯಾಯ – ೩

ಎನ್.ಬೋರಲಿಂಗಯ್ಯನವರ ಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆ

೩.೧. ಕಾದಂಬರಿಗಳಲ್ಲಿ ಕೌಟುಂಬಿಕ ಪ್ರಜ್ಞೆ

ಎನ್.ಬೋರಲಿಂಗಯ್ಯನವರು ಕಳೆದ ಹಲವು ದಶಕಗಳಿಂದ ಮೈಸೂರಿನಲ್ಲಿ ನೆಲೆಸಿದ್ದಾರೆ. ಆದರೆ ಅವರ ಮೈ–ಮನಸ್ಸು–ಹೃದಯಗಳು ಹಾಸನ ಜಿಲ್ಲೆಯ ಹಳ್ಳಿಗಳಲ್ಲಿ ಕಳೆದುಹೋಗಿವೆ. ಅಷ್ಟೇಕೆ, ಆ ಹಳ್ಳಿಗಳು ಅವರ ಸಂಗಾತಿಗಳಾಗಿ ಅವರ ಸಂಗಡವೇ ಉಳಿದುಕೊಂಡಿವೆ. ಅದಕ್ಕಿಂತ ಮುಖ್ಯವಾಗಿ ಅವು ಅವರ ಸಂಗಡವೇ ಅವರಂತೆಯೇ ಆರೋಗ್ಯಕರವಾಗಿ ಬೆಳೆದಿವೆ, ಬದಲಾಗಿವೆ. ಹತ್ತಿರವಾದ ಎರಡು ಪೀಳಿಗೆಗಳ ಹಲವು ಲೇಖಕರಿಗೆ ಆಗಿರುವಂತೆ, ಇವರಲ್ಲಿ ಹಳ್ಳಿಗಳು ಕಳೆದ ಕಾಲದ ಸಾಮರಸ್ಯ–ಮುಗ್ಧತೆಗಳು ತುಂಬಿದ ತವರುಗಳಲ್ಲ. ಹಾಗೆಂದು ಪಟ್ಟಣಗಳ ನಾಗರಿಕರಿಗೆ ಮತ್ತು ಅವರಿಂದ ಪ್ರಭಾವಿತರಾದ ಹಳ್ಳಿಗರಿಗೆ ಕಂಡಿರುವಂತೆ ಮೂಢನಂಬಿಕೆ ಮತ್ತು ಬರ್ಬರತೆಗಳ ತವರುಮನೆಯೂ ಅಲ್ಲ. ಮಾರ್ಕ್ಸ್ ಹೇಳುವ 'ವಿಲೇಜ್ ಈಡಿಯಸಿ'ಯ ಸಂಕೇತವೂ ಅಲ್ಲ. ವಾಸ್ತವದಲ್ಲಿ ಆ ಹಳ್ಳಿಗಳು ಈಗ ಹಾಗೆ ಇವೆಯೇ ಎನ್ನುವುದು ಕೂಡ ಬೋರಲಿಂಗಯ್ಯನವರಿಗೆ ಮುಖ್ಯವಲ್ಲ. ಕನಸುಗಳು ವಾಸ್ತವಕ್ಕೆ ಅಂಜುವುದಿಲ್ಲ. ಈ ಹಳ್ಳಿಗಳು ಇರಬೇಕಾದುದನ್ನು ಇರಬಹುದಾದ್ದನ್ನು ತೋರಿಸುತ್ತವೆಯೇ ವಿನಾ ಇರುವುದನ್ನಲ್ಲ. ಅದೂ ಸುಳ್ಳು. ನೋಡವ ಕಣ್ಣುಗಳಿದ್ದರೆ ಅಂದಿನ ಇಂದಿನ ರೈತನ ಜೀವನಕ್ರಮದಲ್ಲಿ ಇಂತಹ ಜೀವಜಲದ ಒರತೆಗಳು ಇವೆಯೆಂದೇ ಅವರ ಅಭಿಪ್ರಾಯ. ಗಾಂಧಿ, ಶಾರದಾದೇವಿ, ಐನ್‌ಸ್ಟೈನ್ ಮತ್ತು ಮ್ಯಾಕ್ಸ್ ಪ್ಲಾಂಕ್ ಈ ನಾಲ್ವರೂ ನಮ್ಮ ಗ್ರಾಮೀಣರ ಬದುಕಿನಲ್ಲಿ ಒಡಬಾಳು ನಡೆಸುವ ಸಾಧ್ಯತೆಗಳನ್ನು ಬಯಲಿಗೆ ತಂದಿರುವುದು ಈ ಕೃತಿಗಳ ದರ್ಶನ. ಹಾಗೆ ನೋಡಿದರೆ, ಕುವೆಂಪುರವರು ಹೇಳಿದಂತೆ ನಿಜವಾದ ಅರ್ಥದಲ್ಲಿ ಈ ಕಾದಂಬರಿಗಳು ಅನೇಕ 'ಶೂದ್ರ ತಪಸ್ವಿನಿ'ಯರ ಮತ್ತು 'ಶೂದ್ರ ತಪಸ್ವಿ'ಗಳ ತಂಗುದಾಣ. ಆದ್ದರಿಂದಲೇ ಇವೆರಡೂ ಬರಹಗಳು ಮುಖ್ಯವಾಗುತ್ತವೆ.

ವಿಮರ್ಶಕರೂ ಆದ ಬೋರಲಿಂಗಯ್ಯನವರ ವಿಮರ್ಶನಾ ದೃಷ್ಟಿ ಕುವೆಂಪು ಅವರ ಕಾದಂಬರಿಗಳತ್ತ ಹರಿದುದು ಆಕಸ್ಮಿಕವೇನಲ್ಲ. ಅವರು ಧರಿಸುವ ಬಿಳಿಯ ಬಟ್ಟೆಗಳಂತೆಯೇ ಶುಭ್ರವಾದ, ದಿಟ್ಟವಾದ ಅವರ ಬಾಳು ಕೂಡ ಹಲವು ಅನುಭವ ಮಿಶ್ರಿತವಾದುದು. ಆದರೂ ಇಳಿವಯಸ್ಸಿನಲ್ಲಿ ಅವರು ಕೊಟ್ಟಿರುವ ಈ ಕಾದಂಬರಿಗಳು ಅವರ ವ್ಯಕ್ತಿತ್ವದ ಹೊಸದೊಂದು

ಆಯಾಮವನ್ನು ಪರಿಚಯ ಮಾಡಿಕೊಡುತ್ತವೆ. ಹಳೆಯ ಮೈಸೂರು ಎಂದು ಕರೆಯಲಾಗುವ ಪ್ರಾಂತ್ಯದ ಅರೆ ಮಲೆನಾಡು, ಅರೆ ಬಯಲು ಸೀಮೆಯಾದ ಹಾಸನ ಜಿಲ್ಲೆಯ ಹಳ್ಳಿಗಳ ಬದುಕು ಮೈದಳೆದಿರುವ ಬಗೆಯು ಅಪರೂಪವಾದುದು. ಈ ಸೀಮೆಗೆ ಆಸುಪಾಸಿನಲ್ಲಿಯೇ ಇದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಎಸ್.ಎಲ್.ಭೈರಪ್ಪನವರು ಕಟ್ಟಿಕೊಟ್ಟ ಹಳ್ಳಿಗಳು ತಕ್ಷಣ ನೆನಪಿಗೆ ಬರುತ್ತವೆ. ಕಣ್ಣಿಗೂ ಕಾಣ್ಕೆಗೂ ಇರುವ ನಿಕಟತೆಯು ಮತ್ತೊಮ್ಮೆ ಮನದಟ್ಟಾಗುತ್ತದೆ.

"ಸಾಕಷ್ಟು ವಯಸ್ಸಾದ ನಂತರ ಬರುವ ಸೃಜನಶೀಲತೆಯ ಹಂಬಲವು, ವಿಮರ್ಶೆ–ವಿಚಾರ–ಕ್ರಿಯೆ ಎಲ್ಲವನ್ನೂ ಮೀರಿದ ಮತ್ತೇನನ್ನೋ ಕಂಡುಕೊಳ್ಳುವ ತವಕ. ಅದು ಸ್ವಂತದ ಸಾರ್ಥಕತೆಯ ಮಾತು. ಅದಕ್ಕೆ ಮಾನದಂಡಗಳ ಹಂಗಿಲ್ಲ, ಇರಬಾರದು. ಇಲ್ಲಿ ಕಲಾಸೃಷ್ಟಿ ಮತ್ತು ಜೀವನ ದರ್ಶನಗಳ ನಡುವಿನ ಸಂಬಂಧವು ಮುಖ್ಯವಾಗುತ್ತದೆ. ಇಂಥ ಅನುಭವದ ವಿಶಾಲತೆ ಮತ್ತು ಕುಸುರಿಗಿಲಸದ ಕಲಾತ್ಮಕತೆಗಳಿಗಿಂತ ಮುಖ್ಯವಾದುದು ಬದುಕನ್ನು ಕಾಣುವ, ಕಟ್ಟುವ ಬಗೆ. ಬೋರಲಿಂಗಯ್ಯನವರ ಬದುಕಿನ ಬಗೆ ಮತ್ತು ಅದರ ಆಶಯ–ಆದರ್ಶಗಳು ಅಧಾರ್ಮಿಕವಾದವು. ಅವು ಯಾವುದೇ ಒಂದು ಸಿದ್ಧಾಂತ ಅಥವಾ ಒಬ್ಬ ವ್ಯಕ್ತಿಯಿಂದ ನಿರ್ದೇಶಿತವಲ್ಲ. ಅವು ತಾನು 'ಬಹೂದಕ'ನಾಗಿ ಪಡೆದುಕೊಂಡ ತನ್ನದೇ ಆದ ತಿಳುವಳಿಕೆಯನ್ನು 'ಕುಟೀಚಕ'ನಾಗಿ ಹಂಚುವ ಬಗೆಯವು. ಅವು ಕಾರಂತರು ಹೇಳಿದಂತೆ ಬಾಳ್ವೆಯೇ ಬೆಳಕು".[೧]

ಯಾವುದೇ ಭಾಷೆಯಲ್ಲಿ, ಕಾದಂಬರಿಯು ಹೊಸ ಅನುಭವದ ಸೀಮೆಗಳ ಮತ್ತು ರಚನೆಯ ಸಾಧ್ಯತೆಗಳ ಹುಡುಕಾಟವಾಗುತ್ತದೆ. ಈ ಸಂಗತಿಗಳು ಕಾದಂಬರಿಕಾರನು ಲೋಕವನ್ನು ಗ್ರಹಿಸುವ, ಕಲ್ಪಿಸಿಕೊಳ್ಳುವ ಮತ್ತು ಭಾಷೆಯಲ್ಲಿ ಕಟ್ಟಿಕೊಡುವ ಬಗೆಗಳಿಂದ ತೀರ್ಮಾನವಾಗುತ್ತದೆ. ಮಹತ್ವದ ಕಾದಂಬರಿಯು ತನ್ನ ಕಾಲದ ಜಟಿಲ ಸಮಸ್ಯೆಗಳನ್ನು ಆರಿಸಿಕೊಳ್ಳುತ್ತದೆ. ಅವುಗಳೊಡನೆ ಗುದಮುರಿಗೆಯಾಡುತ್ತದೆ ಹಾಗೂ ತನಗಿರುವ ವಿಚಾರಗಳ ಬೆಂಬಲದಿಂದ ತನಗೆ ಸರಿಯೆನಿಸಿದ ಪರಿಹಾರಗಳನ್ನು ಸೂಚಿಸುತ್ತದೆ. ಹಾಗಲ್ಲದೆ ಕೇವಲ ಅನುಭವಗಳನ್ನು ಸರಮಾಲೆಯಾಗಿ ಪೋಣಿಸುವ ಅಥವಾ ಭಾವನೆಗಳ ಲೋಕವನ್ನು ಉತ್ಕಟವಾಗಿ ಬೆದಕುವ ಬರವಣಿಗೆಯು ಕಾದಂಬರಿಯ ಘನತೆಯನ್ನು ಪಡೆದುಕೊಳ್ಳುವುದಿಲ್ಲ. ಈ ದಶಕದಲ್ಲಿ ಹಲವು ಬಾರಿ ಕಾಣಿಸಿಕೊಂಡಿರುವ 'ಸಮುದಾಯಗಳ ಚಾರಿತ್ರಿಕ ಕಥನ'ಗಳು

---

೧. 'ಕಡಿವಾಣ' – ಪ್ರಸ್ತಾವನೆ; ಜವನಕ್ಕ ಮತ್ತು ಕಡಿವಾಣ: ನೆಲನಿಕಟ ಬಾಳಿನ ಮಾಗಿದ ಹಣ್ಣುಗಳು, ಎನ್.ಬೋರಲಿಂಗಯ್ಯ, ದಾರಿದೀಪ ಪ್ರಕಾಶನ, ೨೦೧೪.

ಇಂಥ ಅಪಾಯವನ್ನು ಎದುರಿಸುತ್ತವೆ. 'ಸತ್ಯವು ಬಹುಮುಖವಾದುದು' ಎಂಬ ತಿಳಿವಳಿಕೆಯೇ ವಾಸ್ತವವಾದಿ ಬರವಣಿಗೆಯು ಹಲವು ಸವಾಲುಗಳನ್ನು ಎದುರಿಸುವಂತೆ ಮಾಡುತ್ತದೆ. ದಾರ್ಶನಿಕ ಸಾಧ್ಯತೆಗಳಿಗೂ ಕಾಲಕ್ರಮದಲ್ಲಿ ಮೂಡಿಬರುವ ವಾಸ್ತವಕ್ಕೂ ವ್ಯತ್ಯಾಸ ಇರಬೇಕು ಮತ್ತು ಇರುತ್ತದೆ. ಹಾಗೆಂದ ಮಾತ್ರಕ್ಕೆ ಲೇಖಕನ ಲೋಕದರ್ಶನದ ಮೌಲ್ವಿಕತೆಯು ಕಡಿಮೆಯಾಗುವುದಿಲ್ಲ. ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಅಥವಾ ನಿರಂಜನರ 'ಚಿರಸ್ಮರಣೆ'ಗಳು ವಿಭಿನ್ನವಾದ ಸಾಧ್ಯತೆಗಳನ್ನು ಸೂಚಿಸುತ್ತವೆ. ಕಾಲದ ಪರಿಶೀಲನೆಯಲ್ಲಿ ಅವರಿಬ್ಬರ ಕನಸಿನ ಸಮಾಜಗಳು ಸೋತುಹೋಗಲಿಲ್ಲ. ಆದರೆ, ಅವು ಇನ್ನೂ ಕೆಲವು ಒಳ್ಳೆಯ ಮತ್ತು ಕೆಟ್ಟ ಆಯಾಮಗಳೊಂದಿಗೆ ನಿಜವಾಗಿರುತ್ತದೆ. ಈ ಮಾತಿಗೆ 'ಜವನಕ್ಕ' ಮತ್ತು 'ಕಡಿವಾಣ'ಗಳೆರಡೂ ಸೂಕ್ತವಾದ ನಿದರ್ಶನಗಳು. ಇವು 'ದೇಸೀವಾದ' ಮತ್ತು 'ಜಾಗತೀಕರಣ'ಗಳೆಂಬ ಮರೀಚಿಕೆಗಳ ನಡುವೆ ಇರಬಹುದಾದ ಸಮತೋಲನದ ನೆಲೆಗಳನ್ನು ಹುಡುಕುವ ಗಂಭೀರವಾದ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿವೆ. ಇಂಥ 'ವಿವೇಕದ ಶಿಖೆ'ಗಳು ಬಹಳ ಅಗತ್ಯವಾದವು.

ನಮ್ಮ ಸಂಸ್ಕೃತಿಯ ಒಡಲಿನಲ್ಲಿ ಎಂದಿನಿಂದಲೂ ಹರಿಯುತ್ತಿರುವ ಜೀವನದಿಯೊಂದು ಇದೆ. ಆದರೆ ಅದು ಸದಾ ನಿರ್ಲಕ್ಷ್ಯಕ್ಕೆ ಪಾತ್ರವಾಗಿದೆ. ವ್ಯವಸಾಯ ಮತ್ತು ಪಶುಪಾಲನೆಗಳೇ ಅದರ ಪ್ರಧಾನ ನೆಲೆಗಳು. ಅಂಥ ಜೀವನಕ್ರಮದ ಮೂಲಧಾತುಗಳನ್ನು ಈ ಎರಡು ಕಾದಂಬರಿಗಳು ಹುಡುಕುತ್ತವೆ. ಅವುಗಳ ಕೃತಿಯು ಮುಕ್ಕಾಗದಂತೆ, ಅವಕ್ಕೆ ಆಧುನಿಕ ತಿಳುವಳಿಕೆಯ ದೀಕ್ಷೆಯನ್ನು ಕೊಡಲಾಗುತ್ತದೆ. ಆ ಮೂಲಕವೇ ಹೊಸದೊಂದು ಬದುಕುವ ಬಗೆಯನ್ನು ಮುಂದಿಡುವ ಉಮೇದು ಇಲ್ಲಿದೆ. ಈ ದರ್ಶನವು ಧರ್ಮ, ಜಾತಿ, ಲಿಂಗ ಸಿರಿತನ-ಬಡತನ ಮುಂತಾದ ಅಡ್ಡಗೋಡೆಗಳನ್ನು ಮೀರುವ ಸಾಧ್ಯತೆಗಳನ್ನು ಹೃದಯ ಧರ್ಮದ ಮೂಲಕ ಕಂಡುಕೊಳ್ಳುತ್ತದೆ. ಬಹಳ ಮುಖ್ಯವೆನಿಸಿದ ಸಂಗತಿಯೆಂದರೆ, ಈ ಕಾದಂಬರಿಗಳಲ್ಲಿ 'ಬದಲಾವಣೆ' ಎನ್ನುವ ಪ್ರಕ್ರಿಯೆಯು ಮೊದಲು ವ್ಯಕ್ತಿಯಿಂದ ಮೊದಲಾಗಿ ಕ್ರಮೇಣ ಕುಟುಂಬ, ಸಮುದಾಯ ಮುಂತಾದ ವಿಶಾಲ ನೆಲೆಗಳಿಗೆ ಅರಳಿಕೊಳ್ಳುತ್ತದೆ. ಇಂತಹ ಬದಲಾವಣೆಯ ಕೇಂದ್ರದಲ್ಲಿ ಬಹುಮಟ್ಟಿಗೆ ಅನಕ್ಷರಸ್ಥಳಾದ ಸೊಪ್ಪು ಮಾರಿ ಜೀವನ ನಡೆಸುವ ಹೆಣ್ಣುಮಗಳ ಪ್ರಜ್ಞೆಯಲ್ಲಿ ನಿಧಾನವಾಗಿ ನಡೆಯುವ ಬದಲಾವಣೆಗಳು ಅವಳ ಸಮುದಾಯದ ಇತರರಿಗೆ ಹರಡುವ ಬಗೆಯನ್ನು 'ಕಡಿವಾಣ' ಕಾದಂಬರಿಯು ಬಹಳ ಚೆನ್ನಾಗಿ ಹೇಳುತ್ತದೆ. ಆದರೆ ಮುಖ್ಯವಾದ ಸಂಗತಿಯೆಂದರೆ, ಜವನಕ್ಕ ಕೂಡ ಇತರರಿಂದ ಕಲಿಯಲು ಸದಾ ಸಿದ್ಧವಾಗಿರುತ್ತಾಳೆ. ಚಿಕ್ಕ ಮಕ್ಕಳಾದರೂ ಸರಿ, ಪುಸ್ತಕವಾದರೂ ಸರಿ.

ಹೀಗೆ ಹರಡುವ ಸಂಸ್ಕೃತಿಯ ವೈದಿಕ ಸಂಸ್ಕೃತಿಗಿಂತ ಬಹಳ ಭಿನ್ನವಾದ ಕೃಷಿಪ್ರಧಾನ ಸಂಸ್ಕೃತಿ. ಹಾಗೆ ನೋಡಿದರೆ, ಅದಕ್ಕೆ ವೈದಿಕ/ಬ್ರಾಹ್ಮಣ ಆಚರಣೆಗಳ ಸೋಂಕು ಅಂಟಿಕೊಂಡಿದೆ. ಆದರೆ, ಬೇಸಾಯ ಮಾಡುವ ಕೆಲಸದಲ್ಲಿಯೇ ಧರ್ಮಕ್ಕಿಂತ ಭಿನ್ನವಾದ ಜೀವಂತಿಕೆ ಇದೆ ಅದನ್ನು ವಿವರಗಳಲ್ಲಿ ಕಟ್ಟಿಕೊಡುವ ಕೆಲಸವನ್ನು ಈ ಕಾದಂಬರಿಯು ಬಹಳ ಚೆನ್ನಾಗಿ ಮತ್ತು ಪ್ರಾಯಶಃ ಮೊದಲ ಬಾರಿಗೆ ಮಾಡಿದೆ. ಸ್ವತಃ ಕುವೆಂಪು ಅವರು ಕೂಡ ಕೃಷಿಕ ಸಮುದಾಯಗಳಿಗೆ ಅಂಟಿಕೊಂಡಿದ್ದ ಮೂಢನಂಬಿಕೆಗಳು, ಭೇಟಿ, ಕಳ್ಳು ಮತ್ತು ಬಲೀಂದ್ರ ಹೋತಗಳ ಬಗ್ಗೆ ಬರೆದರೇ ವಿನಾ ಅದರಾಚೆಗೂ ಇದ್ದ ನೆಲದ ನಿಕಟ ಸಂಬಂಧದಿಂದಲೇ ಉಂಟಾಗುವ ಪುಲಕಗಳ ಬಗ್ಗೆ ಬರೆಯಲಿಲ್ಲ. ಅವರಿಗೆ ಪ್ರಕೃತಿ ಸೌಂದರ್ಯದ ಆಚೆಗಿನ ಮಲೆನಾಡು ಗೌಣವೆನಿಸಿತು. ಆದರೆ, ಬೋರಲಿಂಗಯ್ಯನವರ ನಿಲುವುಗಳು ಬೇರೆ. ಜವನಕ್ಕ-ಕೃಷ್ಣರಿಂದ ಮೊದಲಾಗಿ ಪ್ರತಿಯೊಬ್ಬರಿಗೂ ವ್ಯವಸಾಯದ ಜೀವಂತಿಕೆಯನ್ನು ಅನಿವಾರ್ಯತೆಯನ್ನು ಬಲ್ಲವರು. ಅಷ್ಟೇಕೆ ಸ್ವತಃ ಜವನಕ್ಕ ದವನ ಮತ್ತು ಹೂಗಳನ್ನು ಮಾರುವ ಕೆಲಸವನ್ನು ಬಿಟ್ಟು, ಸೊಪ್ಪನ್ನು ಮಾರಲು ಮೊದಲು ಮಾಡುತ್ತಾಳೆ. ಈ ಆಯ್ಕೆಯಲ್ಲಿಯೇ ಸೌಂದರ್ಯದಿಂದ ಸಾರ್ಥಕತೆಯ ಕಡೆಗೆ ಮಾಡಿದ ಚಲನೆಯಿದೆಯೆಂದು ತೋರುತ್ತದೆ.

ನಮ್ಮ ಕಾಲದಲ್ಲಿ ನಮ್ಮ ದೇಶವು ಎದುರಿಸುತ್ತಿರುವ ಬಹಳ ದೊಡ್ಡ ಬಿಕ್ಕಟ್ಟು 'ಅಭಿವೃದ್ಧಿ'ಯ ಮಾದರಿಗಳ ಆಯ್ಕೆಗೆ ಸಂಬಂಧಿಸಿದ್ದು. ಗಾಂಧಿ ಮತ್ತು ನೆಹರೂ ಅವರ ಆಯ್ಕೆಗಳ ನಡುವೆ ಇದ್ದ ಪರಸ್ಪರ ವಿರೋಧದಿಂದ ಬಿಡಿಸಿಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ, ಅಥವಾ ನೆಹರೂ ಅವರ ಆಯ್ಕೆಗಿಂತ ಘೋರವಾದ ನರಸಿಂಹರಾಯರ ಅನಿವಾರ್ಯ ಆಯ್ಕೆಯ ಹಾದಿಯಲ್ಲಿ ಬಹಳ ದೂರ ನಡೆದುಬಿಟ್ಟಿದ್ದೇವೆ. ಹೀಗಿರುವಾಗ, ಅಲ್ಲಲ್ಲಿ ಪ್ರಾಮಾಣಿಕವಾಗಿಯೋ ವಾಚಾಳಿಯಾಗಿಯೋ ಕೇಳಿಬರುತ್ತಿರುವ ದೇಸೀವಾದದ ಯಂತ್ರಗಳನ್ನು ಎಸೆದುಬಿಡುವ ಕೂಗು ಕೂಡ ಇನ್ನೊಂದು 'ದಂತಗೋಪುರ'ದಂತೆಯೇ ಕಂಡುಬರುತ್ತಿದೆ. ಇಂಥ ಬಿಕ್ಕಟ್ಟಿನಲ್ಲಿ ಬದಲಾವಣೆಯನ್ನು ನಿಯಂತ್ರಿಸುವುದು ಸಾಹಿತಿಗಿರಲಿ, ರಾಜಕಾರಣಿಗಳಿಗೂ ಕಷ್ಟವೇ. ಆದರೆ, ಪರಿಹಾರದ ಸಾಧ್ಯತೆಗಳ ಬಗ್ಗೆ ಯೋಚಿಸುವುದರಲ್ಲಿ ಅದನ್ನು ಕಲಾಕೃತಿಯಾಗಿ ರೂಪಿಸುವುದರಲ್ಲಿ ತಪ್ಪೇನೂ ಇಲ್ಲ. ಬೋರಲಿಂಗಯ್ಯನವರು ಇಂಥ ಆರೋಗ್ಯಕರ ಸಾಧ್ಯತೆಗಳನ್ನು ಈ ಕಾದಂಬರಿಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಅವರಿಗೆ ವಿಜ್ಞಾನ, ತಂತ್ರಜ್ಞಾನ ಮತ್ತು ಬಂಡವಾಳಶಾಹಿಗಳ ದುರಾಸೆಯಿಂದ ಹುಟ್ಟಿಕೊಂಡಿರುವ ಉಪಭೋಗಪರವಾದ ತಂತ್ರಜ್ಞಾನಗಳ ನಡುವಿನ ವ್ಯತ್ಯಾಸ ಚೆನ್ನಾಗಿ ಗೊತ್ತು. ಜವನಕ್ಕನ

ನಂತರದ ಪೀಳಿಗೆಯ ಮಕ್ಕಳಲ್ಲಿ ಮೂಡುವ ಶಿಕ್ಷಣದ ಹಪಾಹಪಿ ಮತ್ತು ಅದರ ಫಲವಾದ ತಿಳುವಳಿಕೆಗಳು ಬಹಳ ಮುಖ್ಯವೆಂದು ತೋರುತ್ತದೆ. ಬಾಲಕೃಷ್ಣ ಗೌಡ, ಅವನೀಶ, ಮುಕುಂದ ಮುಂತಾದ ವಿದ್ಯಾವಂತರು ಮಾತ್ರವಲ್ಲ, ನಂಜುಂಡ, ಕೃಷ್ಣ, ಶಾಂತಿ ಮತ್ತು ಸ್ವತಃ ಜವನಕ್ಕನಲ್ಲಿ ಇರಬಹುದಾದ ವೈಜ್ಞಾನಿಕ ಮನೋಧರ್ಮವನ್ನು ತೋರಿಸಿಕೊಡುವುದರಲ್ಲಿ ಬೋರಲಿಂಗಯ್ಯ ಅವರು ಯಶಸ್ವಿಯಾಗಿದ್ದಾರೆ. ವೈಜ್ಞಾನಿಕ ಮನೋಧರ್ಮ ಎಂದರೆ ಕೇವಲ ವಿಜ್ಞಾನಕ್ಕೆ ಸಂಬಂಧಿಸಿದ ಮಾಹಿತಿಯಲ್ಲ. ಬದಲಾಗಿ ಅದು ಜೀವನವನ್ನು ನೋಡಬೇಕಾದ, ಕಟ್ಟಿಕೊಳ್ಳಬೇಕಾದ ಒಂದು ಬಗೆಯಾಗಿದೆ. ಈ ಕಾದಂಬರಿಯಲ್ಲಿ ಹಲವು ಬಗೆಯ ನಿದರ್ಶನಗಳನ್ನು ನೋಡಬಹುದಾಗಿದೆ. ಅದರ ನಿಜವಾದ ಅರ್ಥದಲ್ಲಿ ಆಧುನಿಕತೆಯಿಂದ ಆಗಿರುವ ಮತ್ತು ಆಗಬಹುದಾಗಿದ್ದ ಒಳ್ಳೆಯದರ ಕಡೆಗೆ ಲೇಖಕರ ಕಣ್ಣು ಸದಾ ನಾಟಿದೆ. ಸರ್ಕಾರಿ ಅಧಿಕಾರಿಗಳು ಮತ್ತು ಯೋಜನೆಗಳಲ್ಲಿಯೂ ಇರಬಹುದಾದ ಒಳ್ಳೆಯದನ್ನು ಅವರು ಕಂಡುಕೊಳ್ಳುತ್ತಾರೆ. ಈ ಕಾದಂಬರಿಗಳನ್ನು ದೇಸೀವಾದವೆಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಬಹಳ ಎಚ್ಚರಿಕೆಯಿಂದ ಗಮನಿಸಬೇಕು. ಬೋರಲಿಂಗಯ್ಯನವರು ಖಂಡಿತವಾಗಿಯೂ ಯಥಾಸ್ಥಿತಿವಾದಿಗಳಾದ ಲೇಖಕರಲ್ಲ. ಹಾಗೆಯೇ ಹಿಂದೆ ಯಾವಾಗಲೋ ಇದ್ದಿರಬಹುದಾದ ಸ್ವರ್ಣಯುಗವನ್ನು ಕೂಡ ಅವರ ಖಂಡಿತವಾಗಿಯೂ ನಂಬುದಿಲ್ಲ. ಫ್ಯೂಡಲ್ ಸಂಸ್ಕೃತಿಯ ಪುನರಾಗಮನದ ಪರವಾದ ನೆಲೆಗಳು ಅವರಲ್ಲಿ ಎಳ್ಳಷ್ಟೂ ಇಲ್ಲ. ಅವರು ಸೃಷ್ಟಿಸುವ ನಾಯಕರು. 'ಸಕಲಜೀವಾತ್ಮರಿಗೆ ಲೇಸನ್ನೇ ಬಯಸುವ' ಜವನಕ್ಕನ ಮೂಸೆಯಲ್ಲಿ ಕರಗಿಬಂದವರು. ಆದ್ದರಿಂದ ಅವರಲ್ಲಿ ಧನಮದ, ವಿದ್ಯಾಮದ, ಯೌವ್ವನಮದ ಮುಂತಾದವು ಇಲ್ಲ. ಅವರು ಮುಂದಾಳುಗಳೇ ವಿನಾ ನಾಯಕರಲ್ಲ. ಅವರು ಬಯಸುವ ಜೀವನಕ್ರಮಕ್ಕೆ ವಿಜ್ಞಾನದ ಒಳಬಳಕೆ ಇದೆ. ಅಂತೆಯೇ ಸಾಹಿತ್ಯ ಮತ್ತು ಕಲೆಗಳ ಸ್ಪರ್ಶವೂ ಇದೆ. ಆದರೂ ಅವರ ಮನಸ್ಸಿನ ಆಳದಲ್ಲಿ ಎಲ್ಲೋ ಒಂದು ಕಡೆ 'ನಾನೆ ಸರಿತನ' ಎನ್ನುವ ಗಿಡದ ಬೀಜಗಳು ಹುದುಗಿವೆ. ಅವು ಮೋಹನಾಕ್ಷಿಯ ಬಗ್ಗೆ ಅನುಕಂಪ ತೋರಿಸಬಲ್ಲವೇ ಹೊರತು ಅವಳ ತಾಯಿಯ ಬಗ್ಗೆ ಅಲ್ಲ. ಆದರೆ, ಶಾಂತಿ ಜಾಂಬವಿಯರಿಗೆ ಅಲ್ಲಿ ಬಿಡುಗಡೆಯ ಹಾದಿಗಳಿವೆ.

ಆದರೆ, ಇಲ್ಲಿ ತೋರುವಂತೆ ಇಲ್ಲೊಂದು ಸಮಸ್ಯೆಯಿದೆ. ಅದು ಮನುಷ್ಯನ ಸ್ವಭಾವವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಇರುವ ಸಮಸ್ಯೆ. 'ಜವನಕ್ಕ' ಕಾದಂಬರಿಯಲ್ಲಿ ಮನುಷ್ಯನ ಕೆಟ್ಟತನದ ವಿರಾಟ್ ಸ್ವರೂಪವನ್ನು ಕೂಡ ತೋರಿಸಲು ಸಾಧ್ಯವಾಗಿತ್ತು. ಜವನಕ್ಕ ಗಂಡನ ಮನೆ ಮತ್ತು ಅವನ ಊರು ಎರಡನ್ನೂ ಹಿಂದೆಬಿಟ್ಟು, ಕೇವಲ ಗಂಡ ಮತ್ತು ಮಗುವನ್ನು ಕರೆದುಕೊಂಡು ಕಡಿವಾಣಕ್ಕೆ ಬರುತ್ತಾಳೆ. ಈ ಊರಿನ ಹೆಸರೇ ಸ್ವಚ್ಛಂದವಲ್ಲದ

ವರ್ತನೆಯನ್ನು ತೋರಿಸುತ್ತದೆ. ಆದರೆ, ಒಳ್ಳೆಯತನಕ್ಕೆ ಇಡೀ ಲೋಕವೇ ಮರುಳಾಗಿ ಬಿಡುತ್ತದೆ, ಶರಣಾಗಿ ಬಿಡುತ್ತದೆ ಎಂಬ ನಂಬಿಕೆಯು ಈ ಕಾದಂಬರಿಯನ್ನು ಆಳಿದೆ. ಶಾಂಭವಿ ಅವಳ ಗುರುಗಳು ಎಲ್ಲರೂ 'ಜವನಕ್ಕ ಮತ್ತು ಕಂಪನಿ'ಯ ದುರದೃಷ್ಟದಿಂದ ವಾಸ್ತವವು ಹಾಗೆ ಇರುವುದಿಲ್ಲ. ಅದರ ಜೊತೆಗೆ ಈ ಹಳ್ಳಿಗಳ ಹೊರಗಿರುವ ಲೋಕವು ತನ್ನ ಸ್ವಂತ ಹಿತಾಸಕ್ತಿಗಳಿಗಾಗಿ ಎಲ್ಲವನ್ನೂ ನಾಶಮಾಡಲು ಪ್ರಯತ್ನಿಸುತ್ತಿರುತ್ತದೆ. ಆದ್ದರಿಂದ ಕಾದಂಬರಿಯಲ್ಲಿ ಒಂದು ಮಟ್ಟದ 'ಆಶಾಚಿಂತನೆ' ಇದೆ.

ಹೆಣ್ಣು, ಸಾಮಾಜಿಕ ಮಹಿಳೆ ಮತ್ತು ಅವರ ಬಿಡುಗಡೆಯ ಹೋರಾಟಗಳನ್ನು ಕುರಿತಂತೆ ಈ ಕಾದಂಬರಿಯಲ್ಲಿ ಒಂದು ತಾತ್ವಿಕ ಸಮಸ್ಯೆ ಇದೆಯೆಂದು ತೋರುತ್ತದೆ. ಮೈಸೂರಿನಲ್ಲಿ ನಡೆದ ಇಂಥ ಹೋರಾಟಗಳು ಮತ್ತು ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಕಾದಂಬರಿಕಾರರ ನಿಲುವನ್ನು ರೂಪಿಸಿವೆಯೋ ಇಲ್ಲವೊ ಎನ್ನುವುದು ಮುಖ್ಯವಲ್ಲ. ಆದರೆ ಜವನಕ್ಕ, ಲಕ್ಷ್ಮಿ, ಶ್ರೀಲಕ್ಷ್ಮಿ ಮುಂತಾದವರಿಗೆ ಹೋಲಿಸಿದಾಗ ಅಂತಹ ಹೋರಾಟಗಾರ್ತಿಯರ ಬಗ್ಗೆ ಒಂದಿಷ್ಟು ಅಸಹನೆಯನ್ನು ಖಚಿತವಾಗಿ ಗುರುತಿಸಬಹುದು. ಸಹನಾ ಮೇಡಂ ಮತ್ತು ಶಾಂಭವಿ (ಜಾಂಬವಿ) ಈ ಅಸಹನೆಯ ಚುರುಕನ್ನು ಅನುಭವಿಸುತ್ತಾರೆ. ಸಹನಾ ಮೇಡಂ ಬಗ್ಗೆ ಅವನೀಶ ಹೀಗೆ ಯೋಚಿಸುತ್ತಾನೆ. "ಸಹನಾ ಮೇಡಂ ಕೂಡ ಅವನ ಮಟ್ಟಿಗೆ ಹೊರತಾಗಿ ಕಂಡಿರಲಿಲ್ಲ. ಅವರು ತಮ್ಮನ್ನು ತಾವು ಅಖಂಡ ಸ್ತ್ರೀವಾದಿಯಾಗಿ ಗುರುತಿಸಿಕೊಂಡಿದ್ದರೂ ಆಳದಲ್ಲಿ ಅವರೂ ವೇದಪ್ರಣೀತ ಧಾರ್ಮಿಕ ಚೌಕಟ್ಟಿನಿಂದ ಹೊರಗೆ ಬಂದು ಸರ್ವಸಂಗಸಹನೀಯ ಬದುಕಿಗಾಗಿ ತುಡಿಯುತ್ತಿದ್ದಂತೆ ಕಂಡಿರಲಿಲ್ಲ. ಹಾಗೆ ನೋಡಿದರೆ, ಜಿ.ಎಚ್.ನಾಯಕರೊಬ್ಬರೆ – ನವ್ಯದ ಕನ್ನಡಕ ಧರಿಸಿ ನೋಡುತ್ತಿದ್ದರಾದರೂ ವಿಶಿಷ್ಟ ಭಂಗಿಯ ಪ್ರಾಮಾಣಿಕ ಜೀವನಶೈಲಿಯನ್ನು ಕಟ್ಟಿಕೊಡಲು ಪ್ರಯತ್ನಿಸುತ್ತಿದ್ದುದು"[೨] ಈ ಮಾತುಗಳ ಸತ್ಯಾಸತ್ಯತೆಯಲ್ಲಿ ಆಸಕ್ತಿಯಿಲ್ಲ. ಬದಲಾಗಿ ಕಾದಂಬರಿಕಾರರ ಅಭಿಪ್ರಾಯಗಳೇ ಪಾತ್ರಗಳದೂ ಅಭಿಪ್ರಾಯವಾಗಿ ಬಿಟ್ಟರೆ, ಕಾದಂಬರಿಗೆ 'ಕಡಿವಾಣ' ಬಂದುಬಿಡುತ್ತದೆ. ಕಾದಂಬರಿಕಾರನು ಎಲ್ಲೋ ಒಂದು ಕಡೆ ಪಾತ್ರಗಳಿಗೆ ಅವುಗಳ ಸತ್ವಗಳಿಗೆ ಅನುಗುಣವಾಗಿ ಬೆಳೆಯಲು ಎಡೆಮಾಡಿಕೊಡಬೇಕು. ಅವನು ಸೂತ್ರಧಾರನೂ ಅಲ್ಲ, ಅವನು ಕಂಡರಿಸುವ ಪಾತ್ರಗಳು ಸೂತ್ರದ ಗೊಂಬೆಗಳೂ ಅಲ್ಲ ಅದಕ್ಕಿಂತ ಮುಖ್ಯವಾಗಿ ಸಹನಾ ಮೇಡಂ ಪಾತ್ರದ ಕುಂದುಕೊರತೆಗಳ ಮೂಲಕ ಸ್ತ್ರೀವಾದದ ಮೇಲೆ ಜಗಳ ತೆಗೆಯಲಾಗುವುದಿಲ್ಲ. ಅವೆರಡೂ ಬೇರೆ-ಬೇರೆಯೇ. ಈ ಕಾದಂಬರಿಯಲ್ಲಿಯೇ ಖ-ಭೌತವಿಜ್ಞಾನಿ ಬಾಲಕೃಷ್ಣಗೌಡರ

---

೨. 'ಕಡಿವಾಣ', ಎನ್.ಬೋರಲಿಂಗಯ್ಯ, ದಾರಿದೀಪ ಪ್ರಕಾಶನ, ೨೦೧೪, ಪು. XIX

ಬುದ್ಧಿಶಕ್ತಿಗೂ ಅವನ ತಂಗಿ ಶ್ರೀಲಕ್ಷ್ಮಿಯ ಬುದ್ಧಿವಂತಿಕೆಗೂ ಸೂಕ್ಷ್ಮವಾದ ಅಂತರಗಳಿವೆ. ನವ್ಯ, ಸ್ತ್ರೀವಾದ ಮುಂತಾದವು ಮಾತ್ರವಲ್ಲ ನಮ್ಮ ಆಲೋಚನೆ ಮತ್ತು ಅಭಿಪ್ರಾಯಗಳು ಕೂಡ ಕನ್ನಡಕಗಳಾಗಬಹುದು. ಶ್ರೇಣೀಕೃತ ವ್ಯವಸ್ಥೆಯನ್ನು ನಿರಾಕರಿಸುವಾಗಲೂ ಸಹಜವಾದ ಅಸಮಾನತೆಯನ್ನು ಅವಲಂಭಿಸಿದ ಶ್ರೇಣಿಗಳು ನಿರ್ಮಾಣವಾಗುತ್ತವೆ. ನನ್ನ ಮಾತಿಗೆ ಸಾಕ್ಷಿ ಬೇಕಾದರೆ, ಈ ಕಾದಂಬರಿಯಲ್ಲಿ ಬೇರೆ ಬೇರೆ ಪಾತ್ರಗಳಿಗೆ ಬಳಸಿರುವ ಗುಣವಾಚಕಗಳು ಮತ್ತು ಅವು ಮಾಡುವ ಕೆಲಸಗಳಿಗೆ ಬಳಸಿರುವ ಕ್ರಿಯಾವಿಶೇಷಣಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬಹುದಾಗಿದೆ. ವ್ಯಕ್ತಿಯ ವರ್ತನೆ ಮತ್ತು ಬೆಳವಣಿಗೆಗಳಿಗೆ ಅವನ ಪರಿಸರವೂ ಕಾರಣವೆನ್ನಬಹುದು ಈ ಕಾದಂಬರಿಯಲ್ಲಿ ಜವನಕ್ಕ ತನ್ನ ಯೌವ್ವನ ಸಹಜವಾದ ಸಮಸ್ಯೆಗಳನ್ನು ಎದುರಿಸಿ ಮತ್ತು ನಿರ್ವಹಿಸಿದ ಬಗೆಯು ಇಲ್ಲಿ ಸಹಜವಾಗಿ ಮೂಡಿಬಂದಿದೆ. ಈ ಸನ್ನಿವೇಶಗಳನ್ನು ನೋಡಿದಾಗ, ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಬರುವ ಮುದುಕಿಯರ ಪಾತ್ರಗಳನ್ನು ಕುರಿತು ಜಿ.ಎಚ್.ನಾಯಕರು ಬರೆದ ವಿಮರ್ಶೆಯ ಮಾತುಗಳು ನೆನಪಾಗುತ್ತವೆ. ಅವಳು ಮಾಡುವ ಹತ್ತು ಹಲವು ಕೆಲಸಗಳು ಹೆಣ್ಣಿನ ಮನಸ್ಸಿನಲ್ಲಿ ಮೊಳೆತು, ಸಮುದಾಯಗಳಲ್ಲಿ ನಿಜವಾಗುವುದು ಅಸಹಜವಾಗಿ ತೋರುವುದಿಲ್ಲ. ಯಾವಾಗಲೋ ಒಮ್ಮೆ ಇದ್ದಿರಬಹುದಾದ ಮಾತೃಪ್ರಧಾನ ಸಂಸ್ಕೃತಿಯ ನೆಲೆಗಳನ್ನು ಈ ಕಾದಂಬರಿಯು ಒಂದು ಪೀಳಿಗೆಯಲ್ಲಿ ತೋರುತ್ತದೆ. ಅದರ ಮುಂದುವರಿಕೆಯ ಸಾಧ್ಯತೆಗಳನ್ನೂ ಸೂಚಿಸುತ್ತದೆ. ಇಲ್ಲಿನದು ಸಾಮೂಹಿಕ ನಾಯಕತ್ವವು ರೂಪುಗೊಳ್ಳುವ ಬಗೆಯೇ ಹೊರತು ಒಬ್ಬನಿಗೆ ಸಿಗುವ ಮನ್ನಣೆ ಅಲ್ಲ.

ಗಂಡು-ಹೆಣ್ಣುಗಳ ಸಂಬಂಧ ಹಲವು ಮಗ್ಗುಲುಗಳನ್ನು ಶೋಧಿಸುವ ಗಂಭೀರ ಪ್ರಯತ್ನವನ್ನು ಈ ಎರಡೂ ಕಾದಂಬರಿಗಳು ಮಾಡುತ್ತವೆ. ಅದರಲ್ಲಿಯೂ ಗ್ರಾಮೀಣ ಸಂದರ್ಭದಲ್ಲಿ ಇಂಥ ಅರಸುವಿಕೆಗಳು ಇನ್ನೂ ಕಡಿಮೆ. ಈ ಲೇಖಕರು ಇಂಥ ಸಂಬಂಧಗಳನ್ನು ಚರ್ಚಿಸುವಾಗ, ಸಂಕುಚಿತವಾಗಿ, ನೈತಿಕವಾದ ತೀರ್ಮಾನಗಳನ್ನು ಕೊಡುವ ಆತುರವನ್ನು ತೋರಿಸುವುದಿಲ್ಲ. ವಿಜ್ಞಾನ, ಕಲೆ ಮತ್ತು ವಿವೇಕಗಳು ಅವರ ತಿಳುವಳಿಕೆಯನ್ನು ನಿರ್ದೇಶಿಸುತ್ತವೆ. ಅವೆಲ್ಲಕ್ಕಿಂತ ಹೆಚ್ಚಾಗಿ ಜೈವಿಕವಾದ ನ್ಯಾಯವೊಂದರ ಪರಿಕಲ್ಪನೆಯು ಅವರಲ್ಲಿ ಯಾವಾಗಲೂ ಜಾಗೃತವಾಗಿರುತ್ತದೆ. ಆದ್ದರಿಂದ ಲೈಂಗಿಕತೆಯ ಒತ್ತಡಗಳನ್ನು ಕೂಡ ನೈತಿಕತೆಯ ಆಚೆ ನಿಂತು ನೋಡಲು ಇಲ್ಲಿ ಸಾಧ್ಯವಾಗಿದೆ. ಆದರೂ 'ಕಡಿವಾಣ'ದ ಕಲ್ಪನೆಯನ್ನು ಅಲ್ಲಿಯೂ ಅಳವಡಿಸಿಕೊಳ್ಳುತ್ತಾರೆ.

ಈ ಕಾದಂಬರಿಯಲ್ಲಿ ಕಂಡುಬಂದ ಇನ್ನೊಂದು ಗುಣವೆಂದರೆ, ಜಾತಿಗಳನ್ನು ಅವುಗಳಿಗೆ ಕೊಡಲಾಗಿರುವ 'ಸ್ಟೀರಿಯೋಟೈಪು'ಗಳ ಆಚೆ ನಿಂತು ನೋಡುವ ಮುಕ್ತ ಗುಣ.

ಉದಾಹರಣೆಗೆ, ಮೇಷ್ಟ್ರು ನರಸಿಂಹಮೂರ್ತಿ ಮತ್ತು ಅವರ ಪತ್ನಿ ಸಾವಿತ್ರಮ್ಮ ಡಾ. ರಾಜಾಚಾರ್, ಎಲಿಜಬೆತ್ ಮೋಹನಾಕ್ಷಿ ಮುಂತಾದ ಪಾತ್ರಗಳ ಮೂಲಕ 'ಮೇಲು ಜಾತಿ' ಎಂದು ಹೇಳಲಾದವರಿಗೆ ಅಗತ್ಯವಾದ ಅಪವರ್ಗೀಕರಣ, ತಿಳುವಳಿಕೆಗಳನ್ನು ಬಹಳ ಚೆನ್ನಾಗಿ ತಿಳಿಸಲಾಗಿದೆ. ಆದರೆ, ಅಲ್ಲಿ ದ್ವೇಷ ಅಸಹನೆಗಳ ಸೂಚನೆಯೂ ಇಲ್ಲ ಹಾಗೆಯೇ ಶ್ರೀಲಕ್ಷ್ಮಿಯು ಬ್ರಾಹ್ಮಣರಾದ ನರಸಿಂಹಮೂರ್ತಿಯವರ ಮನೆಯಲ್ಲಿ ಬೆಳೆಯುವುದರ ಬಗ್ಗೆಯೂ ಹಿಂಜರಿಕೆ ಇಲ್ಲ. ಗೇಲಿ ಮಾಡುವ ಬದಲು, ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವ ಮತ್ತು ಆ ಮೂಲಕ ಎಳೆಯುವ ಈ ಬಗೆಯು ಸಮುದಾಯಗಳ ನಡತೆಗೆ ಮಾದರಿಯೆಂದೇ ತೋರುತ್ತದೆ. 'ಅನ್ಯ'ವನ್ನು ಕುರಿತ ಗೇಲಿಯೇ ಮಾಮೂಲಾಗಿರುವ ಸಾಹಿತ್ಯಕೃತಿಗಳ ನಡುವೆ ಈ ಬರಹಗಳು ಎದ್ದು ನಿಲ್ಲುತ್ತವೆ. ಇಂತಹ ಹಲವು ಸನ್ನಿವೇಶಗಳು ಈ ಬರವಣಿಗೆಗಳಿಗೆ ಆರೋಗ್ಯವನ್ನು ಕೊಟ್ಟಿವೆ.

'ಕಡಿವಾಣ' ಒಂದು ಅರ್ಥದಲ್ಲಿ 'ವಿಶ್ವಕೋಶದ ಮಾದರಿ'ಯ ಕಾದಂಬರಿ ಇದನ್ನು 'ನಾವೆಲ್ ಆಫ್ ಐಡಿಯಾಸ್' ಎಂದೂ ಕರೆಯಬಹುದು. ಇಂಥ ಕಡೆ ಕಲಾತ್ಮಕ ಅನಿವಾರ್ಯತೆಗಿಂತ ಹೆಚ್ಚಾಗಿ ಭಾವನೆ-ವಿಚಾರ-ಅನುಭವಗಳನ್ನು ಹೇಳಿಕೊಳ್ಳುವ ತುರ್ತು ಮುಖ್ಯವಾಗುತ್ತದೆ. ಕಾದಂಬರಿಯಂತಹ ಪ್ರಕಾರ ಮಾತ್ರ ಇದನ್ನು ತಡೆಯಬಲ್ಲುದು. ಇಲ್ಲಿ ಖ-ಭೌತಶಾಸ್ತ್ರದ ತಾತ್ವಿಕ ಸಂಗತಿಗಳಿಂದ ಮೊದಲಾಗಿ, ಬೇಸಾಯ, ಸ್ತ್ರೀವಾದ, ಸಂಗೀತ ಮುಂತಾದ ಹಲವು ಕ್ಷೇತ್ರಗಳಿಗೆ ಸಂಬಂಧಿಸಿದ ವಿಚಾರಗಳು ಮತ್ತೆ ಮತ್ತೆ ಬರುತ್ತವೆ. ಅವು ಅನುಭವಗಳನ್ನು ಶೋಧಿಸುವ ಉಪಕರಣಗಳು ಹೇಗೋ ಹಾಗೆಯೇ ಅನುಭವಗಳಿಂದ ಮೂಡಿಬಂದ ತಿಳುವಳಿಕೆಯೂ ಹೌದು. ಹಾಗೆಯೇ ಲೇಖಕರ ಮನಸ್ಸನ್ನು ಆಳವಾಗಿ ತಟ್ಟಿರುವ ಮತ್ತು ಓದುಗರಿಗೂ ಮುಖ್ಯವೆನಿಸುವ ಅನುಭವಗಳ ಸರಣಿಯನ್ನೇ ಇಲ್ಲಿ ಗುರುತಿಸಬಹುದು. ಮುಕಂದನು ಹಾವಿನಿಂದ ಬದುಕುಳಿದ ಪ್ರಸಂಗ, ಅವನ ಟಗರು ನಾಯಿಯನ್ನು ಕೊಂದ ಬಗೆ, ಕೃಷ್ಣ ಮತ್ತು ಜವನಕ್ಕರು ನಿಕಟವಾಗುವ ಸಂದರ್ಭಗಳು, ಅವನೀಶ ತನ್ನ ಅತ್ತೆ-ಮಾವಂದಿರಿಗಾಗಿ ಹುಡುಕಿಕೊಂಡು ಹೋಗುವ ಸನ್ನಿವೇಶ ಮುಂತಾದವನ್ನು ಹೆಸರಿಸಬಹುದು. ಈ ಅನುಭವಗಳು ವಿಚಾರಗಳಿಗೆ ಪೂರಕವಾಗಿ ಲೋಕದರ್ಶನ ಮಾಡುತ್ತವೆ. 'ಜವನಕ್ಕ' ಕಾದಂಬರಿ ಕೂಡ ಇಂತಹ ಸನ್ನಿವೇಶಗಳನ್ನು ಒಳಗೊಂಡಿದೆ. ವರ್ಣ, ವರ್ಗ ಮತ್ತು ಲಿಂಗಗಳಿಂದ ಹುಟ್ಟಿಕೊಳ್ಳುವ ಅನ್ಯಾಯಗಳನ್ನು ಆದಷ್ಟೂ ಸಹಜವಾಗಿ ತಿದ್ದುವ ಉಮೇದನ್ನು ಹೊಂದಿದೆ. ಬೋರಲಿಂಗಯ್ಯನವರ ಮೂಲ ಆಸಕ್ತಿ ಇರುವುದು ಒಂದು ಜೀವನಕ್ರಮ, ಭಾವನಕ್ರಮ ಮತ್ತು ಆಲೋಚನಾಕ್ರಮಗಳನ್ನು

ಕಟ್ಟಿಕೊಡುವುದೇ ವಿನಾ ಕಾದಂಬರಿ ಬರೆಯುವುದಲ್ಲ. ಆ ಕೆಲಸದಲ್ಲಿ ಅವರು ಯಶಸ್ವಿಯಾಗಿದ್ದಾರೆ. ವಾಸ್ತವವಾದೀ ಬರವಣಿಗೆಯ ಕ್ರಮವನ್ನು ಆರಿಸಿಕೊಂಡಿರುವುದರಿಂದ ಸಂವಹನದ ತೊಡಕುಗಳು ಬರುವುದಿಲ್ಲ. ಆದರೆ ಅನೇಕ ಸಲ ಘಟನೆಗಳು ಅನಿವಾರ್ಯವಲ್ಲದ ವಿವರಗಳಿಂದ ತುಂಬಿಹೋಗುತ್ತವೆ. ಕಾದಂಬರಿಯ ಅಗತ್ಯಕ್ಕಿಂತ ಉದ್ಧವಾಯಿತೇನೋ ಎನ್ನಿಸುತ್ತದೆಯಾದರೂ. ತಮ್ಮಷ್ಟಕ್ಕೆ ತಾವು ರೋಚಕವಾದ ಘಟನೆಗಳು ಒಟ್ಟು ಕಾದಂಬರಿಗೆ ಕೊಡುವ ಕಾಣಿಕೆ ನಗಣ್ಯವೆನಿಸುತ್ತದೆ. ಆದರೆ, ಬದುಕಿನ ಹಲವು ಸಾಧ್ಯತೆಗಳನ್ನು ಹುಡುಕಿರುವುದರಿಂದ ಕಾದಂಬರಿಯಲ್ಲಿ 'ಲೂಸ್ ಎಂಡ್'ಗಳು ಬಹಳ ಕಡಿಮೆ ಎಂದು ಹೇಳಬಹುದು.

೩.೨. ಕವನಗಳಲ್ಲಿ ಮಕ್ಕಳ ಪ್ರಜ್ಞೆ

ಎನ್.ಬೋರಲಿಂಗಯ್ಯ ಅವರು ಕವಿಯೂ ಆಗಿ ಕಾವ್ಯವನ್ನು ರಚಿಸಿದ್ದಾರೆ. ಅವರ ಕಾವ್ಯಗಳು ಕೌಟುಂಬಿಕ ಹಿನ್ನೆಲೆಯಿಂದ ಬಂದಂಥವುಗಳಾಗಿವೆ. ಕುಟುಂಬದಲ್ಲಿ ತಾವು ಅನುಭವಿಸಿದ ಅನುಭವಗಳು ಕಾವ್ಯದ ಮಾದರಿಯಾಗಿ ಹೊರಹೊಮ್ಮಿರುವುದು ವಿಶೇಷವಾಗಿ ಕಂಡುಬರುತ್ತದೆ. 'ಸೃಜನ' ಎಂಬ ನಾಮವೇ ಸೂಚಿಸುವಂತೆ ಸೃಜನ ಎಂದರೆ ಸ್ವಂತಿಕೆ ಎಂದೂ, ಸಿರಿ ಎಂದರೆ ಸಂಪತ್ತು, ವೈಭೋಗ ಎಂದು ಅರ್ಥೈಸಲಾಗಿದೆ. 'ಸೃಜನ' ಎಂಬುದು ಎನ್.ಬೋರಲಿಂಗಯ್ಯ ಅವರ ಮಗಳ ಮಗಳು ಅಂದರೆ ಮೊಮ್ಮಗಳ ಹೆಸರಾಗಿದೆ. ಈ ಕೃತಿಯಲ್ಲಿ ಒಂದು ಹೆಣ್ಣು ಮಗುವನ್ನು ಕೇಂದ್ರವಾಗಿಟ್ಟುಕೊಂಡು ಕಾವ್ಯ ರಚಿಸಿರುವುದು ವಿಶೇಷವಾಗಿ ಕಂಡುಬರುತ್ತದೆ. ಈ ಕಾವ್ಯದ ಮುಖೇನ ಎನ್.ಬೋರಲಿಂಗಯ್ಯ ಅವರು ಒಬ್ಬ ಸ್ತ್ರೀವಾದಿಯಾಗಿ ಕಾಣಿಸಿಕೊಳ್ಳುತ್ತಾರೆ.

ಈ ಕವನ ಸಂಕಲನದಲ್ಲಿ ಒಟ್ಟು ೪೨ ಕವನಗಳಿದ್ದು ಮಗುವಿನ ಬಾಲ್ಯದ ದಿನಗಳು ಮತ್ತು ಅನಂತರದ ದಿನಗಳನ್ನು ಕಾವ್ಯದೊಳಗೆ ತರುವುದು. ಅಂದರೆ ಒಂದು ಮಗು ಬೆಳೆಯಬೇಕಾದ ಪರಿಸರ, ಭವಿಷ್ಯದಲ್ಲಿ ಮಗುವು ಪಡೆಯಬೇಕಾದ ಸ್ಥಾನಮಾನ, ಕನಸುಗಳುಗಳನ್ನು ಕಾವ್ಯದಲ್ಲಿ ತರುವ ಪ್ರಯತ್ನವಿದೆ.

ಬೋರಲಿಂಗಯ್ಯ ಅವರ 'ಸೃಜನ ಸಿರಿ' ಕವನ ಸಂಕಲನದಲ್ಲಿ ಶಿಶುಪ್ರಜ್ಞೆ

ಓ ನನ್ನ ಕಣ್ಮಣಿ

ಈ ಕಾವ್ಯದಲ್ಲಿ ಮಗಳ ಮಗುವು ಜನಿಸಿದ ದಿನಾಂಕವನ್ನು ನೆನಪಿಸಿಕೊಳ್ಳುತ್ತಾ, ಹುಟ್ಟು ಹಬ್ಬದ ಸಂಭ್ರಮದ ಸಂದರ್ಭದಲ್ಲಿ ಮೊಮ್ಮಗಳು ಬೆಳೆದ ಪರಿಸರವನ್ನು ಚಿತ್ರಿಸುವುದರೊಂದಿಗೆ

ಭವಿಷ್ಯದಲ್ಲಿ ಉತ್ತಮ ಪ್ರಜೆಯಾಗಿ, ರೂಪುಗೊಳ್ಳುವುದಕ್ಕೆ ಇರುವ ಸನ್ನಿವೇಶಗಳನ್ನು ಕೌಟುಂಬಿಕ ಪರಿಸರದೊಂದಿಗೆ ಮುಖಾಮುಖಿಯಾಗಿಸುತ್ತಾರೆ.

ಹೇಗೆ ಬರಮಾಡಿಕೊಳಲೆ ನಿನ್ನ?
ಏನೆಂದು ಕರೆಯಲೆ ಚಿನ್ನ?
ಹೊಸ ರುಚಿ ಸವಿಗಾಗಿ ಕಾದಿರುವೆ ನಾನು;
ಬಾ ನನ್ನ ಮಗಳ ಮಗಳೆ,
ಕೆನ್ನೆ ಸುಕ್ಕಿಗೆ ನಗೆ ಮುಗುಳನೊತ್ತು;
ಇಳೆಯ ಬೆಳಗೆ ಹೊಸತು ರುಚಿಯ ಹಾಡ ಬಿತ್ತು.

(ಸೃಜನಸಿರಿ, ಓ, ನನ್ನ ಕಣ್ಮಣಿ, ಪು. ೪)

ಮಗುವು ಪ್ರಾರಂಭದಲ್ಲಿ ಮುಗ್ಧ ಶಿಶುವಾಗಿರುತ್ತದೆ. ಪ್ರಕೃತಿಯು ಆ ಮಗುವನ್ನು ವ್ಯಕ್ತಿಯನ್ನಾಗಿ ರೂಪಿಸುವುದರೊಂದಿಗೆ ಹೊಸ ಮಾರ್ಗಗಳೆಡೆಗೆ ಕೊಂಡೊಯ್ಯಲು ಪ್ರಯತ್ನಿಸುತ್ತದೆ. ಈ ಮಗುವಿನಲ್ಲಿ ಹೊಸತನವನ್ನು ಕಾಣುವ ಹಂಬಲ ಈ ಕವಿಗಿದೆ. ಬದುಕಿನಲ್ಲಿ ಸುಖ ದುಃಖ ಎರಡು ಇರುತ್ತವೆ. ಸುಖ ಬಂದಾಗ ಹಿಗ್ಗದೆ, ಕಷ್ಟಬಂದಾಗ ಕುಗ್ಗದೆ. ಜೀವನದಲ್ಲಿ ಸಿಹಿ–ಕಹಿಗಳ ಅನುಭವವನ್ನು ಸಮಾನವಾಗಿ ಸ್ವೀಕರಿಸಬೇಕು ಎಂಬುದು ಕವಿಯ ಆಶಯ.

ಬದುಕ ಬದುಕಲು
ಮಾವುಬೇಕೂ, ಬೇವೂ ಬೇಕೂ
ಯಾವುದೆನೂ ಅನ್ನದಿರು, ಸಾಕು

(ಸೃಜನಸಿರಿ, ಓ, ನನ್ನ ಕಣ್ಮಣಿ, ಪು. ೪)

ಒಂದು ಮಗುವಿನ ಶ್ರೇಯೋಭಿವೃದ್ಧಿಯನ್ನು ಸಾಧಿಸುವಲ್ಲಿ ಕುಟುಂಬದ ಎಲ್ಲ ಸದಸ್ಯರು ಪ್ರಧಾನಪಾತ್ರ ವಹಿಸುತ್ತಾರೆ. ಹೀಗೆ ಬೇಕಾದ ಗುರಿಯನ್ನು ತಲುಪುವುದಕ್ಕೆ ಕುಟುಂಬದ ಸಹಕಾರ ಸಂಬಂಧದ ಮಹತ್ವವನ್ನು ಕುರಿತು ಹೇಳಿದ್ದಾರೆ.

ತಾಯಿಯ ಅಭಯ
ಪಿತನೆ ಗುರುವು, ಮಾವ ಪೃಥಿವಿ
ನಿನಗಿನ್ನೇನು ಬೇಕು ಮಗಳ ಮುಗುಳೆ?

(ಸೃಜನಸಿರಿ, ಓ, ನನ್ನ ಕಣ್ಮಣಿ, ಪು. ೪)

ಆ ಮಗುವು ಬದುಕಿನಲ್ಲಿ ಯಾವುದಾದರೊಂದು ಸಾಧನೆಯನ್ನು ಮಾಡಿದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ. ಹಾಗಾಗಿ ಇದಕ್ಕೆ ಮಾದರಿಯಾಗಿ ಅವರ ಕುಟುಂಬವಿರುವುದನ್ನು ಹೇಳುತ್ತಾರೆ. ಯಾವುದೇ ಸಾಧನೆಯನ್ನು ಮಾಡಬೇಕಾದರೆ ಅದಕ್ಕೆ ಪರಂಪರೆ ಅಗತ್ಯ. ಅಂತೆಯೇ ಈ ಕವಿ ಕುಟುಂಬದ ಪರಿಸರವನ್ನು ಉದಾಹರಣೆಯಾಗಿ ಕೊಟ್ಟು ಈ ಮಾರ್ಗದಲ್ಲಿ ಮುನ್ನೆಡೆಯಬೇಕೆಂದು ಹೇಳುತ್ತಾರೆ.

ನುಡಿಯೆ ಕಣಿ
ಎತ್ತಿಕೊ ಬಾಳಿಗೊಂದು ನಿನ್ನದೆ ಅಣಿ
ಹಿಂದೆ ನೋಡಿ ಮುಂದೆ ಸಾಗು,
ತಾಯಿ ತಂದೆ ಮಾವ ಅಜ್ಜ ಅಜ್ಜಿಯರ
ಹೆಗಲ ಮೇಲೇರಿ ಹಾರಿ ಅರಿವಿನೇರಿಯನೇರು';
ಲೋಕಾಲೋಕಗಳ ತಾಗು;
ಕಣ್ಣೀರ ಕಂಡು ಬಾಗು;
ಕಾಣು ಕನಸು,
ದುಡಿದುಡಿದು ಹಗಲಿರುಳು
ಮಾಡಿಕೊ ನನಸು
'ಎಲ್ಲಿಯೂ ನಿಲ್ಲದಿರು
ಮನೆಯನೆಂದೂ ಕಟ್ಟದಿರು
ಕೊನೆಯನೆಂದೂ ಮುಟ್ಟದಿರು'

(ಸೃಜನಸಿರಿ, ಓ, ನನ್ನ ಕಣ್ಮಣಿ, ಪು. ೫.)

ಇಲ್ಲಿ ಕವಿ ಎನ್.ಬೋರಲಿಂಗಯ್ಯ ಅವರು ಮಗುವಿಗೆ ಬದುಕಿನ ಮಾರ್ಗದರ್ಶನ ಮಾಡುವುದರೊಂದಿಗೆ. ಕುವೆಂಪು ಅವರ 'ಅನಿಕೇತನ' ಕಾವ್ಯದ ಸಾಲು ಬಳಕೆಯಾಗಿರುವುದು ಇಲ್ಲಿಯೂ ಕುವೆಂಪು ಅವರ ಪ್ರಭಾವವನ್ನು ಗುರುತಿಸಬಹುದಾಗಿದೆ.

ಮಗುವನ್ನು ಕೇಂದ್ರವಾಗಿಟ್ಟುಕೊಂಡು ಯಾವುದೇ ಒಬ್ಬ ವ್ಯಕ್ತಿ ಜೀವನದಲ್ಲಿ ಗುರುತಿಸಿಕೊಳ್ಳಬೇಕಾದರೆ, ಉತ್ತಮ ವ್ಯಕ್ತಿಯಾಗಿ ಕಾಣಿಸಿಕೊಳ್ಳುವುದಕ್ಕೆ ಸಾಧನೆ ಮುಖ್ಯ ಎಂದು ಹೇಳುತ್ತಾ ಅದಕ್ಕೆ ಮಾರ್ಗದರ್ಶನ ಮತ್ತು ಪರಂಪರೆಯ ಚಿತ್ರಣವನ್ನು ನೀಡುತ್ತಾರೆ.

ಜಳಕ – ಪುಳಕ

ಈ ಕಾವ್ಯದಲ್ಲಿ ಮಗುವಿಗೆ ಮಾಡುವ ಪಾಲನೆ–ಪೋಷಣೆಯನ್ನು ಕುರಿತಂತೆ ತಿಳಿಸುತ್ತಾರೆ. ಅದರಲ್ಲಿಯೂ ಪ್ರಧಾನವಾಗಿ ಶಿಶುವಿಗೆ ಜಳಕ ಮಾಡಿಸುವ ರೀತಿ, ಮಗುವಿನಲ್ಲಿನ

ಆಂಗಿಕ ಬದಲಾವಣೆಗಳು ಮತ್ತು ಕುಟುಂಬದಲ್ಲಿ ಕಂಡುಬರುವ ಹರ್ಷ, ಸಂತೋಷವನ್ನು ಕಾವ್ಯದೊಳಗೆ ತರುತ್ತಾರೆ.

ಮಗುವು ಜನಿಸಿದ ನಂತರ ಪಾಲನೆ-ಪೋಷಣೆ ಮಾಡುವ ಸಂದರ್ಭದಲ್ಲಿ ಗಂಡು-ಹೆಣ್ಣು ಎಂದು ಯಾವುದೇ ತಾರತಮ್ಯ ಮಾಡಬಾರದು. ಸಮಾನವಾಗಿ ಕಾಣಬೇಕು ಆದರೆ ಇಂದಿನ ದಿನಗಳಲ್ಲಿ ಹೆಣ್ಣು ಮಗುವು ಜನಿಸಿದಾಗ ಕುಟುಂಬವು ನಿರ್ಲಕ್ಷಿಸುತ್ತದೆ. ಹಾಗಾಗಿ ಹೆಣ್ಣು ಮಗುವನ್ನು ಗಂಡು ಮಗುವಿನಂತೆ ಪೋಷಿಸಿದಾಗ ಆ ಹೆಣ್ಣುಮಗು ದಷ್ಟಪುಷ್ಟವಾಗಿ ಬೆಳೆಯಲು ಸಾಧ್ಯವಾಗುತ್ತದೆ ಎನ್ನುತ್ತಾರೆ.

ಮಗುವಿಗೆ ಜಳಕ ಮಾಡಿಸುವಾಗ ಬೆಚ್ಚಗಿನ ನೀರನ್ನು ಬಳಸಲಾಗುವುದು. ಈ ಬೆಚ್ಚಗಿನ ಸ್ನಾನ ಮಗುವಿನ ದೈಹಿಕ ಮತ್ತು ಬೌದ್ಧಿಕ ಸಮತೋಲನ ಕಾಪಾಡಲು ಸಹಕರಿಸುತ್ತದೆ. ಬಚ್ಚಲು ಮನೆಯ ಸನ್ನಿವೇಶವನ್ನು ಹೀಗೆ ಚಿತ್ರಿಸುತ್ತಾರೆ.

ಬಚ್ಚಲ ಹಂಡೆಯಲಿ
ಕೊತ ಕೊತ ಕುದಿನೀರು
ನಲ್ಲಿಯಲಿ ಜುಳು ಜುಳು
ಕಾವೇರಿ ತಣ್ಣೀರು
ನೀರ್ಮಣೆ ತುಂಬ ನೀ
ರಾವಿ ತುಂಬಿ, ಬೆಚ್ಚಗೆ
ಚಾಚುವ ಹಿತ
ಆಳಕವಾಡ ಹಾಡೂತ
ಬಾಲೆ ಸಹಿತ
ಬತ್ತಲು ದೊಡೆಯಲ್ಲಿ
ಮಿರಿ ಮಿರಿಪ ಮಿಡಿ
ನಾಗರ ಮರಿ; ಹಿರಿ
ಹಿರಿ ಹಿಗ್ಗಿ ನೋಡುವ
ಕಣ್ಣಳೈಸಿರಿ; ಮೂರು
ದಶಕಗಳಂತರದ ನಿರೀಕ್ಷೆಯ ಫಲದೈಸಿರಿ ೨

(ಸೃಜನಸಿರಿ, ಜಳಕ-ಪುಳಕ, ಪು. ೬)

ಈ ಶಿಶುವಿಗೆ ಪ್ರಾರಂಭದಲ್ಲಿ ಆರೈಕೆಗಾಗಿ ಪ್ರಕೃತಿಯಲ್ಲಿ ದೊರೆಯುವ ಮರಗಳ ಎಲೆ, ಬೇರು, ಪುಡಿ, ಎಣ್ಣೆ ಮೊದಲಾದವುಗಳನ್ನು ಬಳಸಿ ಆರೈಕೆ ಮಾಡುತ್ತಾರೆ. ಇದು ಮಗುವಿನ

ಆರೋಗ್ಯವನ್ನು ಕಾಪಾಡುವಲ್ಲಿ ಪ್ರಕೃತಿದತ್ತವಾದ ಗಿಡಮೂಲಿಕೆಗಳು ಪ್ರಧಾನಪಾತ್ರವಹಿಸುತ್ತವೆ. ಅದನ್ನು ಬಳಸುವ ರೀತಿಯಲ್ಲಿ ಹೀಗೆ ಹೇಳುತ್ತಾರೆ.

ಒತ್ತು ಎಣ್ಣೆ, ಮೆತ್ತಗೆ
ಮಿದು ಮೈಗೆ, ಕೈಗೆ
ಇನ್ನೂ ಬಾಯಿಗೂಡಿ
ರದ ನಡು ನೆತ್ತಿಗೆ;
ಮತ್ತೂ ಮೆತ್ತಗೆ
ಇಳಿಯಲಿ ಹರಳೆಣ್ಣೆ
ಜೀವ ಜೀವಾಳದಾಳಕ್ಕೆ
ಹರಳುಗಟ್ಟಿ ಅರಳುವಂತೆ
ಬಾಳ ಹಕ್ಕಿ, ಹೊರು ಹರಕೆ,
ನಿಲ್ಲುವಂತೆ ಸದೃಢ
ಕುಂದದ ಎದೆಗುಂದದ
ಕಂದನ ಕುತ್ತಿಗೆ,
ಸಲ್ಲುವಂತೆ ಕರುಣಾ
ಕ್ರಂದನರಾ ಪತ್ತಿಗೆ ೩

(ಸೃಜನಸಿರಿ, ಜಳಕ–ಪುಳಕ, ಪು. ೭)

ಮಗುವಿಗೆ ಎಣ್ಣೆಯನ್ನು ಹಚ್ಚುವ ರೀತಿಯನ್ನು ತಿಳಿಸುತ್ತಾರೆ.

ಶಿಶು ಜನಿಸಿದ 15 ದಿನಗಳ ನಂತರ ಶಿಶುವಿಗೆ ಹಿತಮಿತವಾದ ಬಿಸಿನೀರನ್ನು ಹನಿಹನಿಯಾಗಿ ಸ್ನಾನ ಮಾಡಿಸಬೇಕು. ತುಳಸಿ, ಬೇವು, ಎಲೆಗಳನ್ನು ನೀರಿನಲ್ಲಿ ಸೇರಿಸಿ ಸ್ನಾನ ಮಾಡಿಸಬೇಕೆನ್ನುತ್ತಾರೆ. ಈ ಬಿಸಿ ನೀರನ್ನು ಕತ್ತರಿಸಿದ ಕೆಳಗಿಳಿಸಿದ ಕರುಳ ಬಳ್ಳಿಗೆ ಹಾಕಬೇಕು ಎನ್ನುತ್ತಾರೆ.

ಸ್ನಾನ ಮಾಡಿಸುವ ಪರಿಯು ಹೀಗಿರುತ್ತದೆ.

ನೀವಿ, ನೀವಿ, ನೀವಿ, ನೀವಿ;
ಓವಿ, ಓವಿ, ಓವಿ, ಓವಿ;
ನೀವಿ ಓವಿ, ಓವಿ ನೀವಿ;
ನಲಿದಳಜ್ಜಿ, ತೊಳೆವುದ
ಕಿಂತ ಜಗಮೊಗದ ಜಿಡ್ಡು

ಗಿಡ್ಡಿಯ ಹೊಳಪನಾರಯಿಸಿ

ಹಾರೈಸಿ, ಹಾರೈಸಿ, ಹಾರೈಸಿ

ಪೂರೈಸಿದರು.

ನಿರಂತರ ನಡೆವ, ಮಗಳ

ಮೊಮ್ಮಗಳ ಜಳಕದಾಟ

ಮೈ ಮರೆತು ೬

(ಸೃಜನಸಿರಿ, ಜಳಕ-ಪುಳಕ, ಪು. ೮)

ಮಗುವನ್ನು ಪ್ರಾರಂಭದ ದಿನಗಳಲ್ಲಿ ಜೋಪಾನ ಮಾಡುವ ಪರಿಯನ್ನು ಚಿತ್ರಿಸುತ್ತಾ.

ಮಗುವನೆತ್ತಿ ಮಡಿಬಟ್ಟೆ

ಯಲಿ ಒದ್ದೆಯನೊರಸಿ

ಕೈಯಾರೆ ಹೊಲಿದಣಿ

ಗೊಳಿಸಿದ, ಮಿರಿ ಮಿರಿಮಿರಿವ

ಕಾಶ್ಮೀರಿ ಶಾಲೂಕಿಸುವ

ಹೊದಿಕೆಯ ಹೊದಿಸಿ

ಮಲಗಿಸಿದರು ಶಿಶು ದೇವತೆಯ

ತೊಟ್ಟಿಲ ಮಿದು ಮೆತ್ತೆಯಲಿ ೭

(ಸೃಜನಸಿರಿ, ಜಳಕ-ಪುಳಕ, ಪು. ೯)

ಮಗುವನ್ನು ಕಂಡರೆ ತಾಯಿಗೆ ಎಲ್ಲಿಲದ ಸಂಭ್ರಮ. ಮಗು ತೋರುವ ಹಾವ-ಭಾವಗಳನ್ನು ಕಂಡು ದೃಷ್ಟಿ ತೆಗೆದು ಲಟಿಕೆ ಮುರಿಯುವುದು ವಾಡಿಕೆ. ಸ್ನಾನಮಾಡಿಸಿ, ಶುಚಿಗೊಳಿಸಿದ ನಂತರ ಶೀತವಾಗದಿರಲೆಂದು ಹಾಕುವ ಸಾಂಬ್ರಾಣಿ ಹೊಗೆ ಆ ಮನೆಯಲ್ಲಿ ಶಿಶುವಿನ ಇರುವಿಕೆಯನ್ನು ಸೂಚಿಸುತ್ತದೆ.

ಲಟಿಕೆ ಮುರಿದಳು ಮುದದಿ

ತಾಯಿ; ಹಾಕಿದಳಜ್ಜಿ

ಸಡಗರದಿ ಗಮಗಮಿಪ

ಸಾಂಬ್ರಾಣಿ ಹೊಗೆ;

ಹರಡುವಂತೆ ಶಿಶು ಜನನ ವಾರ್ತೆ

ನೆರೆ ಹೊರೆಗೆ ೮

(ಸೃಜನಸಿರಿ, ಜಳಕ-ಪುಳಕ, ಪು. ೮)

ಮಕ್ಕಳನ್ನು ತೊಟ್ಟಿಲಿಗೆ ಹಾಕಿ ಜೋಗುಳ ಗೀತೆಯನ್ನು ಹಾಡಿ ಮಲಗಿಸುವುದು, ಮಗುವು ನಿದ್ರಿಸುವುದಕ್ಕೆ ಸೂಕ್ತ ವಾತಾವರಣವನ್ನು ಕಲ್ಪಿಸುತ್ತದೆ ಎಂಬ ಆಶಯ ಕೆಳಗಿನ ಕವನದಲ್ಲಿ ವ್ಯಕ್ತವಾಗಿದೆ.

ಜೋಕಾಲಿ ಗಗ್ಗರ ಟಿಂಟಣಿ
ಗೈವಂತೆ ಬೀಗಿ ತೂಗುತ
ಜೋಡಿದನಿಯಲಿ
'ಹಾಡೊಂದ ಹಾಡುವೆ ಕೇಳೂತ
ಮಲಗು ಮಲಗೆಲೆ ಮಗುವೆ'

(ಸೃಜನಸಿರಿ, ಜಳಕ–ಪುಳಕ, ಪು. ೧೦)

ತೊಟ್ಟಿಲಲಿ ತೂಗುತ್ತಾ ಜೋಗುಳ ಆಡುತ್ತಾ ಮಗುವನ್ನು ತಾಯಿಯಾದವಳು ಮಲಗಿಸುತ್ತಾಳೆ.

ಒಟ್ಟಾರೆ ಕವಿಯು ಪ್ರಕೃತಿ ಮತ್ತು ಮಾನವನಿಗಿರುವ ಬಾಂಧವ್ಯವನ್ನು ಕಲ್ಪಿಸುತ್ತಾ ಮಾನವ ಪ್ರಕೃತಿಯ ಕೂಸು. ಪ್ರಕೃತಿ ಮನುಷ್ಯನನ್ನು ಬೆಳೆಸುತ್ತದೆ, ಪೋಷಿಸುತ್ತದೆ, ಕಲಿಸುತ್ತದೆ. ಮನುಷ್ಯನಾದವನು ಪ್ರಕೃತಿಯಲ್ಲಿನ ಸವಾಲು ಸನ್ನಿವೇಶಗಳನ್ನು ಎದುರಿಸುತ್ತಾ ಮುನ್ನಡೆಯಬೇಕೆಂಬುದು ಕವಿಯ ಆಶಯವಾಗಿದೆ.

ಸ್ವಾದನಾದ

ಬಾಲ್ಯ ಪೂರ್ವದಲ್ಲಿ ಅಂದರೆ ಶೈವಾವಸ್ಥೆಯಲ್ಲಿ ಮಗುವಿನ ದೈಹಿಕ ಸಾಮರ್ಥ್ಯವನ್ನು ವೃದ್ಧಿಸುವ ನಿಟ್ಟಿನಲ್ಲಿ ಪೋಷಕಾಂಶವುಳ್ಳ ಆಹಾರವನ್ನು ನೀಡುತ್ತಾರೆ. ವಿಶೇಷವಾಗಿ ಮನೆಯಲ್ಲಿಯೇ ತಯಾರುಮಾಡುವ ಆಹಾರಗಳಾಗಿರುತ್ತವೆ. ಇದು ಮಗುವಿನ ಜೀರ್ಣಶಕ್ತಿ–ಗನುಗುಣವಾಗಿ ಕಾಲಾವಧಿಯನ್ನು ಆಧರಿಸಿರುತ್ತದೆ. ಮೂರು ತಿಂಗಳು, ಐದು ತಿಂಗಳು, ಒಂಭತ್ತು ತಿಂಗಳು ಹೀಗೆ ಕಾಲಕ್ಕೆ ತಕ್ಕಂತೆ ವಿವಿಧ ಪೋಷಕಾಂಶ ಆಹಾರವನ್ನು ನೀಡಲಾಗುತ್ತದೆ.

ಐದು ತಿಂಗಳ ಹೈದೆ
ಗೆ ಬಗೆ ಬಗೆಯ ಸ್ವಾದ
ದಭಿರುಚಿಯ ನಾದ
ರಾಗಿಯ ಹುರಿಟ್ಟು
ಹುರಿಗಡಲೆ ತಂಬಿಟ್ಟು,
ಹುರಿದಕ್ಕಿ ರವೆ ಉಪ್ಪಿಟ್ಟು,

ಮೆಂತ್ಯ ಗೋಧಿಯ ಸಿಪ್ಪಿಟ್ಟು,

ಎಲ್ಲಕೂ ಹಸುವಿನ ತಾಜಾ

ತುಪ್ಪದ ಒಪ್ಪ;

ಬಪ್ಪರೆ ಬಪ್ಪ; (ಸೃಜನಸಿರಿ, ಸ್ವಾದನಾದ, ಪು. ೧೯)

ಶೈಶಾವಸ್ಥೆಯಲ್ಲಿ ಮಗುವಿಗೆ ನೀಡುವ ಆಹಾರ ಕ್ರಮವನ್ನು ಹೇಳುತ್ತಾರೆ.

ಮಕ್ಕಳಿರುವ ಮನೆಗೆ ಆಟಿಕೆಗಳನ್ನು ತೆಗೆದುಕೊಂಡು ಹೋಗುವುದು ವಾಡಿಕೆ. ಪ್ರಾಣಿ ಪಕ್ಷಿಗಳ ಅನುಕರಣೆಗೈಯ್ಯುವ ಮನರಂಜನಾತ್ಮಕ ಆಟಿಕೆಗನ್ನು ತಮ್ಮ ಕವನದಲ್ಲಿ ಕವಿಯು ವಿಸ್ತೃತವಾಗಿ ತಿಳಿಸಿದ್ದಾರೆ.

ಹೋಗಿ ಬರುವವರ ಕೈಯಲ್ಲಿ

ಚನ್ನಪಟ್ಟಣದ ಚಂದುಳ್ಳಿ

ಗೊಂಬೆ, ರಾಶಿರಾಶಿ...

ನವಿವ ನವಿಲು

'ಕಣ್ಮಣಿ' 'ಕಣ್ಮಣಿ' ಎನ್ನುವ ಗಿಣಿ,

ಬೌ ಬೌ ಬೌ ನಾಯಿ,

ಮಿಯಾಂವ್ ಬೆಕ್ಕು,

ಒತ್ತಿದರೆ ಎದೆಗುಂಡಿ

ಹತ್ತು ತರ ಕೂಗುವ

ಕಮಂಗಿ ಮಂಗ (ಸೃಜನಸಿರಿ, ಸ್ವಾದನಾದ, ಪು. ೧೯)

ಬಾಲ್ಯದಲ್ಲಿ ಮಕ್ಕಳಿಗೆ ಹೆಣ್ಣಾಗಲಿ, ಗಂಡಾಗಲಿ ಸಾಂಪ್ರದಾಯಿಕವಾಗಿ, ಶಾಸ್ತ್ರೋಕ್ತವಾಗಿ ವಿವಿಧ ಬಗೆಯ ಆಭರಣಗಳನ್ನು ಹಾಕಿ ಸಂಭ್ರಮಿಸುವುದನ್ನು ತಮ್ಮ ಈ ಕವನದಲ್ಲಿ ಅಭಿವ್ಯಕ್ತಿಸಿದ್ದಾರೆ.

ಬೆರಳಿಗುಂಗುರ

ಕೊರಳಿಗಾಸರ ಸರ

ಕಿವಿ ಮೂಗಿಗಗಡಿ ಬುಗುಡಿ,

ಬೆಳ್ಳಿನುಲಿದಾರ ಸೊಂಟಕ್ಕೆ,

ಕಾಲಿಗಂದುಗೆ, ಗೆಜ್ಜೆ ಗಿಲಿಗಿಲಿ,

ಮಾನಪಟ ಅರಳೆಲೆ

ಮಾಂಗಾಯಿ (ಸೃಜನಸಿರಿ, ಸ್ವಾದನಾದ, ಪು. ೨೦)

ತಂದೆ-ತಾಯಂದಿರು ಮಗುವಿಗೆ ದೃಷ್ಟಿಯಾಗಬಾರದೆಂಬ ಉದ್ದೇಶದಿಂದ ಪುರೋಹಿತರ ಬಳಿ, ದೇವಸ್ಥಾನದ ಬಳಿ ಹೋಗಿ ತಾಯಿತ, ಅಂತ್ರಗಳನ್ನು ಮಗುವಿಗೆ ಹಾಕಲಾಗುತ್ತದೆ. ಅದು ಮಗುವಿನ ಆರೋಗ್ಯವನ್ನು ಉತ್ತಮ ಸ್ಥಿತಿಯಲ್ಲಿಡುತ್ತದೆ ಎಂಬ ನಂಬಿಕೆ ಜನರಿಗಿದೆ.

ಎಲ್ಲವನು ನುಂಗಿ ನೊಣೆವ ಹಾಗೆ
ಮಂತರಿಸಿದಂತರ ಚೀಟು,
ನವಗ್ರಹ ತಾಯಿತ
ಕೋಮಲ ಕೊರಳಿಗೆ,
ಸಾಧುಗಪ್ಪು ಹಣೆಗೆ,
ಕೆನ್ನೆಗೆ, ಗಲ್ಲಕೆ;
ಕಡೆಗೆ ಮಲಯಜ್ಜಿ
ಬಯಲಜಜ್ಜಿಯರ
ಮುತ್ತಿನ ಸುರಿಮಳೆ

(ಸೃಜನಸಿರಿ, ಸ್ವಾದನಾದ, ಪು. ೨೦)

ಮನೆಯಲ್ಲಿ ಅಜ್ಜಿಯರು ಮಗುವಿಗೆ ದೃಷ್ಟಿಯನ್ನು ನಿವಾಳಿಸಿ ತೆಗೆಯುವುದು ಆ ಮಗುವಿನ ಆರೋಗ್ಯವನ್ನು ಕಾಪಾಡುತ್ತದೆ ಎಂಬ ನಂಬಿಕೆಯಾಗಿರುತ್ತದೆ.

ನಗು ಮಗು ನಗು

ಈ ಕಾವ್ಯದಲ್ಲಿ ಮಗುವು ತಂದೆ-ತಾಯಿ, ನೆರೆಹೊರೆಯ ಮಕ್ಕಳು, ಹಿರಿಯರು, ಪ್ರಕೃತಿಯನ್ನು ನೋಡಿ ಮಗುವು ವ್ಯಕ್ತಪಡಿಸುವ ಪ್ರಕ್ರಿಯೆಯನ್ನು ತಿಳಿಸುತ್ತಾರೆ.

ಇಲ್ಲಿ ಮಗುವಿನ ನಗುವಿಗಾಗಿ ಒಂದು ಕುಟುಂಬ ಹೇಗೆ ಹಂಬಲಿಸುತ್ತದೆ ಎಂಬುದನ್ನು ಬೋರಲಿಂಗಯ್ಯನವರು ತಿಳಿಸುತ್ತಾ;

ನಗು ಮಗು ನಗು; ನಗು ಮಗು ನಗು;
ನಗು ಮಗು ನಗು.
ನೀನು ನಲಿದು ನಗುತಿರೆ;
ಸ್ವರ್ಗವಿದು ನಮ್ಮತಿರೆ.

(ಸೃಜನಸಿರಿ, ನಗು ಮಗು ನಗು, ಪು. ೨೫)

ಹೀಗೆ ಮಗುವಿನ ನಗುವು ಸ್ವರ್ಗಸಮಾನವೆಂದು ಭಾವಿಸುತ್ತಾರೆ.

ಅಪ್ಪನ ಹಾರೈಕೆ, ಅಮ್ಮನ ಮಮತೆಯ ಪೋಷಣೆ, ಗೆಳೆಯರೊಂದಿಗಿನ ಒಡನಾಟ, ಮಗುವಿನ ಬೌದ್ಧಿಕ ಮತ್ತು ದೈಹಿಕ ಬೆಳವಣಿಗೆಗೆ ಸಹಕಾರಿಯಾದುದು ಎಂಬ ಅಂಶ ಈ ಕವನಗಳಲ್ಲಿ ವ್ಯಕ್ತವಾಗಿದೆ.

ಅಪ್ಪ ಹಣ್ಣ ಸುಲಿದು ತಿನಿಸೆ,
ಅಮ್ಮನೊಲಿದು ಹಾಲು ಕುಡಿಸೆ,
ತರುಣ ಅರುಣ ಕಿರಣ ಕರುಣ
ತಗುಲಿ ತಳಿರು ಮಿರುಗುವಂತೆ
ನಗು ಮಗು ನಗು; ನಗು ಮಗು ನಗು.

(ಸೃಜನಸಿರಿ, ನಗು ಮಗು ನಗು, ಪು. ೨೫)

ಚಿಂತೆಯ ಬಿಡು

ಈ ಕಾವ್ಯದಲ್ಲಿ ತಾಯಿಯು ತನ್ನ ಹೆಣ್ಣು ಮಗಳೊಬ್ಬಳ ಶ್ರೇಯೋಭಿವೃದ್ಧಿಯನ್ನು ಸಾಧಿಸುವಲ್ಲಿ ಪಡಬೇಕಾದ ಶ್ರಮವನ್ನು ಕವಿ ತಿಳಿಸಿದ್ದಾರೆ. ಕುಟುಂಬದಲ್ಲಿ ಮಗುವಿನ ಜವಬ್ದಾರಿ ತಂದೆ-ತಾಯಿಯರದಾಗಿದ್ದು, ತಾಯಿ ಪ್ರಧಾನ ಪಾತ್ರವಹಿಸುತ್ತಾಳೆ. ಬಾಲ್ಯದಲ್ಲಿ ಪೋಷಣೆ, ಯೌವ್ವನದಲ್ಲಿ ಹಾರೈಕೆ, ಮಾರ್ಗದರ್ಶನ ಹೀಗೆ ಶಿಕ್ಷಣದಿಂದ ಉದ್ಯೋಗ ದೊರಕಿಸಿ ಕೊಡುವವರೆಗೂ ಆ ಮಗುವಿನ ಉನ್ನತಿಗಾಗಿ ಶ್ರಮಿಸುತ್ತಾರೆ. ಹೀಗೆ ಕಾವ್ಯದ ಮುಖೇನ ಎನ್.ಬೋರಲಿಂಗಯ್ಯ ಅವರು ತಮ್ಮ ಮಗಳಿಗೆ ಮಗುವಿನ ಪೋಷಣೆಯನ್ನು ಕುರಿತು ಸಲಹೆ ನೀಡಿದ್ದಾರೆ.

ಚಿಂತೆಯ ಬಿಡು ಮಗಳೆ,
ಚೆನ್ನಾಗುತ್ತಿದ್ದಾಳೆ ನಿನ್ನ ಮಗಳು;
ಹಿರಿಯಜ್ಜಿಯ ಸಿರಿಯಾಕೈಯಲಿ;
ಹೊತ್ತು ಹೊತ್ತಿಗೆ ಸಕಲ ಪೂರೈಕೆಯಲಿ.

(ಸೃಜನಸಿರಿ, ಚಿಂತೆಯಬಿಡ್ಕಿ, ಪು. ೨೭)

ವಿಶೇಷವಾಗಿ ಅಜ್ಜಿ ಮನೆಯಲ್ಲಿ ಬೆಳೆಯುವ ಮಕ್ಕಳು ಪ್ರೀತಿಯ ಅಕ್ಕರೆ, ಹಾರೈಕೆಯೊಂದಿಗೆ ಬೆಳೆಯುವುದನ್ನು ಕಾಣುತ್ತೇವೆ. ಹೀಗೆ ಕವಿಯ ಮನೆಯಲ್ಲೂ ತಮ್ಮ ಮೊಮ್ಮಗಳಿಗೆ ಅಜ್ಜಿಯ ಆರೈಕೆಯನ್ನು ಕುರಿತು ತಿಳಿಸಿದ್ದಾರೆ.

ಮಲೆಮಗಳ ಸಂಸ್ಕೃತಿ ಮೊಮ್ಮಗಳ
ಪುಣ್ಯವಾಗಲಿ; ಪರ್ವತಾಗ್ರವೆ ಗುರಿ

ಉಳಿದದ್ದೆಲ್ಲ ಒದಗಿಸುವುದು ವಾತಾವರಣ

ಬೆಳೆಯ ಬೆಳೆಯಲು; ನಿನ್ನ ಕರ್ತವ್ಯ

(ಸೃಜನಸಿರಿ, ಚಿಂತೆಯಬಿಡು, ಪು. ೨೭)

ಪ್ರಾರಂಭದಲ್ಲಿ ಮಗುವಿನ ಪೋಷಣೆ ತಂದೆ-ತಾಯಿಯದ್ದಾದರೂ, ತನ್ನ ಸ್ವ-ಸಾಮರ್ಥ್ಯದ ಮೂಲಕ ಜೀವನವನ್ನು ರೂಪಿಸಿಕೊಳ್ಳುವ ಜೀವನಾನುಭವವನ್ನು ಪ್ರಕೃತಿಯಿಂದಲೇ ಕಲಿತು ಬೆಳೆಯಬೇಕು. ಹೀಗೆ ಸಾಂಪ್ರದಾಯಿಕವಾಗಿ ತಂದೆ-ತಾಯಿಯ ಪೋಷಣೆ ಅಗತ್ಯವಾದರೂ, ಬೆಳೆಯುವ ಸಾಮರ್ಥ್ಯ ಮಗುವಿಗೆ ಬಿಡುವಂತದ್ದು.

ಪಿತೃಪಿತಾಮಹರ ನೆನಪಿನಲಿ

ಕೊರಗಿ ಕರಗುವುದು ಬೇಡ;

ಮರುಗುವುದೂ ಬೇಡ ಅವರಿಗಾಗಿ;

ಅವಗಿರಲಿ ಬಿಡು, ಅವರವರ

ಪಾಪ ಪುಣ್ಯ, ಹಾಡು ಪಾಡು.

(ಸೃಜನಸಿರಿ, ಚಿಂತೆಯಬಿಡು, ಪು. ೨೭)

ಈ ಕಾವ್ಯದಲ್ಲಿ ಕವಿಯ ಆಶಯ ಹಿರಿಯರ ಬಗೆಗಿನ ಅನುಕಂಪವಿದ್ದರೂ, ಅಂದರೆ ತಮ್ಮ ಮೊಮ್ಮಗಳಿಗೆ ಭವಿಷ್ಯದ ಬಗೆಗಿನ ಚಿಂತೆಯನ್ನು ಕುರಿತು ಹೇಳುತ್ತಾ ಅವರವರ ಕರ್ತವ್ಯಗಳನ್ನು ಅವರೇ ನಿರ್ವಹಿಸಬೇಕೆಂಬ ಜವಾಬ್ದಾರಿಯುತ ತತ್ವಗಳನ್ನು ಅಭಿವ್ಯಕ್ತಿಸಿದ್ದಾರೆ.

ಯೋಚಿಸು, ಯೋಚಿಸು, ಇವರಿಗಾಗಿ

ಮುಂಬರುವರಿಗಾಗಿ; ಕರಗು

ಕೈಯ್ಯ ಕೂಸಿಗಾಗಿ; ಮೈಯ್ಯ

ಕಸುವನ್ನೆಲ್ಲ ಎರೆ ಧಾರೆ,

ಧಾರೆ ಧಾರೆಯಾಗಿ ತೆರೆಯಲಿ

ಹಲವು ದಾರಿ, ಲೋಕಾಕ್ರಾಂತ

(ಸೃಜನಸಿರಿ, ಚಿಂತೆಯ ಬಿಡು, ಪು. ೨೭)

ಕವಿಯು ತಮ್ಮ ಮೊಮ್ಮಗಳ ಉಜ್ವಲ ಭವಿಷ್ಯಕ್ಕಾಗಿ ತಮ್ಮ ಮಗಳಿಗೆ ತನ್ನ ಶಕ್ತಿ ಸಾಮರ್ಥ್ಯಗಳೆಲ್ಲವನ್ನು ವಿನಿಯೋಗಿಸು ಎಂದು ಕವನದ ಮೂಲಕ ಹೇಳಿದ್ದಾರೆ.

ಚಾತುರ್ಮಾಸ

ಈ ಕಾವ್ಯದಲ್ಲಿ ಮಗುವು ಜೀವನದಲ್ಲಿ ನೈತಿಕತೆಯನ್ನು ಕಲಿಯಬೇಕು. ನೈತಿಕತೆಯನ್ನು ಬದುಕಿನಲ್ಲಿ ಅಳವಡಿಸಿಕೊಂಡು ಹೋಗಬೇಕು ಎನ್ನುತ್ತಾರೆ. ಕೌಟುಂಬಿಕ ಪರಿಸರದ

ನಿಯಮಗಳು, ಸಾಮಾಜಿಕ ನಿಯಮಗಳು, ರೂಢಿ ಸಂಪ್ರದಾಯ, ಆಚಾರ-ವಿಚಾರ ಮೊದಲಾದವು ಜೀವನವನ್ನು ಉತ್ತಮಗೊಳಿಸಬಲ್ಲವು ಎಂಬುದನ್ನು ಕಾವ್ಯದ ಮುಖೇನ ಬೋರಲಿಂಗಯ್ಯ ಅವರು ತಿಳಿಸುತ್ತಾರೆ.

ಚಾತುರ್ಮಾಸದ ಚದುರೆ,
ಕಣ್ಣ ಕುಡಿ ನೋಟದಲ್ಲಿಯೇ ಕುಡಿ
ಸುವಳು ಮಧು ಮದಿರೆ.
ಅವಳಾ ಹಾವ ಭಾವ,
ಅಂದ, ಚಂದ, ಮೈಕೈ
ಥಕಥೈಗಿದೆರೆ![೧]

(ಸೃಜನಸಿರಿ, ಚಾತುರ್ಮಾಸ, ಪು. ೧೪)

ಅಂದರೆ ಕಾಲವು ಬದುಕನ್ನು ಬದಲಾಯಿಸಬಲ್ಲದು ಎನ್ನುತ್ತಾರೆ.

ಅಲಂಕಾರ
ಬತ್ತಲು ಸೊಂಟಕ್ಕೆ
ಕರಿದಾರ,
ಹಣೆಗೆ ತಿಲಕ; ದೃಷ್ಟಿ
ಬೊಟ್ಟು ಕೆನ್ನೆಗೆ;
ಬೆರಳಿಗುಂಗುರ ಸೇವೆ,
ಸೋದರ ಸ್ನೇಹ ಸಂ
ಬಂಧಗಳ ಹಾರೈಕೆ,
ಉಡುಗೆ ತೊಡುಗೆ
ಪೂರೈಕೆ, ಅಜ್ಜಿ
ಯರ ಲಟಿಕೆ ಮುರಿವ
ಮಣಿಹ, ಕಡೆಗೆ;
ಒಟ್ಟಿನಲ್ಲಿ ಮೆರೆ
ದೇವರ ಪುಟ್ಟ ಪ್ರತಿಮೆ ೩ **(ಸೃಜನಸಿರಿ, ಚಾತುರ್ಮಾಸ, ಪು. ೧೫)**

ಮಗುವಿಗಾಗಿ ಸಾಂಪ್ರದಾಯಿಕವಾಗಿ ಮಾಡಬೇಕಾದ ಆಚರಣೆಗಳನ್ನು ಪಾಲಿಸಬೇಕಾದ ನಿಯಮಗಳನ್ನು ಮಾಡಿದಾಗ ಮಗುವು ಆರೋಗ್ಯವಾಗಿರುತ್ತದೆ ಎಂಬ ನಂಬಿಕೆಯಿದೆ. ಅಂದರೆ ಸೊಂಟಕ್ಕೆ ಕರಿದಾರ ಹಾಕುವುದು. ದೃಷ್ಟಿ ಬೊಟ್ಟು ಕೆನ್ನೆಗೆ ಹಾಕುವುದು, ಬೆರಳಿಗೆ ಉಂಗುರ

ಸೇವೆ ಮಾಡುವುದು, ಹಿರಿಯರು ದೃಷ್ಟಿಯನ್ನು ನಿವಾಳಿಸುವುದನ್ನು ಕವನದ ಸಾಲುಗಳಲ್ಲಿ ಕಾಣಬಹುದು.

ಜ್ಯೋತಿಷ್ಯದ ಪ್ರಕಾರ ಮಗು ಜನಿಸಿದ ಕಾಲದ ಆಧಾರದ ಮೇಲೆ ಆ ಮಗುವಿನ ಜನ್ಮಕುಂಡಲಿ, ಭವಿಷ್ಯ, ಒಳಿತು-ಕೆಡಕುಗಳನ್ನು ನಿರ್ಧರಿಸುತ್ತದೆ ಎಂಬ ನಂಬಿಕೆ, ವ್ಯಕ್ತಿಗನುಗುಣವಾಗಿ ಸರಿಹೊಂದುವ ವಾಸ್ತುಶಾಸ್ತ್ರದ ಚಿತ್ರಣ ಕವನಗಳಲ್ಲಿ ವ್ಯಕ್ತವಾಗಿದೆ. ಶಾಸ್ತ್ರೋಕ್ತ ಪರಿಹಾರವನ್ನು ಸೂಚಿಸುವುದು, ಹಸುವನ್ನು, ಚಿನ್ನ-ಬೆಳ್ಳಿಯನ್ನು ದಾನವಾಗಿ ಕೊಡುವುದು, ಪೂಜೆ ಪುರಸ್ಕಾರಗಳನ್ನು ನಡೆಸುವ ಸಂಪ್ರದಾಯವನ್ನು ಕಾಣಬಹುದು.

ನೀ ಹುಟ್ಟಿ ಬಂದ
ಗಳಿಗೆಯ ಲೆಕ್ಕ ಹಿಡಿದು
ನಡಿದಿದೆ, ಎಲ್ಲ ಕೆಲಸ;
ಹಳತು ಹೊಸ
ತರ ಸರಸ ವಿರಸ.
'ವಸ್ತು ವಿಜ್ಞಾನಿಗೂ ವಾಸ್ತುಗರ ಬಡಿತ'
ಈ ಬಾಗಿಲ ಕಿತ್ತು ಅಲ್ಲಗಿಡು,
ಆ ನಲ್ಲಿಯ ಕೊಳಾಯಿ ಇತ್ತ
ಹರಿಯಲಿ, ಇದೆ ಮೂಲೆಯ
ಕೊಠಡಿಗೆ ಮೂಡಲಿ ಕೋಡು,
ಉರಿ ಉರಿಯಲಿ ಇಲ್ಲಿ,
ಸರಿದೀತು ಋಣ ಋಣ
ಅಲ್ಲಿ, ಲೊಚಗುಟ್ಟಿತು ಹಲ್ಲಿ
'ಸತ್ಯ, ಸತ್ಯ'
ಇನ್ನೇನೂ ತೊಂದರೆ
ಇಲ್ಲ, ಎಲ್ಲ ಸಲೀಸು ಸಾಂಗೋಪಾಂಗಸ ೫

(ಸೃಜನಸಿರಿ, ಚಾತುರ್ಮಾಸ, ಪು. ೧೬)

ಇಲ್ಲಿ ಮಗು ಜನಿಸಿದ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳ ಸ್ವರೂಪವನ್ನು ಚಿತ್ರಿಸುತ್ತಾರೆ.

ಎನ್.ಬೋರಲಿಂಗಯ್ಯ ಅವರ ಕಾವ್ಯದಲ್ಲಿ 'ನೈತಿಕತೆ'

ಎನ್.ಬೋರಲಿಂಗಯ್ಯ ಅವರು ಬರಹದಲ್ಲಿ ನೀತಿ ಬೋಧನೆಯನ್ನು ಮಾಡುತ್ತಾ, ತಮ್ಮ ಅಳಿಯನನ್ನು ನಿದರ್ಶನವಾಗಿ ಕೊಡುವುದರ ಮೂಲಕ ಅವರ ಆದರ್ಶ ವ್ಯಕ್ತಿತ್ವವನ್ನು

ತಮ್ಮ ಕಾವ್ಯದಲ್ಲಿ ನಿರೂಪಿಸುತ್ತಾರೆ. ಹೀಗೆ ತಮ್ಮ ಕವನದಲ್ಲಿ ನೈತಿಕತೆಯನ್ನು ಕಟ್ಟುಕೊಡುವಲ್ಲಿ ತಮ್ಮ ಅಳಿಯನನ್ನೇ ಉದಾಹರಿಸಿರುವುದು ವಿಶಿಷ್ಟವಾಗಿ ಕಾಣುವುದರೊಂದಿಗೆ ಕವಿ ಮತ್ತು ಅವರ ಅಳಿಯ ಗುರು ಇವರ ನಡುವಿನ ಬಾಂಧವ್ಯದ ಸ್ವರೂಪವು ಹೀಗಿದೆ.

ಅಳಿಯನಲ್ಲ ಮಗಳಗಂಡ
ನೆನಸಲಿಲ್ಲ; ಮಗಳಗಂಡ
ಮಗನೆತಾನೆ! ಎನಿಸಿಬಿಟ್ಟೆ
ವಂದನೆ, ಅಭಿನಂದನೆ, ಗುರೂ.
ಮಾತಿನಲ್ಲಿ ಇಲ್ಲ ತಳುಕು,
ಮನಸಿನಲ್ಲಿ ಇಲ್ಲ ಹುಳುಕು,
ಲೆಕ್ಕ ಪಕ್ಕ; ಎಲ್ಲ ಚೊಕ್ಕ,
ಬದುಕು ಬಳಸಿ ಅಕ್ಕಪಕ್ಕ

(ಸೃಜನಸಿರಿ, ಅಳಿಯನಲ್ಲ ಮಗಳಗಂಡ, ಪು. ೩೬)

ನೇರ ನಡೆನುಡಿ ಸ್ವಭಾವ, ಸಜ್ಜನ ವ್ಯಕ್ತಿತ್ವವುಳ್ಳ ಪರಿಪೂರ್ಣ ಬದುಕನ್ನು ಕುರಿತು ಹೇಳಿದ್ದಾರೆ.

ಮೋಸವಿಲ್ಲ ದಗಾ ಇಲ್ಲ
ನೇರ ನಡೆಯ ನೀತಿವಿದನು;
ಪಾಠಗೀತ ಮಾಡುವಲ್ಲಿ
ಬಾಯಿಪಾಠ ಖ್ಯಾತಿವಿದನು
ಅತಿಥಿ ದೇವೋಭವ ನಿಷ್ಠ,
ಊಟೋಪಚಾರ ಇಷ್ಟ;
ತಾನೆ ಪಡುವುದಿಲ್ಲ ಕಷ್ಟ,
ಗಂಡಸಂತೆ ತಾನು ಸ್ಪಷ್ಟ.

(ಸೃಜನಸಿರಿ, ಅಳಿಯನಲ್ಲ ಮಗಳಗಂಡ, ಪು. ೩೬)

ನೇರ ನಡೆನುಡಿ ಸ್ವಭಾವ, ಸಜ್ಜನ ವ್ಯಕ್ತಿತ್ವವುಳ್ಳ ಪರಿಪೂರ್ಣ ಬದುಕು, ಅಧ್ಯಾಪಕ ವೃತ್ತಿಯಲ್ಲಿ ಖ್ಯಾತಿ, ಅತಿಥಿಯನ್ನು ದೇವರಂತೆ ಸತ್ಕರಿಸುವ ಗುಣ, ಕಷ್ಟಪಡದೆ ಬದುಕಿನಲ್ಲಿ ಮುನ್ನಡೆಯುತ್ತಿದ್ದರು.

ಇದೆ; ಕೊಂಚ ಮೆರೆವ ಆಸೆ;
ಇಲ್ಲ ಹಠ; ಬೇಕೆ ಬೇಕು;
ಅಲಸಿಯಲ್ಲಿ, ಮಾತುಗಾರ;

ಊಟತಿಂಡಿ ಮೋಜುಗಾರ.
ಬೇಕು ಸ್ವಲ್ಪ ಸ್ವ-ಚಿಂತನೆ;
ಸದ್‌ವಿದ್ಯಾ ಮನಮಂಥನೆ;
ಒಲವು – ಸರಳ ಗುರಿಸಾಧನೆ
ನಲಿವು – ಕಾಯ ಸಂಪಾದನೆ.
ಏನೆ ಇರಲಿ, ಗುರುವು ಗುರುವೆ;
ನಡತೆ ಇಷ್ಟ; ನೀತಿ ಇಷ್ಟ;
ಪ್ರೀತಿಯಿಂದ ನಿನಗೆ ಸಲಿಪೆ
ವಂದನೆ, ಅಭಿನಂದನೆ.

(ಸೃಜನಸಿರಿ, ಅಳಿಯನಲ್ಲ ಮಗಳಗಂಡ, ಪು. ೩೭)

ಒಟ್ಟಾರೆಯಾಗಿ ಈ ಕವನ ತಮ್ಮ ಅಳಿಯನ ಗುಣಗಾನ ಮಾಡಿರುವುದನ್ನು ತಮ್ಮ ಕವನದಲ್ಲಿ ಸವಿಸ್ತರವಾಗಿ ತಿಳಿಸಿದ್ದಾರೆ.

ಎನ್.ಬೋರಲಿಂಗಯ್ಯ ಅವರ ಕಾವ್ಯದಲ್ಲಿ 'ಗ್ರಾಮೀಣ ಪ್ರಜ್ಞೆ'

ಮಹಾಮಸ್ತಕಾಭಿಷೇಕ

ಒಟ್ಟಾರೆ ಈ ಕಾವ್ಯದಲ್ಲಿ ರೈತ ಮತ್ತು ಗ್ರಾಮೀಣ ಬದುಕಿನ ಚಿತ್ರಣವನ್ನೊಳಗೊಂಡಂತೆ, ಗ್ರಾಮೀಣ ಪ್ರದೇಶದಲ್ಲಿ ರೈತರು ದುಡಿಯುವ ಸಂದರ್ಭದಲ್ಲಿ, ಮಳೆ ಬಂದಾಗ ಆ ಮಳೆಯಲ್ಲಿ ನೆನೆದು ಸಂಭ್ರಮಿಸುವುದು. ಆ ಮುಖಾಂತರ ಕೃಷಿ ಚಟುವಟಿಕೆಗಳೊಂದಿಗೆ ನೆಮ್ಮದಿಯ ಬದುಕು ಕಟ್ಟಿಕೊಳ್ಳುವ ಅನಿವಾರ್ಯತೆಯನ್ನು, ಗ್ರಾಮೀಣದ ಬದುಕು-ಬವಣೆಯೊಂದಿಗೆ ಕವಿಯು ತಮ್ಮ ಬಾಲ್ಯದ ನೆನಪಿನ ಚಿತ್ರಣವನ್ನು ವಿವರಿಸಿದ್ದಾನೆ.

ಕಷ್ಟವಾಗದಿದ್ದರೂ ಸ್ನಾನ,
ನಮಗೆ ಇಷ್ಟವಾಗುತ್ತಿರಲಿಲ್ಲ,
ಹಸಿರಾಗಿದೆ ನೆನಪು... ಇಂದಿಗೂ
ಹನ್ನೆರಡಾಳುದ್ದ ಬಾವಿಯಿಂದ ನೀರು
ಸೇದಿ, ಸೇದಿ, ಸೇದಿ, ಸೇದಿ;
ಏದಿ, ಏದಿ, ಏದಿ, ಏದಿ;
ಸೇದಿ, ಏದಿ; ಏದಿ ಸೇದಿ;
ನೆತ್ತಿ ನೋಯೆ, ಬಗಲು ಬಳಲೆ;
ಹೊತ್ತು ತಂದು, ಹತ್ತಾರು;

ನೂರಾರು, ಸಾವಿರಾರು, ಗಜದೂರ,
ಕ್ರಮಿಸಿ, ಆಕ್ರಮಿಸಿ, ತುಂಬಿ ಹಂಡೆ,
ಹೊರೆ ಹೊರೆ ಸೌದೆ, ಮುರಿ ಮುರಿದೊಟ್ಟಿ;
ಕಾಸಿ ಮಾಡುವ ಸ್ನಾನ, ಕಷ್ಟವಾಗದಿದ್ದರೂ
ನಮಗೆ ಇಷ್ಟವಾಗುತ್ತಿರಲಿಲ್ಲ.

(ಸೃಜನಸಿರಿ, ಮಹಾಮಸ್ತಕಾಭಿಷೇಕ, ಪು. ೪೪)

ಈ ಮೇಲಿನ ಸಾಲುಗಳಲ್ಲಿ ಎನ್.ಬೋರಲಿಂಗಯ್ಯವರು ಗ್ರಾಮೀಣ ಪ್ರದೇಶದಲ್ಲಿನ ನೀರಿನ ಸಮಸ್ಯೆಯನ್ನು ಚಿತ್ರಿಸುತ್ತಾ ಪೂರ್ವದಲ್ಲಿ ಹಳ್ಳಿಗಳಲ್ಲಿ ತೆರೆದ ಬಾವಿಗಳಿಂದ ನೀರನ್ನು ಸೇದುತ್ತಿದ್ದರು. ಮೈಲುಗಟ್ಟಲೆ ನಡೆದು ತಮ್ಮ ದೈನಂದಿನ ಚಟುವಟಿಕೆಗಳಿಗೆ ನೀರನ್ನು ತರುವ ಸ್ಥಿತಿಯನ್ನು ಚಿತ್ರಿಸುತ್ತಾ ದಿನನಿತ್ಯದಲ್ಲಿ ಸಾಂಪ್ರದಾಯಿಕವಾಗಿ ಮಾಡುವ ಸ್ನಾನದ ಬಗೆಗಿನ ಮನೋಧೋರಣೆಯನ್ನು ವ್ಯಕ್ತಪಡಿಸಿರುವುದು ಕಾಣುತ್ತದೆ.

ಇಲ್ಲಿ ಮಳೆಗಾಲದ ಅಭಾವದ ವರ್ಣನೆಯನ್ನು ಮಾಡುತ್ತಾ ರೈತನು ಅನುಭವಿಸುವ ಬರಗಾಲದ ಬವಣೆಯನ್ನು ಕಟ್ಟಿಕೊಡುವ ಧಾರುಣ ಸ್ಥಿತಿಯನ್ನು ಕವಿ ಅಭಿವ್ಯಕ್ತಿಸುವುದನ್ನು ಕಾಣುತ್ತೇವೆ.

ಇದು ಮಳೆಗಾಲದ ಮುಲುಕು,
ಬೇಸಿಗೆಯ ಸ್ನಾನದುರಿ, ಪರಿ, ಮತ್ತೂ ಚಳುಕು;
ಬಾವಿಯ ತಳದಲ್ಲೆಲ್ಲೋ ಚುಳುಕು ನೀರು;
ಕುಡಿಯಲೂ ಸಾಲದು, ದುಡಿದು ದಣಿದ ಜನ;
ಹಳ್ಳ ಕೊಳ್ಳಗಳು ಕಿಸಿದಿವೆ ಹಲ್ಲು;
ಬತ್ತಿ ಬಾಯಾರಿದೆ ದೂರದ ಕೆರೆ ಮಂಗಳ;
ದನಕರು, ಪಶುಪಕ್ಷಿ ಮೇವಿರಲಿ,
ಕುಡಿಯಲೂ ಇಲ್ಲ ನೀರು, ನಿಲ್ಲಲೂ ಇಲ್ಲ ನೆರಳು.

(ಸೃಜನಸಿರಿ, ಮಹಾಮಸ್ತಕಾಭಿಷೇಕ, ಪು. ೪೪)

ಹೊಲಗದ್ದೆಗಳಲ್ಲಿ ದುಡಿಯುವ ರೈತನ ಪ್ರಾಮಾಣಿಕತೆಯನ್ನು ತಿಳಿಸುವುದರೊಂದಿಗೆ ರೈತನಿಗೂ ಭೂಮಿಗು ಇರುವ ಸಂಬಂಧವನ್ನು ತಿಳಿಸುತ್ತಾರೆ.

ರೈತನು ಬೆಳಿಗ್ಗೆಯಿಂದ ಸಂಜೆಯವರೆಗೂ ಬಿಸಿಲು, ಚಳಿ, ಮಳೆ, ಗಾಳಿ ಯಾವುದನ್ನು ಲೆಕ್ಕಿಸದೆ ತನ್ನ ಕಾಯಕದಲ್ಲಿ ನಿರತವಾಗಿರುತ್ತಾರೆ. ಅವನ ಪ್ರಮುಖ ಉದ್ದೇಶ ಒಂದೇ

ಆಗಿರುತ್ತದೆ. ಭೂಮಿಗೆ ತನ್ನನ್ನು ತಾನು ಅರ್ಪಿಸಿಕೊಳ್ಳುವುದಾಗಿರುತ್ತದೆ. ಹೀಗೆ ರೈತನ ಕಾಯಕ ಸ್ವರೂಪ ಕವಿ ತಿಳಿಸುತ್ತಾರೆ.

ಹಗಲಿಡೀ ದುಡಿವ ಜನಕೆ,
ನೆತ್ತಿಯಲಿ ಸುಡುವ ಸೂರ್ಯ
ಮೈದುಂಬಿ ಜುಳು ಜುಳು ಹರಿವ ಬೆವರು;
ಬೀಸಿ ಬರವು ಗಾಳಿಯಲಿ ತೇಲಿ
ಬರುವ ಗಂಧವತೀ ಭೂಧೂಳುಸವರು
ಬೇರೆನಾದರೂ ಮಾಡುತ್ತೇವೆ;
ಹೊಲ ಉಳುತ್ತೇವೆ, ಬೀಜ ಬಿತ್ತುತ್ತೇವೆ;
ಹರಗಿ ಪೈರು ತೆಳು ಮಾಡುತ್ತೇವೆ; ಕಳೆ
ಕೀಳುತ್ತೇವೆ, ಮಣ್ಣು ಧೂಳಿನಲಿ ಬಿದ್ದು ಹೊರಳುತ್ತೇವೆ
ನೀರು ಬೊಗ್ಗಡ ಹೊರುತ್ತೇವೆ, ಪೈರಿಗೆ, ಪಚ್ಚೆಗೆ;
ಮತ್ತೇನಾದರೂ ಮಾಡುತ್ತೇವೆ, ಸ್ನಾನ
ಮಾತ್ರ ಸಾಧ್ಯವಿಲ್ಲ. ಬೆವರಿನ ಸ್ನಾನ ಹತ್ತಾರು ಸಲ ಹೊರತು.
ಅರೆಬೆತ್ತಲ ಮೈಗೆ ಬಿಸಿಲ ಸ್ನಾನ ಅನುದಿನ ದಿನವೂ;
ಬಿಸಲು ಬೆವರು ಕೊಡಿಯೊಡಿ ಹುಟ್ಟಿದ ಕಮಟು
ವಾತಾವರಣದಿ ಹರಡಿ ಹಿತವೋ ಹಿತ;
ನೆಲತಾಯಿ ಪಾದಾರವಿಂದಕ್ಕೆ ಅರ್ಪಿತವೋ ಅರ್ಪಿತ.

(ಸೃಜನಸಿರಿ, ಮಹಾಮಸ್ತಕಾಭಿಷೇಕ, ಪು. ೪೫)

ರೈತನು ಶ್ರಮವಹಿಸಿ ದುಡಿದಾಗ ಮಾತ್ರ ಭೂಮಿ ತಾಯಿಯು ರೈತನಿಗೆ ಫಲವನ್ನು ನೀಡುತ್ತಾಳೆ. ಹಾಗಾಗಿ ರೈತನು ವೃತ್ತಿಯಲ್ಲಿ ಪ್ರಾಮಾಣಿಕತೆಯನ್ನು ಕಾಪಾಡಬೇಕಾದ ಅವಶ್ಯಕತೆ ಇದೆ ಎಂದು ಹೇಳುತ್ತಾರೆ. ರೈತನು ಅಲಸಿಯಾಗಿರಬಾರದು, ಉತ್ಸುಕನಾಗಿರಬೇಕು. ಬೆವರು ಸುರಿಸಿ ದುಡಿದಾಗ ಮಾತ್ರ ಆತನು ನೆಮ್ಮದಿಯಾಗುತ್ತಾನೆ. ಈ ಕೃಷಿ ಕಾರ್ಯದಲ್ಲಿ ತೊಡಗಲು ರೈತನಾದವನು ಉತ್ತಮವಾದ ಆಹಾರವನ್ನು ಸೇವನೆ ಮಾಡಬೇಕು. ಈ ಆಹಾರ ಸೇವನೆ ಮಾಡಿದಾಗ ಆತ ಹೆಚ್ಚು ಶಕ್ತಿವಂತನಾಗಿ ಮತ್ತಷ್ಟು ದುಡಿಯಲು ಸಾಧ್ಯವಾಗುತ್ತದೆ.

ಯಾರು ಹೇಳಿದರಿದನು ನಾತವೆಂದು?
ಅನಾಥ ಬಂದು! ಕೋಟಿ ಕೋಟಿ ಕರ್ಮಣ್ಯೇವಾಧಿಕಾರಸ್ಥರು
ಸುರಿಸಿದ ಬೆವರು ಸೃಜಿಸಿದ

ಭತ್ತ, ಗೋಧುವೆ, ರಾಗಿ, ಜೋಳ,
ಹೂಹಣ್ಣು, ಕಾಯಿಪಲ್ಲೆ, ಸೊಪ್ಪುಸೆದೆ,
ಕಾರಂಜಿ, ಕಾಮಕಸ್ತೂರಿ ಜೀವ
ಜೀವಾಳಕ್ಕಿಳಿಯದಿದ್ದರೆ
ಹರಿದೀತು ಹೇಗೆ ಬಿಸಿರಕ್ತ?
ಅರಳೀತು ಹೇಗೆ ಹೊಸಬದುಕು?
ಸ್ನಾನವಿಲ್ಲದ ಜನರನಾಸ್ತಕ ಕ್ರಿಯೆಯೆ ಪ್ರಿಯ ಪ್ರಕೃತಿಗೆ.

(ಸೃಜನಸಿರಿ, ಮಹಾಮಸ್ತಕಾಭಿಷೇಕ, ಪು. ೪೫)

ಶ್ರಮವಹಿಸಿ, ದುಡಿದಾಗ ಅವರ ಬದುಕು ಸಾರ್ಥಕವಾಗುತ್ತದೆ ಎಂದು ಹೇಳುತ್ತಾರೆ. ರೈತನು ಕಾರ್ಮಿಕನು ಹೌದು. ರೈತನು ಕೃಷಿ ಕಾರ್ಯದಲ್ಲಿ ಮಾತ್ರ ತೊಡಗಿಕೊಳ್ಳುವುದಲ್ಲದೆ ಕೃಷಿ ಸಂಬಂಧಿತ ಕಾರ್ಯಗಳಲ್ಲಿ ನಿಷ್ಠೆಯಿಂದ ಶ್ರಮವಹಿಸಿ ದುಡಿಯುತ್ತಾನೆ. ರೈತನು ಕೃಷಿಗೆ ಪೂರಕವಾದ ಚಟುವಟಿಕೆಗಳನ್ನು ಸಮಯಕ್ಕೆ ಸರಿಯಾಗಿ ಮಾಡುತ್ತಾನೆ. ಗ್ರಾಮೀಣ ಪ್ರದೇಶದಲ್ಲಿ ಮನೆಗಳಲ್ಲಿ ಕೋಳಿ ಹುಂಜಗಳನ್ನು ಸಾಕಿರುತ್ತಾರೆ. ಈ ಕೋಳಿ ಹುಂಜಗಳು ಬೆಳ್ಳಿಗ್ಗಿನ ಸಮಯದಲ್ಲಿಯೇ ಕೂಗಿ ಜನರನ್ನು ಎಚ್ಚರಗೊಳಿಸುತ್ತವೆ. ಅಂತೆಯೇ ರೈತನು ಈ ಕೋಳಿ ಕೂಗುವಿಕೆಯನ್ನೆ ಗಡಿಯಾರವೆಂದು ಭಾವಿಸಿ ತನ್ನ ಕಾರ್ಯ ಚಟುವಟಿಕೆಗಳಲ್ಲಿ ಮಗ್ನರಾಗುವುದು ಈ ಕೆಳಕಂಡಂತೆ ಕಾಣಬಹುದು.

ಧಾರ್ಮಿಕ ಸ್ನಾನದಂತಲ್ಲ ಕಾರ್ಮಿಕ ಸ್ನಾನ;
ಉಂಟು ಸಮಯಾಸಮಯ
ಮುಂಗೋಳಿಗೂಡಿಗೆ ಹಿಮ್ಮೇಳವಾಗಬೇಕು, ದನಕರು
ಗೊಂತುಗಳೆಚಿ, ಆಡು ಕುರಿ ಆಚೆಗಟ್ಟಿ, ಕೊಟ್ಟಿಗೆಯ
ರಾಶಿ ರಾಶಿ ಸಗಣಿ ಗೋರಿ, ಕೊಡಕೊಡಗಂಜಲ ತೋಡಿ,
ಹೊತ್ತು ಹೊಲಕ್ಕಿ, ಆಸರೆಗೊಟ್ಟು ಬೆಳೆವ ಫಲಕ್ಕೆ,
ಇಟ್ಟು ಕಲಗಚ್ಚು, ಕರುಬಿಟ್ಟು, ಹಾಲ್ಗರೆದು
ಹೊತ್ತು ಮೂಡುವ ಮುನ್ನವೆ ಹೊತ್ತು
ಹೊರ ಹೊರಡಬೇಕು, ನೇಗಿಲು, ನೊಗ, ಕುಂಟೆ, ಕುಂಟೆ, ಕೂರಿಗೆ
ಹೆಗಲ ಮೇಲೆ, ಹೆಣಭಾರ
ನೆಲತಾಯೆದೆಯನುತ್ತು ಬಿತ್ತು, ಹೊತ್ತು ಮಾವಿನ ಹೊತ್ತಿಗೆ
ಪೂರೈಸಬೇಕು ಅರೆದಿನದ ಕಜ್ಜ; ಇಲ್ಲದಿರೆ ಸೊರಗೀತು
ಕರುಳು ಕರುಳು ಬಳ್ಳಿ. (ಸೃಜನಸಿರಿ, ಮಹಾಮಸ್ತಕಾಭಿಷೇಕ, ಪು. ೪೬)

ರೈತನು ಈ ಮೇಲೆ ತಿಳಿಸಿದ ಕಾರ್ಯಗಳೆಲ್ಲವನ್ನು ಮುಗಿಸಿ ಸಮಯಕ್ಕೆ ಸರಿಯಾಗಿ ದುಡಿಯಲು ಹೊಲಕ್ಕೆ ಸಜ್ಜಾಗುತ್ತಾನೆ.

ರೈತನು ಮುಂಜಾನೆ ಎದ್ದು ಮುಂಜಾವಿನ ಕೆಲಸ ಕಾರ್‍ಯಗಳನ್ನು ಮುಗಿಸಿ, ನಂತರ ಹೊಲಗದ್ದೆಯಲ್ಲಿ ವಿಶ್ರಾಂತಿಯಿಲ್ಲದೆ ದುಡಿಯುವುದಲ್ಲದೇ ಹೊತ್ತಿಗೊತ್ತಿಗೆ ಆಹಾರ ಸೇವನೆ-ಯಿಲ್ಲದೆ ಹೋದರೆ ಸೊರಗಬೇಕಾಗುವುದು ಎಂಬುದನ್ನು ಕಾವ್ಯದಲ್ಲಿ ಕಾಣಬಹುದಾಗಿದೆ.

ಮನುಷ್ಯನಿಗೆ ಶುಚಿತ್ವ ಮುಖ್ಯ ಎಂದು ಹೇಳುತ್ತಾರೆ. ಆದರೆ ಎನ್.ಬೋರಲಿಂಗಯ್ಯ ಅವರು ಹೇಳುವಂತೆ ಸ್ನಾನ ಮುಖ್ಯವಾಗಿ ಬೇಕಾದುದು ಮೈಗಲ್ಲ ಮನಸ್ಸಿಗೆ ಎಂದಿದ್ದಾರೆ. ಅಂದರೆ ದೇಹದಲ್ಲಿನ ಕೊಳೆ ತೆಗೆಯಲು ಸ್ನಾನ ಮಾಡುವ ಮೂಲಕ ದೇಹವನ್ನು ಸ್ವಚ್ಛವಾಗಿಡಲು ಬಯಸುತ್ತೇವೆ. ಆದರೆ ಶುದ್ಧ ಮನಸಿಗನಾಗಿರಬೇಕಾದರೆ ಮನೋ ದೌರ್ಬಲ್ಯಗಳಿಂದ ಮುಕ್ತವಾಗಿರಬೇಕೆಂಬುದು ಕವಿಯ ಆಶಯವಾಗಿದೆ.

ಸ್ನಾನವಿಲ್ಲವೆಂದರೆ, ಸ್ನಾನವೇ ಇಲ್ಲವೆಂದರ್ಥವಲ್ಲ.
ಮಾಡುತ್ತೇವೆ ವಾರಕ್ಕೆ, ಪಕ್ಷಕ್ಕೆ, ಮಾಸಕ್ಕೆ
ಹಬ್ಬಕ್ಕೆ, ವಿಶೇಷ ಹುಣ್ಣಿಮೆಗೆ, ಮತ್ತೆ
ಬಿಡುವು ಸಿಕ್ಕಂತೆ, ಗಡುವು ಬಿಟ್ಟು ಕೊಟ್ಟು
ದೃಷ್ಟಿ ಬೊಟ್ಟನ್ನಿಡಬೇಡ ಸರಳ ಬದುಕಿಗೆ, ನೆಪಮಾಡಿ
ಸ್ನಾನ; ಅಗತ್ಯ ಆಗಾಗ, ಅನಿವಾರ್ಯವಲ್ಲ.
ಮಾಕಂತಿರೋ ಸ್ನಾನ ಮುಖ್ಯ ಬೇಕಾದದ್ದು,
ಮನಸ್ಸಿಗೆ ಮೈಗಲ್ಲ. **(ಸೃಜನಸಿರಿ, ಮಹಾಮಸ್ತಕಾಭಿಷೇಕ, ಪು. ೪೭)**

ಇಲ್ಲಿ ರೈತನು ಸ್ವಚ್ಛ ಮನಸ್ಸುಳ್ಳವನಾಗಿರುತ್ತಾನೆ. ಆತನ ಮನಸ್ಥಿತಿ ನೀತಿಯುಕ್ತವಾದುದಾಗಿರುತ್ತದೆ ಎಂದು ಹೇಳುತ್ತಾ ಸ್ನಾನ ಎಂಬ ಶುದ್ಧತೆಯ ಕಲ್ಪನೆ ದೇಹಕ್ಕಲ್ಲ, ಮನಸ್ಸಿನ ಶುದ್ಧತೆಗೆ ಸಂಬಂಧಿಸಿದುದಾಗಿದೆ ಎನ್ನುತ್ತಾರೆ.

ಇಲ್ಲಿ ಎನ್.ಬೋರಲಿಂಗಯ್ಯ ಅವರು ರೈತನನ್ನು ಶ್ರವಣ ಬೆಳಗೋಳದ ಗೊಮ್ಮಟೇಶ್ವರನಿಗೆ ಹೋಲಿಸುತ್ತಾ ಈ ಪ್ರತಿಮೆ ಹೇಗೆ ಮಳೆ, ಗಾಳಿ, ಬಿಸಿಲು ಯಾವುದನ್ನು ಲೆಕ್ಕಿಸದೆ ನಿಂತಿದೆಯೊ, ಹಾಗೆಯೇ ರೈತನು ಕೂಡ ತನ್ನ ಕೆಲಸದಲ್ಲಿ ಬಿಸಿಲು, ಮಳೆ, ಗಾಳಿಗೆ ಮೈಯಾಡಿ ನಿಲ್ಲುವ ದೇಹ, ಭಾವಗಳೆರಡು ಗೊಮ್ಮಟೇಶನಂತೆಯೆ ಎಂದು ಹೇಳುತ್ತಾ, ಬೋರಲಿಂಗಯ್ಯ ಅವರು ರೈತನನ್ನು ಗೊಮ್ಮಟೇಶ್ವರನ ಪ್ರತಿಮೆಗೆ ಸಮೀಕರಿಸಿದ್ದಾರೆ.

ಮೈ ಮನಸ್ಸು

ರೈತನು ಶ್ರಮಜೀವಿಯಾಗಿದ್ದು, ಜವಬ್ದಾರಿಯುತ ವ್ಯಕ್ತಿಯಾಗಿರುತ್ತಾನೆ. ಆತ ಮಾಡುವ ಕಾರ್ಯದಲ್ಲಿ ನಿಷ್ಠೆ, ಕಾಳಜಿಯುಳ್ಳ ಅಂಶಗಳನ್ನು ನೋಡಬಹುದು. ಇತರೆ ಸಂಗತಿಗಳು ಅಮುಖ್ಯವೆನಿಸದಿದ್ದರೂ, ಕೃಷಿ ಪ್ರಮುಖವಾಗಿದ್ದು ಕೃಷಿ ಕಾರ್ಯದ ಒತ್ತಡ ನಿರ್ವಹಣೆ-ಯೊಂದಿಗೆ ಸಂಸಾರದ ನಿರ್ವಹಣೆಯೂ ಮುಖ್ಯವಾಗಿರುತ್ತದೆ.

ಒಂದೆ ನಾಣ್ಯದ ಎರಡು ಮುಖ, ಮೈ ಮನಸು
ಕನಸು ನನಸಾದರೆ ಎರಡಕ್ಕೂ ಹಿತ; ಸಂಯುಕ್ತ.
ಕುಂತರೂ ಅದೇ, ನಿಂತರೂ ಅದೆ ಚಿಂತೆ
ಒಂದೆ, ರೈತನದು, ಹೊಲದ್ದು, ಮನೆಯದ್ದು.
ಅಂತರಂಗ ಬಹಿರಂಗ ಏಕೋಪಮಸಂಗ
ಹೊಲದಲ್ಲಿ ಮನೆಯ ಚಿಂತೆ, ಮನೆಯಲ್ಲಿ ಹೊಲದ
ಚಿಂತೆ; ಕನಸ ನನಸುಗಳ ನಡುವೆ ತಿಕ್ಕಾಟ
ನಡೆವನಕ ನಿಶ್ಚಿಂತೆಯಿಲ್ಲ ನಡೆನುಡಿಗೆ

(ಸೃಜನಸಿರಿ, ಮೈಮನಸು, ಪು. ೪೦)

ಇಲ್ಲಿ ರೈತನ ಹೊಲದಲ್ಲಿ ಉತ್ತಮವಾದ ಬೆಳೆಯನ್ನು ಬೆಳೆದು ಅಧಿಕ ಆದಾಯವನ್ನು ಸಂಪಾದಿಸಬೇಕು ಎಂಬ ಭಾವನೆ ರೈತನದು. ಮತ್ತೊಂದು ಮನೆಯ ಯಜಮಾನ ಮನೆಗಳಲ್ಲಿ ಕೃಷಿಯ ಉಪಕಸುಬಾದ ಪಶುಸಂಗೋಪನೆ ದನ, ಕುರಿ, ಮೇಕೆ ಸಾಗಾಣಿಕೆಯೊಂದಿಗೆ ಅವುಗಳ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಕಂಡುಬರುತ್ತದೆ. ಅದರೊಟ್ಟಿಗೆ ಸಂಸಾರದ ಜವಾಬ್ದಾರಿ ಮಕ್ಕಳ ಜವಬ್ದಾರಿ ನೋಡಿಕೊಂಡು ಸಂಸಾರವನ್ನು ಮುನ್ನೆಡೆಸುವುದು ಕಂಡುಬರುವುದು.

೩.೩. ವಚನಗಳಲ್ಲಿ ವೈಚಾರಿಕ ಪ್ರಜ್ಞೆ

ವಚನ ಕಟ್ಟಿದ ಅಲ್ಲಮ – ಇದು ಬೋರಲಿಂಗಯ್ಯ ಅವರ ವಿಮರ್ಶಾ ಕೃತಿಯು ಆಗಿದೆ. ಮಧ್ಯಕಾಲೀನ ವಚನ ಸಾಹಿತ್ಯದಲ್ಲಿ ಅಲ್ಲಮಪ್ರಭು ಒಬ್ಬ ವ್ಯಕ್ತಿಯನ್ನು ತನ್ನ ಸಾಧನೆಗಳನ್ನು ಮಾಡಿದ ಬಗೆ ಮತ್ತು ಆತನ ವಚನಗಳ ಮೌಲ್ಯಗಳನ್ನು ಒತ್ತಿ ಹೇಳುವುದು ಬೋರಲಿಂಗಯ್ಯ ಅವರ ಉದ್ದೇಶವಾಗಿದೆ, ಇವರು ಆತನನ್ನು ಒಬ್ಬ ಸಮಾಜ ವಿಜ್ಞಾನಿಯಾಗಿ, ತತ್ವ ಚಿಂತಕನನ್ನಾಗಿ ಒಬ್ಬ ದಾರ್ಶನಿಕನಾಗಿ, ಜ್ಞಾನಸೀಮಾಂತ ಅನ್ವೇಷಕನಾಗಿ ನಿರ್ವಚಿಸುವ ಪ್ರಯತ್ನಮಾಡಿದ್ದಾರೆ. ಈ ಪ್ರಯತ್ನ ಮಾಡುವ ಸಂದರ್ಭದಲ್ಲಿ ಎನ್.ಬೋರಲಿಂಗಯ್ಯ ಅವರು

ಅಲ್ಲಮಪ್ರಭುವನ್ನು ಷಟ್ಸ್ಥಲ ಆಧಾರಿತವಾಗಿ ನೋಡದೆ ಒಟ್ಟು ನೆಲೆಗಟ್ಟಿನಲ್ಲಿ ನೋಡುವುದು ಕಂಡುಬರುತ್ತದೆ. ಈ ಅಲ್ಲಮವನ್ನು ಹೊಸದಾಗಿ ನೋಡುವ ದೃಷ್ಟಿಕೋನದಿಂದ ವಿವಿಧ ಭಾರತೀಯ ಮತ್ತು ಪಾಶ್ಚಾತ್ಯರ ತತ್ವಸಿದ್ಧಾಂತಗಳ ಅಧ್ಯಯನ ಮಾಡಿ ವಿಮರ್ಶಿಸುವುದು ಕಂಡುಬರುತ್ತದೆ. ವಚನಕಾರ ಅಲ್ಲಮನನ್ನು ಕುರಿತಂತೆ ಇದುವರೆಗೆ ಕನ್ನಡದಲ್ಲಿ ಬಂದಿರುವ ಡಿ.ಆರ್.ನಾಗರಾಜ್ ಅವರ ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ ಮತ್ತು ಸಿದ್ದೇಶ್ವರ ಸ್ವಾಮಿಗಳ ಅಲ್ಲಮ ಪ್ರಭುದೇವರ ನಿರ್ವಚನ ಗ್ರಂಥಗಳು ಮತ್ತು ಭಾರತೀಯ ಕೃತಿಗಳಾದ ಸುರೇಂದ್ರನಾಥದಾಸಗುಪ್ತ, ಅಭಿನವಗುಪ್ತ, ಪಾಶ್ಚಾತ್ಯರ ಎಡ್ವರ್ಡ್ ಸೈಡ್ ಮೊದಲಾದವರ ಚಿಂತನೆಗಳನ್ನು ಬಳಸಿಕೊಂಡು ಎನ್.ಬೋರಲಿಂಗಯ್ಯ ಅವರು ಅಲ್ಲಮನನ್ನು ತಮ್ಮದೇ ಆದ ನೆಲೆಯಲ್ಲಿ ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ. ಹಾಗಾಗಿ ವಚನ ಸಾಹಿತ್ಯದಲ್ಲಿ ಅಲ್ಲಮನ ಸ್ಥಾನವನ್ನು ವೈಭವೀಕರಿಸುವುದು ಕಂಡುಬರುತ್ತದೆ.

ಎನ್.ಬೋರಲಿಂಗಯ್ಯ ಅವರು ಅಲ್ಲಮ ಪ್ರಭುವಿನ ವಚನಗಳನ್ನು ಪರಾಮರ್ಶಿಸಲು ಮೂರು ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ತಂದಿದ್ದಾರೆ.

೧. **ಸಂಗೀತದ ಸಾಧ್ಯತೆ** – ಅಂದರೆ ವಚನಕಾರ ಅಲ್ಲಮನು ತನ್ನ ವಚನ ರಚನೆಯ ಸಂದರ್ಭದಲ್ಲಿ ಸಂಗೀತ ಗುಣವನ್ನು ಅಳವಡಿಸಿರುವುದರ ಬಗ್ಗೆ ಮತ್ತು ಸಂಗೀತ ಶೈಲಿ ಅವರ ವಚನಗಳಲ್ಲಿ ಕಂಡುಬರುವುದು.

೨. **ಭಾಷಾ ಸಾಧ್ಯತೆ** – ವಚನಗಳಲ್ಲಿ ಬಳಕೆಯಾಗುವ ಭಾಷಾ ಸೌಂದರ್ಯವು ಅತ್ಯಂತ ಮುಖ್ಯವಾದುದು. ಅವರು ಸರಳ ಭಾಷಾ ಶೈಲಿಯಲ್ಲಿ ವಚನಗಳನ್ನು ರಚಿಸಿದ್ದು, ವಚನಗಳಲ್ಲಿ, ಪ್ರತಿಮಾ, ಗಾದೆ, ಒಗಟು, ನುಡಿಗಟ್ಟು, ಪ್ರಾದೇಶಿಕತೆ, ಗ್ರಾಮೀಣ ಸೊಗಡು ಮೊದಲಾದವುಗಳು ಕಂಡುಬರುಬವುದು ವಿಶೇಷವಾಗಿರುತ್ತದೆ. ಈ ನೆಲೆಗಟ್ಟಿನಲ್ಲಿ ಎನ್.ಬೋರಲಿಂಗಯ್ಯ ಅವರು ವಚನಗಳನ್ನು ಒರೆಹಚ್ಚುವುದರ ಮುಖಾಂತರ ಅಲ್ಲಮನ ವಚನಗಳ ಮೌಲ್ಯ ಹೇಳುವುದು ಬೋರಲಿಂಗಯ್ಯ ಅವರ ಉದ್ದೇಶವಾಗಿರುತ್ತದೆ.

೩. **ಬ್ರಹ್ಮಾಂಡ ವಿಕಾಸದ ಸಾಧ್ಯತೆ** – ಅಂದರೆ ಈ ಜಗತ್ತಿನ ಉಗಮ, ವಿಕಾಸ ಮತ್ತು ಉಗಮಕ್ಕೆ ಕಾರಣಗಳನ್ನು ಕುರಿತು ಅಲ್ಲಮಪ್ರಭುವಿನ ವಚನಗಳ ಸಾರವನ್ನು ಹೇಳುವುದು ಕಂಡುಬರುವುದು. ಹೀಗೆ ಎನ್.ಬೋರಲಿಂಗಯ್ಯ ಅವರು ಅಲ್ಲಮನನ್ನು ವಿವಿಧ ನೆಲೆಗಟ್ಟಿನಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ.

ಈ ಪರಿಕಲ್ಪನೆಗಳನ್ನು ಶೈವ ಮತ್ತು ವೀರಶೈವ ಮಾರ್ಗದ ಹಿನ್ನೆಲೆಯಲ್ಲಿ ಸಮೀಕರಿಸುವುದು ಎನ್.ಬೋರಲಿಂಗಯ್ಯ ಅವರ ಉದ್ದೇಶವಾಗಿರುತ್ತದೆ. ಇದನ್ನು ಕಾಲ, ವ್ಯಕ್ತಿ ಮತ್ತು ತತ್ವಗಳ ದೃಷ್ಟಿಯಲ್ಲಿ ವಚನಗಳನ್ನು ನೋಡುವುದು ವಿಶೇಷವಾಗಿ ಕಂಡುಬರುತ್ತದೆ.

ಈ ವಿಮರ್ಶಾ ಕೃತಿಯಲ್ಲಿ ಕಂಡುಬರುವ ಉಪಶೀರ್ಷಿಕೆಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಈ ಕೆಳಕಂಡಂತೆ ವಿಂಗಡಿಸಿಕೊಳ್ಳಲಾಗಿದೆ.

೧. ಉದಕ ಮೂರುತಿಯಾಗಿ ಉದಯವಾಯಿತು ಪಿಂಡಿಗೆಯಲಿ
೨. ರುದ್ರಯೋನಿ
೩. ಲೀಲೆಯಾದೆಡೆ ಉಮಾಪತಿ, ಲೀಲೆ ತಪ್ಪಿದಡೆ ಸ್ವಯಂಭೂ
೪. ಶೀಲಸಂಬಂಧಿಗಳು ಜಾತ್ಯಂಧರು
೫. ಆತ್ಮದರ್ಶನದ ಆತ್ಯಂತಿಕತೆ
೬. ಸತ್ತವರು ಬದುಕಿದವರ ಹೊತ್ತರು
೭. ಆಳವಿಲ್ಲದ ಸ್ನೇಹಕ್ಕೆ ಮರಣವೇ ಮಹಾನವಮಿ
೮. ಒಳಗಣ ರಣರಂಗ ಹೊರಗಣ ಶೃಂಗಾರ.
೯. 'ನೀ' 'ನಾ' ಎಂಬುದೇ? ತೆರೆಹಿಲ್ಲ.
೧೦. ಅರ್ಪಿತವಿಲ್ಲಾಗಿ ಪ್ರಸಾದವಿಲ್ಲ
೧೧. ಬಾಡಲಿಲ್ಲದ ಸಸಿಯ ಬೆಳಕು
೧೨. ಗಿರಿಯ ಮೇಲಣ ಶಿಶು ಹರಿದಾಡುತ್ತಿದೆ.
೧೩. ನಾ ನಿಮ್ಮೊಳಗು ಗುಹೇಶ್ವರಾ
೧೪. ಹಿಂದೂ ಕವಿಗಳು ಎನ್ನ ತೊತ್ತಿನ ಮಕ್ಕಳು
೧೫. ವಚನ ಕಟ್ಟಿದ ಅಲ್ಲಮ
೧೬. ಸಮಕಾಲೀನತೆ
೧೭. ಬೆಂಕಿಯ ಸ್ನೇಹ
೧೮. ಸವೆಯಿತ್ತು ಲೋಕವೂ ಸಂದೇಹದಿಂದ

ಉದಕ ಮೂರುತಿಯಾಗಿ ಉದಯವಾಯಿತು ಪಿಂಡಿಗೆಯಲ್ಲಿ

ಇಲ್ಲಿ ಜನಸಾಮಾನ್ಯರ ಬದುಕಿನ ತಾಕಲಾಟವನ್ನು ಅಲ್ಲಮ ಹೇಳುವಂತೆ ಲೇಖಕರು ತಮ್ಮ ಅನುಭವದ ಮಿತಿಯಲ್ಲಿ ಗ್ರಹಿಸಿ ಅಲ್ಲಮನ ಕೆಲವು ಆರಿಸಿದ ವಚನಗಳ ಮೂಲಕ ದಾರ್ಶನಿಕತೆಯನ್ನು ತಿಳಿಸುತ್ತಾರೆ;

"ಪಾಪ ಪುಣ್ಯಕೂಡಿ ಒಡಲಾಯಿತ್ತು"

ಹುಟ್ಟಿದಲ್ಲಿಯೆ ಹೊಂದುವುದೆಲ್ಲರಿಗೆಯೂ ಸ್ವಭಾವ
ಪುಣ್ಯಪಾಪವೆಲ್ಲರಿಗೆಯೂ ಸ್ವಭಾವ,
ಮಹಾ ಶಿವತತ್ವದಲ್ಲಿ ಹುಟ್ಟಿದ ಶಿವಭಕ್ತರು,
ಆಗಮ ತತ್ವದಲ್ಲಿ ಹೊಂದಿದಡೇನು?
ಆ ಪುಣ್ಯಪಾಪವಿಲ್ಲಾಗಿ, ಅವರು ಮಹಾನುಭಾವರು.
ಆದಡೇನು? ಲೋಕದ ಪರಿಯೆ?–ಅಲ್ಲ.
ಇದ, ಲೋಕದ ಪರಿಯೆಂಬ ಅಜ್ಞಾನಿಗಳನೇನೆಂಬೆ ಗುಹೇಶ್ವರಾ.[೩] (೭೫)

ಮನುಷ್ಯ ಮನುಷ್ಯರ ನುಡವಿನ ಸಂಘರ್ಷವನ್ನು ಅದರಲ್ಲಿಯೇ ಇಡೀ ಸಮಾಜದ ಬದುಕಿನ ಸಂಸ್ಕೃತಿಯನ್ನು ನಂಬಿಕೆಯನ್ನು ಸವಿಸ್ತಾರವಾಗಿ ಹೇಳುವ ಕ್ರಮ ಲೇಖಕರ ಅಂತರಾಳ ಮಿಡಿದ ಚಿಂತನೆಯಾಗಿದೆ.

ಅಲ್ಲಮಪ್ರಭು ತೀಕ್ಷ್ಣ ಸಮಾಜದ ವಿಜ್ಞಾನಿ, ಸಮಾಜದಲ್ಲಿನ ಜಾತ್ಯಾಂಧತೆಯ, ಮನೋಭಾವವನ್ನು ಹೋಗಲಾಡಿಸಲು ತನ್ನ ವಚನಗಳಲ್ಲಿ ವಿಡಂಬಿಸಿರುವುದು ಹಾಗೆ ಮಡಿ–ಮೈಲಿಗೆ, ಪಾಪ–ಪುಣ್ಯ ಇಂತಹ ದ್ವಂದ್ವಗಳನ್ನು ಕಟ್ಟಿಕೊಳ್ಳದೆ ಮಾನವೀಯ ಅಂತಃಕರಣವನ್ನು ಸಾರುವ ಅಂಶಗಳನ್ನು ಲೇಖಕರು ಗುರುತಿಸಿದ್ದಾರೆ.

ಹೀಗೆ ಅಲ್ಲಮ ಪ್ರಭುವು ಗುಹೇಶ್ವರನನ್ನು ಒಂದು ಸಂಕೇತವಾಗಿಟ್ಟುಕೊಂಡು ತನ್ನ ಅನುಭವಗಳನ್ನು ವಚನಗಳ ಮೂಲಕ ದಾಖಲಿಸುವುದು ಕಂಡುಬರುವುದು. ಹೀಗೆ ವಿಷಯ ನಿರೂಪಣೆಯಲ್ಲಿ ಅಲ್ಲಮನ ವೈಶಿಷ್ಟ್ಯ ಎದ್ದುಕಾಣುತ್ತದೆ.

ರುದ್ರಯೋನಿ

ಈ ಪರಿಕಲ್ಪನೆಯಲ್ಲಿ ಮಾಯೆಯ ಒಳಗಿನ ಮತ್ತು ಹೊರಗಿನ ಆವರಣದ ಬಗ್ಗೆ ಶಕ್ತಿ, ಚಲನ ವಲನಗಳನ್ನು ಕುರಿತಂತೆ ವಿಡಂಬನಾತ್ಮಕತೆಯನ್ನು ಸೆಳಿಸುತ್ತಾ;

ಆಡಂಬರದೊಳಗಾಡಂಬರವಿದೇನೊ?
ಹಾರಿತ್ತು ಬ್ರಹ್ಮನೋಲಗ, ಕೆದರಿತ್ತಿದೇನಯ್ಯಾ?
'ಸಾರು ಸಾರು' ಎನ್ನುತ ವಿಷ್ಣು ಅಜನ ನುಂಗಿ
ರದ್ರುಯೋನಿಯೊಳಡಗಿತ್ತಿದೇನೊ!

---

೩. ವಚನಕಟ್ಟಿದ ಅಲ್ಲಮ, ಪು. ೨.

ಬೇರಿಲ್ಲದ ಮರ, ನೀರಿಲ್ಲದ ನೆಳಲೊಳಗೆ

ತೋರಿದ ಪ್ರತಿಬಿಂಬವ ನಾನೇನೆಂಬೆನು ಗುಹೇಶ್ವರಾ?[೪] (೨೪)

ರುದ್ರಯೋನಿ ಬಗೆಗೆ ಲೇಖಕರು ವಿಭಿನ್ನ ನೆಲೆಯಲ್ಲಿ ಸವಿಸ್ತಾರವಾಗಿ ಅರ್ಥೈಸುತ್ತಾ ಅಲ್ಲಮನ ವಚನಗಳ ಕುರಿತಂತೆ, ಅಲ್ಲಮನಿಗೆ ಇಂದ್ರಿಯಗಳಲ್ಲಿ ನಂಬಿಕೆಯಿಲ್ಲದೆ ಇಂದ್ರಿಯ ತೃಪ್ತಿ ಅಲ್ಪತೃಪ್ತಿಯೆಂದು, ಇಂದ್ರಿಯಗಳ ವರ್ತನೆಗೆ ಕರಣೀಭೂತವಾದ ಮೂಲ ಅಂಶದ ಚಿಂತನೆಯ ಕುರಿತು ಶೈವ ಸಿದ್ಧಾಂತ ಹೇಳುವ ಲಿಂಗಾಂಗ ವಿಧಿ, ಲೌಕಿಕ ವಿಧಿಯಾಗಿಯೇ ತೋರುವುದು. ಆದರಿಂದ ಅಲ್ಲಮನ ಸೃಷ್ಠಿ ಈ ರುದ್ರಯೋನಿ, ಸಹಜವಾಗಿ ರುದ್ರಯೋನಿ ಕಲ್ಪನೆ 'ರುದ್ರಭೂಮಿ'ಯನ್ನು ಪ್ರತಿಬಿಂಬಿಸುತ್ತದೆ. ಸಕಲ ಸೃಷ್ಟಿಯ ತವರು ಸುಡುಗಾಡು. ಇಲ್ಲಿ ಶೂನ್ಯ ಭಾವದ ನೆಲೆಯನ್ನು ಸ್ಪಷ್ಟಪಡಿಸಲಾಗಿದೆ.

ಲೀಲೆಯಾದಡೆ ಉಮಾಪತಿ, ಲೀಲೆ ತಪ್ಪಿದಡೆ ಸ್ವಯಂಭೂ

ಮರನೊಳಗಣ ಪತ್ರ ಫಲಂಗಳು, ಮರಕಾಲವಶದಲ್ಲಿ ತೋರುವಂತೆ,

ಹರನೊಳಗಣ ಪ್ರಕೃತಿ ಸ್ವಭಾವಂಗಳು, ಹರಭಾವದಿಚ್ಚೆಗೆ ತೋರುವುವು.

ಲೀಲೆಯಾದಡೆ ಉಮಾಪತಿ, ಲೀಲೆ ತಪ್ಪಿದಡೆ ಸ್ವಯಂಭು ಗುಹೇಶ್ವರಾ[೫] (೧೪೫)

ಇದು ಒಂದು ಸಾಮಾನ್ಯ ವಚನ, ಮಾಯೆಯನ್ನು ಸ್ಥಿರೀಕರಿಸುವ ವಚನ. ಆದರೆ ಈ ಸ್ಥಿರೀಕರಣ ಹರನ ಲೀಲೆಗೆ ಸಂಬಂಧಿಸಿದ ವಿಚಾರ. ಅದಕ್ಕೊಂದು ವೈಯಕ್ತಿಕ ನೆಲೆಯಿಲ್ಲ. ಮರ ಕಾಲವಶದಲ್ಲಿ ಪತ್ರ ಪುಷ್ಪಗಳನ್ನು ತೋರುವಂತೆ 'ಹರನೊಳಗಣ ಪ್ರಕೃತಿ ಸ್ವಭಾವಂಗಳು ಹರಭಾವದಿಚ್ಚೆಗೆ ತೋರುವುವು' ಈ ಎರಡೂ ಪ್ರತಿಮೆಗಳ ನಡವಳಿಕೆಯಲ್ಲಿ ಪ್ರಭು ಒಂದು ಸಣ್ಣ ವ್ಯತ್ಯಾಸ ಮಾಡುತ್ತಿದ್ದಾನೆ. ಮೊದಲನೆಯದನ್ನು ಮರದ ಕಾಲವಶದಲ್ಲಿಟ್ಟರೆ, ಎರಡನೆಯದನ್ನು ಹರನ ಇಚ್ಛಾವಶದಲ್ಲಿಡುತ್ತಿದ್ದಾನೆ. ಅಂದರೆ ಮರದ ನಡವಳಿಕೆ ಋತುಮಾನಕ್ಕನುಗುಣವಾದರೆ ಹರನ ನಡವಳಿಕೆ ಲೀಲೆಗನುಗುಣವಾಗಿದೆ. ಬೇಕಾದರೆ ಅಥವಾ ಬೇಡವಾದರೆ. ಈ ಎರಡೂ ರೀತಿಗಳು ಹರನಿಗುಂಟು. ಮರಕ್ಕಿಲ್ಲದ ಸ್ವಾತಂತ್ರ್ಯ ಇಚ್ಛಾವಶದಲ್ಲಿರುವ 'ಹರ'ಕ್ಕೆ ಈ ವರ್ತನಾ ಸ್ವಾತಂತ್ರ್ಯವನ್ನು ಈ ಲೇಖಕರು ಗುರುತಿಸಿದ್ದಾರೆ.

ಈ ಪರಿಕಲ್ಪನೆಯಲ್ಲಿ ತತ್ವಜಿಜ್ಞಾಸೆಯನ್ನು ಕಾಣಬಹುದಾಗಿದೆ. ಆಧ್ಯಾತ್ಮ ವಿಜ್ಞಾನಿ–ಯಾದವನಿಗೆ ಲೌಕಿಕ ನೆಲೆಯ ವಿವರಗಳು ತಿಳಿದಿರಬೇಕು. ಮರ, ಗಿಡ, ಪ್ರಾಣಿ, ಪಕ್ಷಿ

---

೪. ವಚನಕಟ್ಟಿದ ಅಲ್ಲಮ

೫. ವಚನಕಟ್ಟಿದ ಅಲ್ಲಮ, ಪು. ೧೧

ಮೊದಲಾದವುಗಳನ್ನು ಕುರಿತಂತೆ ಜ್ಞಾನಿಯು ಹೊಂದಬೇಕಾದ ಗುಣಗಳನ್ನು ತಿಳಿಸುವುದು ಕಂಡುಬರುತ್ತದೆ. ಅವುಗಳ ಪಂಚಭೂತಾತ್ಮಕ ಮರಣವನ್ನು ತಿಳಿಸುವುದಾಗಿದೆ.

ಶೀಲಸಂಬಂಧಿಗಳು ಜಾತ್ಯಂಧರು

ನಾಣ ಮರೆಯ ನಾಚಿಕೆ ಒಂದು ನೂಲ ಮರೆಯಲಡಗಿತ್ತು.
ಬಲ್ಲೆನೆಂಬ ಅರುಹಿರಿಯರೆಲ್ಲಾ ಅಲ್ಲಿಯೇ ಮರುಳಾದರು.
ನೂಲ ಮಾರಿ ಹತ್ತಿಯ ಬಿಲಿಯ ಹೋದರೆ,
ಅದು ಅತ್ತಲೆ ಹೋಯಿತ್ತು ಗುಹೇಶ್ವರಾ.[೬] (೩೩೦)

ಇಲ್ಲಿ ಅಲ್ಲಮ ಪ್ರಭು ನೇರವಾಗಿಯೇ ವಿಚಾರಗಳನ್ನು ಪ್ರಸ್ತಾಪಿಸಿ ಅದರ ಒಳಿತು ಕೆಡಕುಗಳನ್ನು ಮೀರಿನಿಂತು 'ಅರುಹಿರಿಯರ' ಕುಲಶೀಲಗಳನ್ನು ಇಲ್ಲಿ ಮುಖಾಮುಖಿಯಾಗಿಸುತ್ತಾನೆ. ಒಬ್ಬ ವ್ಯಕ್ತಿಯ ಕುಲ-ಶೀಲಗಳನ್ನು ಅಳತೆಗೋಲಾಗಿಟ್ಟುಕೊಂಡು ಮಾನಮರ್ಯಾದೆ, ವ್ಯಕ್ತಿತ್ವದ ಘನತೆ ಮುಂತಾದವುಗಳನ್ನು ತೂಗುವುದು ಹೇಗೆಂಬುದರಲ್ಲಿ ಅಲ್ಲಮಪ್ರಭು ಎಡವಿರುವುದನ್ನು ಲೇಖಕರು ಗುರುತಿಸುತ್ತಾ ಜಾತಿ ಮತಗಳ ಹಿನ್ನೆಲೆಯಲ್ಲಿ ವಿವೇಚಿಸದೆ ತಾತ್ವಿಕವಾಗಿ ಜಾತಿ, ಕುಲ, ಶೀಲವಂತಿಕೆಗಳನ್ನು ಪ್ರಶ್ನಿಸುವುದನ್ನು ಕಾಣಬಹುದು.

ಆತ್ಮ ದರ್ಶನದ ಆತ್ಯಂತಿಕತೆ

ಆತ್ಮ ಸ್ವರೂಪದ ಬಗೆಗೆ ದಾರ್ಶನಿಕ ಚಿಂತನೆಯನ್ನು, ವಚನದ ವಿಶಿಷ್ಟತೆಯನ್ನು ಲೇಖಕರು ಕಾಣುವುದು ಹೀಗಿದೆ:

ಭೂತಳದ ಮತಿವಂತರು ಆತ್ಮನ ಸ್ಥಲವಿಡಲು
ಮಾತು ಮಾಣಿಕವ ನುಂಗಿ; ಜಾತಿ ಧರ್ಮವನುಡುಗಿ,
ವ್ರತದ ಭ್ರಮೆಗಳ ಸುಟ್ಟು, ಚಿತ್ತ ಭಸ್ಮವ ಧರಿಸಿ
ಅಣಿಮಾದಿ ಗಣಂಗಳ ಗತಿಯ ಪಥವನೆ ಮೀರಿ,
ಭ್ರಾಂತಳಿದು ಜ್ಯೋತಿ ಬೆಳಗುತ್ತಿದೆ ಗುಹೇಶ್ವರಾ[೭] (೫೮೪)

ಪ್ರಭು ಇಲ್ಲಿ ವೈದಿಕ ಸರಹದ್ದಿನಲ್ಲಿಯೇ ನಿಂತು ಮಾತನಾಡುತ್ತಿದ್ದಾನೆ. ಭೂತಳದ ಮತಿವಂತರು ಎನ್ನುವಾಗ ವೈದಿಕ ಜಗತ್ತಿನ ಯಾವುದೋ ಒಂದು ಭಾಗದ ಕಡೆಗೆ ಪ್ರಭು ಕೈತೋರುತಿದ್ದಾನೆ. ಇದು ಆತ್ಮವಾದಿಗಳ ಉಪನಿಷತ್ ಋಷಿಗಳ ಕಡೆಗೆ ಎಂಬುದು ಯಾರಿಗೂ ತಿಳಿಯುತ್ತದೆ.

---

೬ ವಚನಕಟ್ಟಿದ ಅಲ್ಲಮ, ಪು. ೨೩

೭. ವಚನಕಟ್ಟಿದ ಅಲ್ಲಮ, ಪು. ೩೧

ಅಲ್ಲಿಯೂ ವೇದಾದಿಗಳ ಆಚಾರ ಭಾಗವನ್ನು ಬಿಟ್ಟು ವಿಚಾರ ಭಾಗದ ಕಡೆಗೆ ಲಲಿಯುತ್ತಿರುವುದು ಕಾಣಿಸುತ್ತದೆ. ಭಾವಮೂಲವಾದ ಭಕ್ತಿಯನ್ನು ಪ್ರಭು ಸತ್ಯಶೋಧನೆಯ ಹಾದಿಯಲ್ಲಿ ಅಳವಡಿಸಿಕೊಳ್ಳುವುದಿಲ್ಲ. 'ಭಾವಿಸುವ ಭಾವನೆಗಿಂತ 'ಸಾವುದು ಲೇಸು' ಎಂಬುದು ಪ್ರಭುವಿನ ಖಚಿತ ನಿಲುವು. ಈ ವಚನದ ಮೊದಲ ಸಾಲು ಸ್ಥಾಪನೆಯಾಗುತ್ತಿದ್ದಂತೆಯೇ ಅದರ ಪರಿಣಾಮದ ಉತ್ಕರ್ಷ ಅವನ ಮನಸ್ಸನ್ನು ತೀವ್ರ ಉತ್ಸಾಹಕ್ಕೆ ಒಳಗು ಮಾಡಿದೆ. ವಚನದ ನಡಿಗೆಯಲ್ಲಿ ಬೆಳಕಿನ ಸಮುದ್ರದೆಡೆಗೆ ಸಾಗುತ್ತಿರುವ ತುಂಬಿದ ತೊರೆಯ ಗಾಂಭೀರ್ಯವಿದೆ. ಅದನ್ನು ಮಿಂಚಿನ ತೊರೆ ಎಂದೂ ಕರೆಯಬಹುದಾಗಿದೆ. ಲಯದ ನಡಿಗೆಯಲ್ಲಿ ನಿಶ್ಚಿತ ಗತಿಯ ಸ್ಪಷ್ಟ ಗುರಿಯ ಕ್ರಮ ಬದ್ಧತೆ ಇದೆ. ಅಹಂ ಇಲ್ಲ, ದ್ವಂದ್ವ ಇಲ್ಲ. ಆದರೆ, ಒಂದು ರೀತಿಯ ಸಂಭ್ರಮದ ಮೆಚ್ಚುಗೆಯಿದೆ. ತತ್ವಲೋಕದ ಹಿರಿಯರನ್ನು ಕುರಿತು ಕೊಂಚ ಅತಿ ಎನ್ನುವಷ್ಟು ಗೇಲಿ ಮಾಡುತ್ತಿದ್ದ ಪ್ರಭು 'ಭೂತಳದ ಮತಿವಂತರು ಆತ್ಮನ ಸ್ಥಲವಿಡಲು' ಗೌರವದ ದನಿಯಲ್ಲಿ ಆದರಿಸುತ್ತಾನೆ.

ಹೀಗೆ ಭೌತಸೂಕ್ಷ್ಮಗಳ ಕುರಿತ ವಿವೇಚನೆಯನ್ನು ಕುರಿತು ಲೇಖಕರು ತಿಳಿಸಿದ್ದಾರೆ.

ಸತ್ತವರು ಬದುಕಿದವರ ಹೊತ್ತರು

ರೂಪನೆ ಕಂಡರು ನಿರೂಪನೆ ಕಾಣರು
ತನುವನೆ ಕಂಡರು ಅನುವನೆ ಕಾಣರು
ಆಚಾರವನೆ ಕಂಡರು ವಿಚಾರವನೆ ಕಾಣರು
ಗುಹೇಶ್ವರಾ–ನಿಮ್ಮ ಕುರುಹನೆ ಕಂಡರು
ಕೂಡಲರಿಯದೆ ಕೆಟ್ಟರು.[೮] **(೪೯೫)**

ಇಲ್ಲಿ ಅಲ್ಲಮಪ್ರಭುವಿನ ಬೌದ್ಧಿಕ ಪರಿಪಕ್ವತೆಯನ್ನು ಗುರುತಿಸಿ ಭೌತ ಸೂಕ್ಷ್ಮಗಳನ್ನು ಮನವರಿಕೆ ಮಾಡಿಕೊಡುತ್ತಾ, ಪ್ರಭುವಿಗಿರುವ ಇಷ್ಟಲಿಂಗದಂಥ ಕರಸ್ಥಲದ 'ಕುರುಹು'ವಿನ ಬಗೆಗಿರುವ ವಿರೋಧದ ದನಿಯನ್ನು ಗುರುತಿಸಲು ಮುಂದಾಗುವುದು ಅಂದರೆ 'ಕೂಡಲರಿಯದೆ ಕೆಟ್ಟರು' ಎಂಬಲ್ಲಿ ಶೈವ ಸಿದ್ಧಾಂತದ ಮೂಲ ಇಲ್ಲಿ ಕೆಡುತ್ತಿರುವುದನ್ನು ಅಲ್ಲಮಪ್ರಭುವಿನ ವಚನದಲ್ಲಿ ಪರಿಗಣಿಸುತ್ತಾರೆ.

ಐಂದ್ರಿಕ, ಇಂದ್ರಿಯಾತೀತ ಅನುಭಾವಿಕ ದರ್ಶನಗಳು ಅನುಭವ ಸಾಕ್ಷಾತ್ಕಾರಕ್ಕಾಗಿ ಅವಶ್ಯಕವೆನಿಸಿದರೂ ಪರಸ್ಪರ ವೈರುಧ್ಯವಾದ ದ್ವಂದ್ವತೆಯನ್ನು ಲೇಖಕರು ಗುರುತಿಸಿದ್ದಾರೆ.

---

೮. ವಚನಕಟ್ಟಿದ ಅಲ್ಲಮ, ಪು. ೩೭.

ಆಳವಿಲ್ಲದ ಸ್ನೇಹಕ್ಕೆ ಮರಣವೇ ಮಹಾನವಮಿ

> **ಪರಮಸುಖದ ಪರಿಣಾಮದ ಇರವ ಬಲ್ಲವರಾರೊ?**
> **ಅದು ದೊರಕೊಳ್ಳದು ನೋಡಾ!**
> **ತನತನಗೆ ತನ್ನ ಇರವ ಲಿಂಗದಲ್ಲಿರಿಸಿ, ಪರವ ಮನದಲ್ಲಿ ಹಿಡಿದು**
> **ಇಹ ಪರವೆಂಬುದೊಂದು ಭ್ರಾಂತಳಿದು,**
> **ನಿರತಿಶಯ ಸುಖದೊಳಗೆ ನಿಜವಾಗಿರಬಲ್ಲ.**
> **ನಿಮ್ಮ ಶರಣನನುಪಮಪ್ರಸಾದಿ ಗುಹೇಶ್ವರಾ.[೯]** (೫೬೬)

ಈ ವಚನದ ತಾತ್ವಿಕ ಭಾಗ 'ನಿರತಿಶಯ ಸುಖ'ದೊಳಗಿನ 'ನಿಜ'ದಲ್ಲಿ ಅಡಗಿದೆ. ಈ ವಚನದಲ್ಲಿ ಸುಖಕ್ಕೆ ಅಂಟಿಕೊಂಡಿರುವ ವಿಶೇಷಣ 'ನಿರತಿಶಯ'ದ ಅರ್ಥ ನಿರ್ದಿಷ್ಟವಾಗಿದೆ. ಒಂದು ಬಗೆಯಲ್ಲಿ ಅದು ಪಾರಿಭಾಷಿಕ, ಒಂದು ಚೇತನ ಪಡೆಯಬಹುದಾದ ಅನುಭವದ ಅಂತಿಮತೆ ಅದು. ಯಾವುದನ್ನು ಮಾತಿನಿಂದ ವರ್ಣಿಸಲಿಕ್ಕಾಗುವುದಿಲ್ಲವೋ ಆಗ ಇಂಥ ವಿಶೇಷಣಗಳು ಉಪಯೋಗಕ್ಕೆ ಬೀಳುತ್ತವೆ. ಈ ವಚನದ ಮೂಲಕ ಪ್ರಭು ಸೂಚಿಸುತ್ತಿರುವ ಸುಖದ ಕಲ್ಪನೆ ನಮಗೆ ಮೂಡಬೇಕಾದರೆ ಅದರ ಮೊದಲ ಎರಡು ಸಾಲುಗಳನ್ನು ಪರಿಶೀಲಿಸಬೇಕಾಗಿದೆ. "ಪರಮಸುಖದ ಪರಿಣಾಮದ ಇರವ ಬಲ್ಲವರಾರೊ ಅದು ದೊರಕೊಳ್ಳದು ನೊಡಾ!" ಈ ಮೂಲಕ ಪ್ರಭು ಒಂದು ವಿಷಯ ಸ್ಪಷ್ಟಪಡಿಸುತ್ತಿದ್ದಾನೆ. ಆತ್ಯಂತಿಕ ಸುಖದ ಅನುಭವ ಅಸಾಧ್ಯ. ಹೇಗೆಂದರೆ ಅದನ್ನು ಪ್ರತಿಮೀಕರಿಸುವ ಭಾಷೆಯ ಎಲ್ಲ ಸಾಧ್ಯಗಳ ಆಚೆಯ ಅನುಭವ ಅದು. ಇಲ್ಲಿ ಭಾಷೆಗೆ ಲಜ್ಜೆ ಮೂಡುತ್ತದೆ, ಶಬ್ಧಕ್ಕೆ ಬಳಲಿಕೆಯಾಗುತ್ತದೆ ಭಾಷೆಯ ವಾದಗುಣ ಕೂಡ ಈ ಅನುಭವವನ್ನು ಹಿಡಿದಿಡಲಾಗದು. ಹೀಗಾಗಿ 'ಅದು ದೊರಕೊಳ್ಳದು' ಎಂದು ಹೇಳದೆ ಪ್ರಭುವಿಗೆ ಬೇರೆ ದಾರಿ ಇರಲಿಲ್ಲ. ಇಂಥ ಖಾಚಿತ್ಯ ಅಭಿವ್ಯಕ್ತಿ ಸಾಧನೆಯ ಫಲ. ತತ್ವಲೋಕದಲ್ಲಿ ಅದು ಕೂಡ ಒಂದು ರೂಪಕ-ಕಾವ್ಯಕ್ಕೆ ಸ್ವಭಾವೋಕ್ತಿಯೂ ಒಂದು ಅಲಂಕಾರವಾಗಿರುವುದನ್ನು ಲೇಖಕರು ತಿಳಿಸಿದ್ದಾರೆ.

ಒಳಗಣ ರಣರಂಗ ಹೊರಗಣ ಶೃಂಗಾರ

> **"ಹುಟ್ಟಿ ಕೆಟ್ಟಿತ್ತು ಭಾಗ, ಹುಟ್ಟದೆ ಕೆಟ್ಟಿತ್ತು ಭಾಗ,**
> **ಮುಟ್ಟಿ ಕೆಟ್ಟಿದು ಭಾಗ, ಮುಟ್ಟದೆ ಕೆಟ್ಟಿತ್ತು ಭಾಗ.**
> **ಇದೇನೊ? ಇದೆಂತೊ? ಅರಿಯಲೆಬಾರದು.**
> **ಇದೇನೊ ಇದೆಂತೊ ಎಂಬ ಎರಡು ಮಾತಿನ ನಡುವೆ,**
> **ಉರಿ ಹತ್ತಿತ್ತು ಮೂರು ಲೋಕವ ಗುಹೇಶ್ವರಾ.[೧೦]** (೩೩೮)

---

೯. ವಚನಕಟ್ಟಿದ ಅಲ್ಲಮ, ಪು. ೪೮
೧೦. ವಚನಕಟ್ಟಿದ ಅಲ್ಲಮ, ಪು. ೫೮

ಇದೊಂದು ಹುಟ್ಟು-ಸಾವಿಗೆ ಸಂಬಂಧಿಸಿದ ಯುದ್ಧದ ಕಡೆಗೆ ಗಮನ ಸೆಳೆಯುವ; ಅಂದರೆ ಹುಟ್ಟು-ಸಾವು ಪ್ರಾಣಿಗಳಿಗೆ ಮಾತ್ರವಿರುವುದಿಲ್ಲ. ಕನಸುಗಳಿಗೂ ಇರುತ್ತವೆ. ತಾತ್ವಿಕಲೋಕ ಮಾನವತೆಯ ಮನಸ್ಸಿನಲ್ಲಿ ಮೂಡುವ ಕನಸುಗಳ ಪರಿಣಾಮ ಎಂಬುದು ಇಲ್ಲಿ ಪ್ರಮುಖವಾಗಿದೆ.

ಈ ವಚನಕ್ಕೆ ಅನ್ವಯಿಸಿದಂತೆ ಹೇಳುವುದಾದರೆ ಕಾಲದಿಂದ ಕಾಲಕ್ಕೆ ಜನರಂತೆ ತತ್ವಗಳೂ ಹುಟ್ಟುತ್ತಿರುತ್ತವೆ ಮತ್ತು ಆಚರಣೆಯಲ್ಲಿರುತ್ತವೆ. ಆ ತಾತ್ವಿಕತೆಗಳೂ ಕಾಲಸರಿದಂತೆ ಬದಲಾಗಲೂಬಹುದು, ಕೊನೆಗಾಣಲೂಬಹುದು. ಆಯಾ ಜಾತಿ, ಧರ್ಮಕ್ಕೆ ಬದ್ಧವಾಗಿ ಅಸಂಖ್ಯಾತ ತತ್ವಗಳು ಪೂರಕವೂ ಹಾಗೂ ಮಾರಕವೂ ಎಂಬ ಅಲ್ಲಮನ ವಚನಗಳಲ್ಲಿನ ತಾತ್ವಿಕ ಭಾವನೆಯನ್ನು ಲೇಖಕರು ವಿಶ್ಲೇಷಿಸಿದ್ದಾರೆ.

'ನೀ' 'ನಾ' ಎಂಬುದೆ?-ತೆರೆಹಿಲ್ಲ

ಅಂಗದ ಮೇಲೆ ಲಿಂಗಸಂಬಂಧವಾದ ಬಳಿಕ,
ಪ್ರಾಣದ ಮೇಲೆ ಜ್ಞಾನ ನಿರ್ಧಾರವಾಯಿತ್ತು ನೋಡಾ.
ಒಳಹೊರಗೆಂಬ ಉಭಯವು ಏಕಾರ್ಥವಾಯಿತ್ತು.
ಗುಹೇಶ್ವರಾ ನಿಮ್ಮ ನೆನೆದೆನಾಗಿ. (೪೧೦)
ಅಂಗದಲ್ಲಿ ಮಾಡುವ ಸುಖ, ಲಿಂಗಕ್ಕದು ಭೂಷಣವಾಯಿತ್ತು,
ಕಾಡುಗಿಚ್ಚಿನ ಕೈಯಲ್ಲಿ ಕರಡ ಕೊಯಿಸುವಂತೆ-
ಹಿಂದೆ ಮೆದೆಯಿಲ್ಲ ಮುಂದೆ ಹುಲ್ಲಿಲ್ಲ.
ಅಂಗ ಲಿಂಗವೆಂಬನ್ನಕ್ಕರ ಫಲದಾಯಕ.
ಲಿಂಗೈಕ್ಯವದು ಬೇರೆ ಗುಹೇಶ್ವರಾ (೨೦೪)
ಅಂಗದ ಮೇಲೆ ಲಿಂಗ, ಲಿಂಗದ ಮೇಲೆ ಅಂಗವಿದೇನೊ?
ಮನದ ಮೇಲೆ ಅರಿವು, ಅರಿವಿನ ಮೇಲೆ ಕುರುಹು ಇದೇನೊ
ನೀನೆಂಬಲ್ಲಿ ನಾನು, ನಾನೆಂಬಲ್ಲಿ ನೀನು.
'ನೀ' 'ನಾ' ಎಂಬುದೆ?-ತೆರಹಿಲ್ಲ ಗುಹೇಶ್ವರಾ.[೧೧] (೩೧೦)

ಈ ಮೇಲಿನ ಲೇಖನದ ಭಾಗದಲ್ಲಿ ವಚನಗಳಲ್ಲಿನ ಲಿಂಗಾಂಗ ಸಂಬಂಧವನ್ನು ಅಲ್ಲಮನು ಅದ್ವೈತದ ಭೂಮಿಕೆಯಾಗಿ ಹೇಳುತ್ತಾನೆ. ಗಂಡು-ಹೆಣ್ಣುಗಳ ನಡುವಿನ ಸಂಬಂಧದ ಅದ್ವಿತೀಯತೆಯನ್ನು ತಿಳಿಸುತ್ತಾ ಇದು ಪ್ರಕೃತಿಯ ಸಂತಾನ ಪ್ರಕ್ರಿಯೆಯ ಮೂಲ

---

೧೧. ವಚನಕಟ್ಟಿದ ಅಲ್ಲಮ, ಪು. ೮೩

ಉದ್ದೇಶವನ್ನು ಮೀರಿ ಒಂದು ವಿಶಿಷ್ಟ ಭಂಗಿಯ ಸಂಕೀರ್ಣ ಲೋಕವೊಂದನ್ನು ನಿರ್ಮಿಸಿಕೊಂಡಿದೆ. ಮನುಷ್ಯ ಪಡೆಯುವ ಅಪೇಕ್ಷೆಗಳೆಲ್ಲ ಇದು ಅತಿಶಯವಾದುದು. ಈ ಸಂಯೋಗ ಕ್ರಿಯೆ, ಸೃಷ್ಟಿ ಪ್ರಧಾನವಾದುದು. ಕ್ರಮೇಣ ಒಂದು ಮಹತ್ವದ ಪ್ರತಿಮೆಯಾಗಿ ಕಾಣಿಸಿಕೊಳ್ಳುತ್ತದೆ. ಶೈವ ಪ್ರತಿಭೆ ಈ ಸ್ವಾನುಭವ ತತ್ವ ಪ್ರತಿಪಾದನೆಯನ್ನು ದೈವೀಕರಿಸಿ ಪೂಜಾರ್ಹಗೊಳಿಸಿರುವುದನ್ನು ಚಿತ್ರಿಸಲಾಗಿದೆ.

ಅರ್ಪಿತವಿಲ್ಲಾಗಿ ಪ್ರಸಾದವಿಲ್ಲ

ಸ್ವರದ ಹುಳ್ಳಿಯ ಕೊಂಡು, ಗಿರಿಯ ತಟಾಕಕ್ಕೆ ಹೋಗಿ
ಹಿರಿಯರು ಓಗರವ ಮಾಡುತ್ತಿಪ್ಪರು
ಗಿರಿ ಬೇಯದಾಗಿ ಓಗರವಾಗದು
ಅರ್ಪಿತವಿಲ್ಲಾಗಿ ಪ್ರಸಾದವಿಲ್ಲ ಗುಹೇಶ್ವರಾ[೧೨] **(೨೫೧)**

ಈ ಮೇಲಿನ ವಚನದಲ್ಲಿ ಅಲ್ಲಮನ ಪ್ರತಿಮಾ ರೂಪದಲ್ಲಿ ಅಡಕಮಾಡಿರುವುದನ್ನು ಕಾಣಬಹುದು. ಸ್ವರದ ಹುಳ್ಳಿಯನ್ನು ಕೊಂಡು ತಂದರೂ ಗಿರಿ ಬೇಯುತ್ತಿಲ್ಲ, ಓಗರವಾಗುತ್ತಿಲ್ಲ ಎಂಬ ಮಾತೇ ವಿಚಿತ್ರ. 'ಗಿರಿ' ಬೇಯದಿರುವುದರ ಕಾರಣ ನಮಗೆ ಮಂದಟ್ಟಾಗಬೇಕಾದರೆ 'ಅರ್ಪಣೆ'ಗೂ ಯಾವುದೋ ಬಾದರಾಯಣ ಸಂಬಂಧವಿದ್ದಂತಿದೆ. ಅರ್ಪಣೆ ನಿಷ್ಠೆಗೆ ಸಂಬಂಧಿಸಿದ್ದು, ಹೃದಯಕ್ಕೆ ಸಂಬಂಧಿಸಿದ್ದು. ಹೃದಯ ಗಿರಿಯನ್ನು ತವಿಸದಿದ್ದರೆ ಓಗರ ರೂಪದ ಪ್ರಸಾದ ಸಿದ್ಧವಾಗುವುದಿಲ್ಲ. ಹಾಗಾದರೆ, ಗಿರಿ ಎಂದರೇನು? 'ಶರಿ ಸುವರ್ಣದ ಕಳಸ' ಮಾನವ ದೇಹವನ್ನು ಕುರಿತ ಪ್ರಭುವಿನ ಬೇರೊಂದು ವಚನದ ಒಂದು ಸಾಲಿನ ಭಾಗವಿದು. ಪರ್ವ ಆಚರಿಸುತ್ತಿರುವ ಹಿರಿಯರ ತಲೆ ಮಾಗದಿರುವುದರಿಂದ, ವಿವೇಕ ಉದಯವಾಗದಿರುವುದರಿಂದ ಓಗರವಾಗುತ್ತಿಲ್ಲ. ತಲೆಯೆಂಬ ಭಾವದ ಮಹತ್ವವನ್ನು ವಿಶ್ಲೇಷಿಸಿದ್ದಾರೆ.

ಬಾಡಲಿಲ್ಲದ ಸಸಿಯ ಬೆಳಸು

ಅಲ್ಲಮನ ವಚನದಲ್ಲಿ ಇದೊಂದು ದೇಹ ಮತ್ತು ಮನಸ್ಸುಗಳ ಆಹಾರಕ್ಕೆ ಸಂಬಂಧಿಸಿದ ವಿಷಯವಾಗಿದ್ದು, 'ಮಿಗಬಾರದು ಮಿಗದಿರಬಾರದು ಒಡಲಿಚ್ಚೆಯ ಸಲ್ಲಿಸದೆ ನಿಮಿಷವಿರಬಾರದು" ಎಂಬ ಅಲ್ಲಮನ ಮಾತನ್ನು ಲೇಖಕರು ಪಂಚೇಂದ್ರಿಯ, ಅರಿಷಡ್ವರ್ಗ, ಸಪ್ತಧಾತು ಅಷ್ಟಮದ ಮುಂತಾದವುಗಳ ಬಗ್ಗೆ ಪ್ರಭುವಿನ ಹಲವು ದೇಹಧಾರಿತನವನ್ನು

---

೧೨. ವಚನಕಟ್ಟಿದ ಅಲ್ಲಮ. ಪು. ೯೨

ಹೇಳುತ್ತಾ ಇಂತಹ ಇಂದ್ರಿಯಗಳ ಉಪಟಳಕ್ಕೆ ಕುಮ್ಮಕ್ಕು ನೀಡಿ ವ್ಯಕ್ತಿಯ ವ್ಯಕ್ತಿತ್ವವನ್ನು ಹಾಳುಮಾಡುತ್ತವೆ ಎಂಬ ಅಂಶಗಳನ್ನು ಅಲ್ಲಮನ ವಚನಗಳಲ್ಲಿ ಲೇಖಕರು ಗುರುತಿಸುವುದನ್ನು ಕಾಣಬಹುದು.

ದಾರಿಗೊಂದು ಹೋಹವರೆಲ್ಲರೂ ನೀವು ಕೇಳಿರೆ,
ಮೂರು ಬಟ್ಟೆ ಕೂಡಿದ ಠಾವಿನಲ್ಲಿ ಒಬ್ಬ ಹೆಮ್ಮಾರಿ ಐದಾಳೆ
ಆ ಮಾರಿಯ ಬಾಯೊಳಗೆ ಮೂರು ಘಟ್ಟವಿಪ್ಪುವು
ನಂಜಿನ ಸೊನೆ ಸುರಿವುವತಿಪ್ಪುದು.
ಕಾಡುಕೋಣದ ಮುಖದಲ್ಲಿ ಕತ್ತಲೆ ಕಾಣಲೀಸದು.
ಐದು ಬಾಯ ಹುಲಿ ಆಗುಳಿಸುತಿಪ್ಪುದು
ಇವೆಲ್ಲವ ಗೆದ್ದಲ್ಲದೆ ಗುಹೇಶ್ವರನ ಕಾಣಬಾರದು.[೧೩] (೪೭೯)

ಮನುಷ್ಯನ ಜೀವನದುದ್ದಕ್ಕೂ ಅಂಗ ಸುಖವೆ ಗುರಿಯಾಗಿದ್ದು, ಜೀವ ಹಿಂಸೆಯ ಬಗ್ಗೆ ಅರಿತುಕೊಳ್ಳುವಿಕೆ, ಜೀವ ಕಲ್ಯಾಣದ ಹೆದ್ದಾರಿ ನಿರ್ಮಾಣದಲ್ಲಿ ಉತ್ಸುಕನಾಗಿರುವ ಪ್ರಭುವಿನ ಅರಿಷಡ್ವರ್ಗ, ಅಷ್ಟಮದಗಳ ಅಡ್ಡಗೋಡೆ, ಪಂಚೇಂದ್ರಿಯಗಳ ಸ್ಥಿರತೆಯನ್ನು ಕವಿ ವಿಶಾಲವಾಗಿ ಚಿತ್ರಿಸುತ್ತಾರೆ. ಹಾಗೆ ಮನೋಪೋಷಕ ಆಹಾರದ ಸ್ವರೂಪವನ್ನು ಪುಷ್ಟೀಕರಿಸುವ ಲೇಖಕರ ಪ್ರತಿಭೆ ಕಾಣಲಾಗುತ್ತದೆ. ಈ ವಚನದಲ್ಲಿ ದೇಹ ಮತ್ತು ಆತ್ಮಗಳೆರಡಕ್ಕೂ ಆಹಾರ ಪ್ರಮುಖವಾದದ್ದು. ಪಂಚೇಂದ್ರಿಯಗಳನ್ನು ಹುಲಿಯ ಸಂಕೇತವಾಗಿ ಇಟ್ಟುಕೊಂಡು ಒಳಿತು ಮತ್ತು ಕೆಡಕುಗಳ ಬಗೆಗಿನ ವಿಚಾರವನ್ನು, ಉದ್ದೇಶವನ್ನು ತಿಳಿಸುತ್ತಾನೆ. ಉದ್ದೇಶವಿಲ್ಲವಾದರೆ ಎಲ್ಲಾ ಶೂನ್ಯ ಎಂದು ಲೇಖಕರು ತನ್ನ ಅಭಿಪ್ರಾಯವನ್ನು ಅಲ್ಲಮ ಮತ್ತು ಆತನ ವಚನ ಕುರಿತು ಅಭಿವ್ಯಕ್ತಿಸುವುದು, ಈ ವಚನದಲ್ಲಿ ತಿಳಿಯಲಾಗಿದೆ.

ಗಿರಿಯ ಮೇಲಣ ಶಿಶು ಹರಿದಾಡುತ್ತಿದೆ

'ಗಿರಿ' ಪ್ರತಿಮೆ ಎಂಬುದು ಅಲ್ಲಮನ ನಿರಾಸಕ್ತಿಯನ್ನು ತೋರುತ್ತದೆ. ಅಂದರೆ ಅಲ್ಲಮನು ಭೌತಿಕವಾಗಿ ಗುಹವಾಸಿಯೂ ಅಲ್ಲ, ಗಿರಿವಾಸಿಯೂ ಅಲ್ಲ, ಸದಾ ಸಂಚಾರಶೀಲನಾದ ಅಲ್ಲಮ ಗಿರಿಯ 'ಉನ್ನತಿ'ಯಷ್ಟೇ ಆತನ ಆಧ್ಯಾತ್ಮಿಕ ಉನ್ನತಿಯ ಪ್ರತೀಕವಾಗಿ ಕಾಯಕಕ್ಕೆ ತೊಡಗಬಹುದಿತ್ತು ಎಂಬುದು ಲೇಖಕರ ಆಶಯವಾಗಿದೆ. 'ಸ್ವರ' ಮತ್ತು 'ಒಗರ' ಅಥವಾ ಪಾಕ ಪ್ರತಿಮೆಗಳಷ್ಟು ತೀವ್ರತೆಯಾಗಿ 'ಗಿರಿ' ಪ್ರತಿಮೆಯ ನಿರಾಸಕ್ತಿಯನ್ನು ಗುರುತಿಸುತ್ತಾರೆ.

---

೧೩. ವಚನಕಟ್ಟಿದ ಅಲ್ಲಮ, ಪು. ೧೦೩

ಮೇರುವ ಸಾರಿದ ಕಾಗೆ ಹೊಂಬಣ್ಣವಾಗದಿದ್ದಡೆ,
ಆ ಮೇರುವಿಂದತ್ತ ಹುಲುಮೊರಡಿಯೆ ಸಾಲದೆ?
ದೇವ, ನಿಮ್ಮ ಪೂಜಿಸಿ ಧಾವತಿಗೊಂಬಡೆ,
ಆ ಧಾವತಿಯಿಂದ ಮುನ್ನಿನ ವಿಧಿಯೆ ಸಾಲದೆ?
ಗುಹೇಶ್ವರಾ, ನಿಮ್ಮ ಪೂಜಿಸಿ ಸಾವಡೆ,
ನಿಮ್ಮಿಂದ ಹೊರಗಣ ಜವನೆ ಸಾಲದೆ?[೧೪] **(೬೬)**

ವಚನದಲ್ಲಿ ಲೇಖಕರ ಅನುಭವಕ್ಕೆ ಬಂದಿದ್ದು, ಸಾವು ಮತ್ತು ಸಾವಿನೊಳಗಣ ಗುರಿ ಬಗೆಗೆ ಚಿಂತಿಸುವುದು ಕಾಣುತ್ತೇವೆ. ಅಂದರೆ ಸಾವು ಮನುಷ್ಯನಿಗೆ ವಾಸ್ತವದ ಸಂಗತಿ. ಆದರೆ ಅದೊಂದು ಅತಿ ಘೋರವಾದದ್ದು ಕೂಡ. ಇದರಿಂದ ಬಿಡುಗಡೆ ಹೊಂದುವುದೇ ಒಂದು ಸಾಧನೆ. ಇಂತಹ ಹಲವು ಸಂಗತಿಯನ್ನು ಅಲ್ಲಮ ಚಿತ್ತದೊಳಗೆ ಅಳವಡಿಸಿಕೊಂಡಿರುವುದನ್ನು ಲೇಖಕರು ಅಭಿವ್ಯಕ್ತಿಸುವುದು ಇಂತ 'ಮೇರು' ಬಿಕ್ಕಟ್ಟುಗಳಿಗೆ ಒಂದು ಪರಿಹಾರ ಅಲ್ಲಮನ ನುಡಿಗಳೇ ಅಗ್ರಗಣ್ಯತೆ ಹೊಂದಲು ಸಾಧ್ಯ ಎಂಬುದು ಕವಿಯ ಆಶಯ. ಅಷ್ಟೇ ಅಲ್ಲದೆ ಎರಡು ತಾಕಲಾಟದ ಬಗೆಗೆ ಸೂಚಿಸುತ್ತಾರೆ. ೧. ಏರಿರುವುದೇ ಕನಸಾಗಿರಬೇಕು. ೨. ಏನು ಮಾಡಿದರೂ ಏನೂ ಆಗುವುದಿಲ್ಲ ಎಂಬುದೇ ವಾಸ್ತವವಿರಬೇಕು. ಹೀಗೆ ವಿವರಿಸುವ ಅಂಶಗಳೊಡನೆ ಅಲ್ಲಮನಿಗೆ ಮತ್ತೊಂದು ಕಡೆಯೂ "ಮೇರು ಮಧ್ಯದೊಳಗಿರ್ದು ಜರಗ ತೊಳೆವ ಚಿಂತೆ ಏಕೆ?" ಹೀಗೆ ಒಂದು ಪ್ರಶ್ನಿಸಿದ ಅಲ್ಲಮ ಅಪ್ರತಿಮ ಜ್ಞಾನಿ ಎಂದು ಲೇಖಕರು ಈ ವಚನದಲ್ಲಿ ಸ್ಪಷ್ಟಪಡಿಸುತ್ತಾರೆ.

ನಾ ನಿಮ್ಮೊಳಗೂ ಗುಹೇಶ್ವರಾ

ಅಲ್ಲಮ ವಚನವು ದೇವಲೋಕದ ಕಲ್ಪನೆಯನ್ನು ಹೇಳುತ್ತಾರೆ. ಅಂದರೆ ದೇವಲೋಕ ಎಲ್ಲೂ ಇಲ್ಲ ನನ್ನ ಸುತ್ತಮುತ್ತ ಇರುವ ಪರಿಸರವೇ ಎನ್ನುವುದು ಕಾಣುತ್ತದೆ. ಹಾಗೆಯೇ ಲೇಖಕರ ಮನದಾಳದ ಮಾತುಗಳು ವಿಶಿಷ್ಟವಾದ ಸ್ವರೂಪವನ್ನು ತೆರೆದುಕೊಳ್ಳುತ್ತದೆ. ವಚನ ಹೀಗಿದೆ;

ದೇವಲೋಕದ ದೇವಗಣಂಗಳೆಲ್ಲ ಎನ್ನಹೊರಗೆಂಬರು;
ಅದು ದಿಟವೆ,
ಸತ್ಯ ಸಾತ್ವಿಕ ಸದ್ಭಕ್ತರು ಎನ್ನ ಹೊರಗೆಂಬರು;

---

೧೪. ವಚನಕಟ್ಟಿದ ಅಲ್ಲಮ, ಪು. ೧೧೩

ಅದು ದಿಟವೆ.

ಹದಿನಾಲ್ಕು ಭುವನದೊಳಗೆ ಅವರು ತಾವಿರಲಿ.

ನಾ ನಿಮ್ಮೊಳಗು ಗುಹೇಶ್ವರಾ.[೧೫] (೫೫೧)

ಅಲ್ಲಮನಿಗೆ ಕಾಲ ದೇಶಗಳಿಲ್ಲ. ದೇವಲೋಕದ ಕಲ್ಪನೆ ನಾವು ವಾಸಿಸುವ ಲೌಕಿಕ ಲೋಕವನ್ನೊರತು ಬೇರೆಲ್ಲಿಯೂ ಕಾಣಲಾಗುವುದಿಲ್ಲ. ಅಂದರೆ ಇಲ್ಲಿ ಲೌಕಿಕ ಲೋಕದಿಂದ ತನ್ನನ್ನು ತಾನು ವಿಬೇಧಿಸಿಕೊಳ್ಳುವುದು ಗುಹೇಶ್ವರನೊಳಗಿನ ಸಖ್ಯವೇ ದೇವಲೋಕವೆಂಬ ಅಂಶಗಳನ್ನು ವಚನಗಳಲ್ಲಿ ಲೇಖಕರು ಅಭಿವ್ಯಕ್ತಿಸಿದ್ದಾರೆ.

ಹಿಂದಣ ಕವಿಗಳು ಎನ್ನ ತೊತ್ತಿನ ಮಕ್ಕಳು

ವಸ್ತುಕ ವರ್ಣಕ ತ್ರಿಸ್ಥಾನದ ಮೇಲೆ ನುಡಿವ ನುಡಿಗಳೆಲ್ಲ

ಇತ್ತಿತ್ತಲಲ್ಲದೆ ಅತ್ತತ್ತಲಾರು ಬಲ್ಲರು?

ಇವರೆತ್ತಲೆಂದರಿಯರು ಗಿಳಿವಿಂಡುಗೆಡೆವರು

ನಿಮ್ಮನೆತ್ತ ಬಲ್ಲರು ಗುಹೇಶ್ವರಾ![೧೬] (೬೪೧)

ಅಲ್ಲಮಪೂರ್ವ ಯುಗ ಮುಖ್ಯವಾಗಿ ಕಥನಮಾರ್ಗ, ಅದು ತತ್ವ ಮತ್ತು ಕಾವ್ಯ ತತ್ವಗಳ ಸಮರಸದಲ್ಲಿ ಬಾಳಲು ಹವಣಿಸಿದ ಯುಗ, ರಾಜ ಮಹಾರಾಜರುಗಳ ಕೃಪಾಪೋಷಣೆಯಲ್ಲಿ ಬದುಕುಸಾಗಿಸುತ್ತಿದ್ದ ಕವಿ ವಿದ್ವಾಂಸರು ಅರಮನೆಯ ವಾತಾವರಣವನ್ನು ರಂಜಿಸುವ ಕಾವ್ಯ ಕಥನ ಕಲೆಯಲ್ಲಿ ನಿಷ್ಣಾತರಾಗಿರುತ್ತಿದ್ದರು. ಅವರ ಕತೆಗಳೂ ಕೂಡ ತಮ್ಮ ಹಿಂದೂ ಸಂಸ್ಕೃತ ಪ್ರಾಕೃತಗಳಲ್ಲಿ ಜನಜನಿತವಾಗಿದ್ದ ಪುರಾಣಾಗಮಗಳ ಜಾಡು ಹಿಡಿದು ನಡೆಯುತ್ತಿದ್ದವು. ಒಟ್ಟಿನಲ್ಲಿ ಅಕ್ಷರ ಕೃಪಾಪೋಷಕ ಗುಂಪು ಅಂಥದೇ ಇನ್ನೊಂದು ಮಡಿಯಬಟ್ಟೆ ಗುಂಪಿಗಾಗಿ ಪರಸ್ಪರ ಹೊಗಳಾಡಿಕೆಯ ಸಂತರ್ಪಣೆಯಲ್ಲಿ ಮಗ್ನವಾಗಿತ್ತು. ಈ ರೀತಿಯ ಅನಿಸಿಕೆ ಅಲ್ಲಮನಂತಹ ಪ್ರಥಮ ವರ್ಗದ ತತ್ವಜಿಜ್ಞಾಸುಗಳಿಗೆ ಸರಿ ಎನಿಸಿದ್ದರೆ ಆಶ್ಚರ್ಯವಿಲ್ಲ. ಅಲ್ಲಮನಿಗೆ ಒಟ್ಟು ಮಾನವತೆಯ ತಲೆಯ ಬಗೆಗಿನ ಚಿಂತನೆಯ ಹಿಂದಿನ ಪಂಪಾದಿಗಳ ಮನರಂಜನೆ ಕಾವ್ಯ ಸೊಗಸಿದಂತೆ ತೋರದಿರುವುದನ್ನು ತಿಳಿಸಿದ್ದಾರೆ.

ಹಿಂದಣ ಕವಿಗಳೆನ್ನ ತೊತ್ತಿನ ಮಕ್ಕಳು

ಮುಂದನ ಕವಿಗಳೆನ್ನ ಕರುಣದ ಕಂದಗಳು.

---

೧೫. ವಚನಕಟ್ಟಿದ ಅಲ್ಲಮ, ಪು. ೧೧೯

೧೬. ವಚನಕಟ್ಟಿದ ಅಲ್ಲಮ, ಪು. ೧೨೪

ಆಕಾಶದ ಕವಿಗಳೆನ್ನ ತೊಟ್ಟಿಲ ಕೂಸು.
ಹರಿ ಬ್ರಹ್ಮರೆನ್ನ ಕಕ್ಷಕುಳ.
ನೀ ಮಾವ ನಾನಳಿಯ ಗುಹೇಶ್ವರಾ.[೧೭] (೫೫೦)

ಈ ವಚನದಲ್ಲಿ ಅಲ್ಲಮ ಪ್ರಭುವಿನ ವಾಗ್ವಾದ ಸ್ವರೂಪವನ್ನು ಮತ್ತು ನಿರ್ಧಾಕ್ಷಿಣ್ಯತೆಯನ್ನು ಲೇಖಕರು ಗುರುತಿಸುತ್ತಾ, ಭಕ್ತಿಯ ಪರಾಕಷ್ಠೆಯನ್ನು ಸಲಿಗೆಯ ರೀತಿಯಲ್ಲಿ ವ್ಯವಹರಿಸುವುದು ಅಲ್ಲಮನಿಗಿಂತಲೂ ಹಿಂದೆಯೂ ಇದ್ದರೂ ಅದು 'ಹಿಂದಣ ಕವಿಗಳೆನ್ನ ತೊತ್ತಿನಮಕ್ಕಳು' ಎಂಬಲ್ಲಿರುವ ಆರೋಪ ಸಲಿಗೆಯನ್ನು ಮೀರಿದ ತಾತ್ವಿಕ ಸಿಟ್ಟಾಗಿರುವುದನ್ನು ಗಮನಿಸಬಹುದು. ಈ ಮೂಲಕ ಇಂದ್ರಿಯ ಪಾತ್ರಗಳನ್ನು ಕುರಿತ ತಾತ್ವಿಕ ಜಿಜ್ಞಾಸೆಯ ಕಡೆಗಿರುವ ಗಮನವನ್ನು ಕವಿ ಗುರುತಿಸಿರುವುದನ್ನು ಕಾಣಬಹುದು.

ವಚನ ಕಟ್ಟಿದ ಅಲ್ಲಮ

ತಲೆ ಇಲ್ಲದ ತಲೆಯಾತಂಗೆ ಕರುಳಿಲ್ಲದ ಒಡಲು ನೋಡಾ!
ಆ ನಲ್ಲಂಗೆ ಅಂಗವಿಲ್ಲದ ಅಂಗನೆ ಸತಿಯಾಗಿಪ್ಪಳು!
ಇವರಿಬ್ಬರ ಬಸುರಲ್ಲಿ ಹುಟ್ಟಿದಳೆಮ್ಮ ತಾಯಿ.
ನಾ ಹುಟ್ಟಿ, ತಾಯ ಕೈವಿಡಿದು ಸಂಗವಮಾಡಿ
ನಿರ್ದೋಷಿಯಾದೆನು ಕಾಣಾ ಗುಹೇಶ್ವರಾ.[೧೮] (೯)

ಅಲ್ಲಮಪ್ರಭುವಿನ ವೈಯಕ್ತಿಕ ಜೀವನದ ಚಿತ್ರಣ ತಿಳುವಳಿಕೆ ತೊಡಕಿನದಾಗಿದೆ. ನಮ್ಮ ವಚನ ಸಾಹಿತ್ಯವನ್ನು ಕುರಿತು ಸಂಶೋಧನೆ ಮಾಡುವ ಸಂದರ್ಭದಲ್ಲಿ ವಿವಿಧ ಚಿಂತಕರು, ವಿದ್ವಾಂಸರು ನೀಡುವ, ಮಾಹಿತಿಯನ್ನು ಆಧರಿಸಿ ಎನ್.ಬೋರಲಿಂಗಯ್ಯ ಅವರು ತಮ್ಮದೆ ಆದ ನೆಲೆಯಲ್ಲಿ ಅವರ ವೈಯಕ್ತಿಕ ಜೀವನದ ಮೇಲೆ ಬೆಳಕು ಚೆಲ್ಲಿದ್ದಾರೆ.

ಅಲ್ಲಮ ಪ್ರಭುವಿನ ಮುಖ್ಯ ವಚನಗಳೆಲ್ಲ ಸಂಗ ಸಂಯೋಗ ಭಾವವನ್ನೇ ಪ್ರಕಟಿಸುತ್ತವೆ. ಅವು ಶೈವ ತಾಂತ್ರಿಕತೆಯನ್ನು ಅರ್ಥೈಸಿಕೊಳ್ಳುವ ವಿಧಾನವಾಗಿದೆ.

ಸಮಕಾಲೀನತೆ

ವಚನ ಸಾಹಿತ್ಯವು ಒಂದು ಮಹತ್ವದ ಘಟ್ಟವಾಗಿದೆ. ಸಮಾಜದಲ್ಲಿರುವ ವಾಸ್ತವಿಕತೆಯ ಚಿತ್ರಣವು ಕಾವ್ಯದ ವಸ್ತುವಾಗಬೇಕು. ಆದುದರಿಂದ ಸಾಹಿತ್ಯ ಸಮಕಾಲೀನತೆಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಹಾಗಾದಾಗ ಮಾತ್ರ ಸಾಹಿತ್ಯವು ಹೆಚ್ಚು ಮಹತ್ವವನ್ನು

---

೧೭. ವಚನಕಟ್ಟಿದ ಅಲ್ಲಮ, ಪು. ೧೨೮
೧೮. ವಚನಕಟ್ಟಿದ ಅಲ್ಲಮ, ಪು. ೧೩೫

ಪಡೆದುಕೊಳ್ಳುತ್ತದೆ. ಹಾಗಾಗಿ ಸಮಕಾಲೀನ ಬದುಕು ಕಾವ್ಯದ ಸಾಹಿತ್ಯದ ವಸ್ತುವಾಗುವ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ.

ಕಾರಮೇಘವೆದ್ದು ಧಾರಾವರ್ತ ಸುರಿವಾಗ,
ಧಾರುಣಿಯೆಲ್ಲವೂ ಮುಳುಗಿತ್ತು ನೋಡಾ!
ಕಾರಿರುಳ ಕಣ್ಣೊಳಗೆ ಸೂರ್ಯರನೇಕರು ಮೂಡಿ,
ದಾರಿಯ ಹೊಲಬೆಂಬುದು ಕೆಟ್ಟಿತ್ತು ನೋಡಾ!
ಪೂರಾಯ ಗಾಯದಲ್ಲಿ ಸಾಯೆ ಕೊಂದಲ್ಲದೆ
ಸೂರಿಯ (ಸೂರ್ಯ)ರನೇಕರು ಮಡಿಯರು ಗುಹೇಶ್ವರಾ.[೧೯] (೩೪೦)

ಅಲ್ಲಮ ಪೂರ್ವಯುಗದಲ್ಲಿ ಮತೀಯ ಘರ್ಷಣೆಗಳಿಂದ ಕಕ್ಕಾವಿಕ್ಕಿಯಾಗಿದ್ದ ಜನತೆಯ ಮನಃಸ್ಥಿತಿಯನ್ನು ವರ್ಣಿಸುವುದಕ್ಕಾಗಿ ಪ್ರಭು ಮೇಲಿನ ಪ್ರತಿಮಾವಿಧಾನದ ಕತೆ ಹೆಣೆಯುತ್ತಿದ್ದಾನೆ. ಮಹಾಕವಿಗಳೂ ತಮ್ಮ ತಮ್ಮ ಮುಖಗಳನ್ನು ನೋಡಿಕೊಳ್ಳುವಂಥ ದೃಶ್ಯಾವಳಿಗಳನ್ನು ನಿರ್ಮಿಸುತ್ತಿದ್ದಾನೆ. ಭಾರತೀಯ ಭೂಮಿಯ ಉದ್ದಗಲಕ್ಕೂ ವೇದೋಪನಿಷತ್ತುಗಳ ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವ ಮೀಮಾಂಸೆ, ಉತ್ತರ ಮೀಮಾಂಸೆ.. ಇತ್ಯಾದಿಗಳ ಮೇಲಿನ ವ್ಯಾಖ್ಯಾನ ಟೀಕೆ ಟಿಪ್ಪಣಿಗಳು ಒಂದು ಕಡೆಯಾದರೆ; ಬೌದ್ಧ, ಜೈನ, ಚಾರ್ವಾಕ ಇನ್ನಿತರ ವೇದ ವಿರೋಧಿ ನಿಲುವಿನ ಮತಸ್ಥಾಪನೆಗಳ ಹೋರಾಟ ಮತ್ತೊಂದು ಕಡೆಯಾದರೆ; ಪ್ರಾಂತೀಯ ಮಟ್ಟಗಳಲ್ಲಿ ಹುಟ್ಟಿಕೊಳ್ಳಲು ಹವಣಿಸುತ್ತಿದ್ದ ವಿವಿಧ ಬಗೆಯ ಭಕ್ತಿ ಪಂಥಗಳೂ ಸಮಸ್ಯೆಯನ್ನು ಜಟಿಲವಾಗಿಸುತ್ತಿದ್ದವು. ಈ ಎಲ್ಲವನ್ನೂ ಕುರಿತೆ ಪ್ರಭು ಕಾರಿರುಳ ಕಣ್ಣಿನೊಳಗೆ ಸೂರ್ಯರನೇಕರು ಮೂಡುತ್ತಿರುವ ದೃಶ್ಯಗಳನ್ನು ನಿರ್ಮಿಸಿ ವಿಷಯ ಸ್ಪಷ್ಟ ಮಾಡುತ್ತಿದ್ದಾನೆ. ಜನರು ನೂರಾರು ಗುಂಪುಗಳಲ್ಲಿ ಒಬ್ಬೊಬ್ಬರೂ ಒಂದೊಂದು ದೀಪ ಹಿಡಿದು ಇದೇ ಸೂರ್ಯನೆಂಬಂತೆ ಭ್ರಮಿಸಿ ಕಚ್ಚಾಡಿ ದಿಕ್ಕಾಪಾಲಾಗದಂತೆ ತಡೆಯುವ ಅನಿವಾರ್ಯತೆಯನ್ನು ಪ್ರಭುವಿನಂಥ ದಾರ್ಶನಿಕರು ಭಾವಿಸುವುದು ಸರಿಯಾಗಿಯೇ ಇದೆ. ಶೈವ ಶಾಖೆಗಳನ್ನೆಲ್ಲ ಒಂದೇ ತಾತ್ವಿಕ ನೆಲೆಗೆ ತರುಬುವ ಕ್ರಿಯಾಶೀಲ ಚಳವಳಿ ಕರ್ನಾಟಕದಲ್ಲಿ ಆರಂಭವಾದುದರ ಹಿನ್ನೆಲೆಯನ್ನು ಪ್ರಭು ಈ ಪರಿಯ ವಚನದಲ್ಲಿ ಧ್ವನಿಸುತ್ತಿರುವಂತಿದೆ.

---

೧೯. ವಚನಕಟ್ಟಿದ ಅಲ್ಲಮ, ಪು. ೧೪೫

ಬೆಂಕಿಯ ಸ್ನೇಹ

> **ಕಿಚ್ಚಿನ ಕೆಂಡದಂತೆ ಹೊರೆಯಲ್ಲಿಪ್ಪೆಯಯ್ಯಾ,**
> **ಬೆಂಕಿಯ ಬೆಳಗ ಕಂಡೆ–ಇದು ಕಾರಣ,**
> **ನಿಮ್ಮ ಕಂಡೆ ಪರಮಜ್ಞಾನಿ ಗುಹೇಶ್ವರಾ,[೨೦] (೨೬೫)**

ಅಲ್ಲಮನ ಅನೇಕ ತಾತ್ವಿಕ ಪ್ರತ್ಯಯಗಳನ್ನು ಒಳಗೊಂಡಿರುವ ಈ ವಚನ ಸಾಕಷ್ಟು ನೇರವಾಗಿಯೇ ಇದೆ. ಇಲ್ಲಿ ಯಾವುದೇ ಬಗೆಯ ಬೆಡಗು–ಬಿನ್ನಣಗಳಿಲ್ಲ, ಹೋಮ–ಧೂಮಗಳಿಲ್ಲ, ವ್ರತ ನಿಯಮಾದಿ ತಪೋನುಷ್ಠಾನಗಳಿಲ್ಲ. ಇರುವುದೆಲ್ಲ ಬರಿಯ ಬೆಂಕಿ; ಹೊಮ್ಮುವುದು ಮಾತ್ರ ಪರಮಜ್ಞಾನ, ಬೆಳಗು. ಸಾಕಷ್ಟು ಹತ್ತಿರ ಹತ್ತಿರದ ಅರ್ಥದ ಬೆಂಕಿ ಸಂಬಂಧಿ ಶಬ್ಧಗಳನ್ನು ಪ್ರಭು ಈ ವಚನದಲ್ಲಿ ಪ್ರಯೋಗಿಸುತ್ತಿದ್ದಾನೆ. ಕಿಚ್ಚು, ಕೆಂಡ, ಬೆಂಕಿ, ಬೆಳಗು ವಚನದಲ್ಲಿ ಪ್ರಯೋಗಗೊಂಡಿರುವ ರೀತಿಯಲ್ಲಿಯೇ ಶಬ್ದಗಳನ್ನು ಜೋಡಿಸಲಾಗಿದೆ. ಪ್ರಭು ಚಿಂತನಶೀಲ ಕವಿ–ತಾರ್ಕಿಕನೆಂಬುದನ್ನೂ ಈ ಮೂಲಕ ಗುರುತಿಸಬಹುದಾಗಿದೆ. ಈ ಶಬ್ದಗಳನ್ನು ಕಿಚ್ಚಿನ ಪ್ರಖರತೆಯ ಇಳಿಮುಖತೆಯನ್ನು ಸೂಚಿಸುತ್ತಿರುವ ಸಮಯದಲ್ಲಿತೇ ಸೌಮ್ಯದ ಏರುಮುಖತೆಯನ್ನೂ ದಾಖಲು ಮಾಡುತ್ತಿವೆ.

ಸಂದೇಹದಿಂದ ಸವೆಯಿತ್ತು ಲೋಕವು

> **ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ.**
> **ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ.**
> **ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ.**
> **ಮನದ ಮುಂದನ ಆಸೆಯೆ ಮಾಯೆ ಕಾಣಾ ಗುಹೇಶ್ವರಾ[೨೧] – (೭೨)**

ಇದು ಬೌದ್ಧ ತಿಳಿವಳಿಕೆಯನ್ನು ಮುಂದುವರಿಸುತ್ತಿದೆಯಾದರೂ ಹೆಣ್ಣನ್ನು ಆತ್ಮ ವಿಕಾಸದ ಹಾದಿಯಲ್ಲಿ ತೊಡರಾಗುತ್ತಿರುವುದರ ಸಂಕೀರ್ಣತೆಯಿಂದ ಬಿಡುಗಡೆ ಮಾಡಿದಂತೇನೂ ಆಗಿಲ್ಲ. ವಚನದಲ್ಲಿರುವ ಲಯಾನ್ವಿತತೆಗೆ ನಾವು ಬೆರಗಾಗುತ್ತಿದ್ದೇವೆಯೇ ಹೊರತು ತತ್ವತೀವ್ರತೆಗಲ್ಲ. 'ಆಸೆಯೆ ದುಃಖಕ್ಕೆ ಮೂಲ' ಎಂಬುದು 'ದಯೆಯೇ ಧರ್ಮದ ಮೂಲ' ಎಂಬ ಅಂಶಗಳನ್ನು ಗುರುತಿಸಬಹುದು.

ಹೀಗೆ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಎನ್.ಬೋರಲಿಂಗಯ್ಯ ಅವರು ವಚನಗಳನ್ನು ಪರಾಮರ್ಶಿಸಲು ಪ್ರಯತ್ನಿಸಿದ್ದಾರೆ.

---

೨೦. ವಚನಕಟ್ಟಿದ ಅಲ್ಲಮ, ಪು. ೧೭೧
೨೧. ವಚನಕಟ್ಟಿದ ಅಲ್ಲಮ, ಪು. ೧೬೮

೩.೪. ಪ್ರಬಂಧಗಳಲ್ಲಿ ಲೈಂಗಿಕ ಪ್ರಜ್ಞೆ

'ಶಿಕ್ಷಣ ಮತ್ತು ಲೈಂಗಿಕ ಜೀವನ' – ಎನ್.ಬೋರಲಿಂಗಯ್ಯ ಅವರ ವೈಚಾರಿಕ ವಿಷಯಗಳನ್ನೊಳಗೊಂಡ ಪ್ರಬಂಧ ಸಂಕಲನವಾಗಿದ್ದು, ಎನ್.ಬೋರಲಿಂಗಯ್ಯ ಅವರಿಗಿರುವ ಸಾಮಾಜಿಕ ಕಳಕಳಿಯೂ ಪ್ರಬಂಧಗಳಲ್ಲಿ ವ್ಯಕ್ತವಾಗಿದೆ. ಸಮಾಜವನ್ನು ಭಾದಿಸುತ್ತಿರುವ ಪ್ರಚಲಿತ ಸಮಸ್ಯೆಗಳು ತಿಳಿಸುವುದರೊಂದಿಗೆ ಸಮಾಜದ ಬಗ್ಗೆ ತಮಗಿರುವ ಕಾಳಜಿಯನ್ನು ವ್ಯಕ್ತ ಪಡಿಸುತ್ತದೆ. ಹಾಗಾಗಿ ಪ್ರಬಂಧ ಬರವಣಿಗೆಯಲ್ಲಿ ಗಟ್ಟಿತನವನ್ನು ಕಾಣಬಹುದು. ಅಧ್ಯಯನದ ಅನುಕೂಲಕ್ಕಾಗಿ ಪ್ರಬಂಧ ಸಂಕಲನವನ್ನು ಈ ಕೆಳಕಂಡಂತೆ ವಿಭಾಗಿಸಿಕೊಳ್ಳಲಾಗಿದೆ.

೧. ಸಮಾನತೆ ಮತ್ತು ಮಹಿಳೆ
೨. ಲೈಂಗಿಕ ಶಿಕ್ಷಣ
೩. ವಿವಾಹ ಪೂರ್ವ ಲೈಂಗಿಕ ಸಂಬಂಧಗಳ ಅವಶ್ಯಕತೆ ಮತ್ತು ಸ್ವರೂಪ
೪. ಮದುವೆ

ಈ ಪ್ರಬಂಧಗಳ ಸ್ವರೂಪವು ಒಬ್ಬ ವ್ಯಕ್ತಿಯ ಖಾಸಗಿ ಜೀವನಕ್ಕೆ ಸಂಬಂಧಪಟ್ಟಂತಹವುಗಳು. ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ನಡೆದು ಹೋಗುವ ಪ್ರಕ್ರಿಯೆಗಳಾಗಿವೆ. ವ್ಯಕ್ತಿಯ ಪ್ರೌಢಾವಸ್ಥೆಗೆ ಬಂದಂತಹ ಸಂದರ್ಭದಲ್ಲಿ ಎದುರಿಸುವ ಸಮಸ್ಯೆಗಳು ಮತ್ತು ಆ ಸಂದರ್ಭದಲ್ಲಿ ಇರಬೇಕಾದ ಜಾಗರೂಕತೆಯ ಸ್ವರೂಪವನ್ನು ಇಂದಿನ ಯುವ ಪೀಳಿಗೆಗೆ ತಿಳಿಸುವುದು ಇದರ ಉದ್ದೇಶವಾಗಿದೆ.

೧. ಸಮಾನತೆ ಮತ್ತು ಮಹಿಳೆ

ಸಮಾನತೆ ಎಂಬುದು ಎಲ್ಲ ಪರಿಕಲ್ಪನೆಗಳಿಗೂ ಸಂಬಂಧಪಟ್ಟದ್ದಾಗಿದೆ. ಹಾಗಾಗಿ ಮಾನವ ನೆಲೆಗಟ್ಟಿನಲ್ಲಿ ನೋಡಿದಾಗ ಯಾವ ವ್ಯಕ್ತಿಯನ್ನು ತಾರತಮ್ಯದಿಂದ ನೋಡದೆ ಸಮಾನವಾಗಿ ಕಾಣುವುದು ಸಮಾನತೆಯಾಗಿರುತ್ತದೆ. ಅಂದರೆ ಲಿಂಗ ತಾರತಮ್ಯ ಎಂದು ಹೇಳಬಹುದು. ಭಾರತೀಯ ಸಮಾಜದಲ್ಲಿ ಪ್ರಾಚೀನ ಕಾಲದಿಂದಲೂ ಆಧುನಿಕ ಕಾಲದವರೆವಿಗೂ ವರ್ಗ, ವರ್ಣ, ಲಿಂಗ ತಾರತಮ್ಯ ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಪ್ರಧಾನವಾಗಿ ಮಹಿಳೆಯನ್ನು ಕೇವಲ ನಾಲ್ಕು ಗೋಡೆಯ ಮಧ್ಯೆ ಇರಿಸಿ, ಆಕೆಗೆ ಯಾವುದೇ ಸಾಮಾಜಿಕ ಸ್ಥಾನಮಾನವನ್ನು ನೀಡದೆ ನಿರ್ಲಕ್ಷಿಸಿ ಶೋಷಿಸಲಾಗುತ್ತಿತ್ತು. ಶಿಕ್ಷಣವಂಚಿತಳನ್ನಾಗಿ ಮಾಡಿ, ನೀಡದೆ ಸಮಾಜದ ಮುಖ್ಯವಾಹಿನಿಗೆ ತರದೆ ನಿಕೃಷ್ಟವಾಗಿ ಕಾಣುವುದರೊಂದಿಗೆ

ಸ್ತ್ರೀಯರನ್ನು ಕೇವಲ ಭೋಗದ ವಸ್ತುವನ್ನಾಗಿ ನೋಡಲಾಗುತ್ತಿತ್ತು. ಮಹಿಳೆಯು 'ಅಬಲೆ'-ಯಾಗಿದ್ದಾಳೆ ಹೊರತು 'ಸಬಲೆ' ಅಲ್ಲ ಎಂದು ಬಿಂಬಿಸಲಾಗುತ್ತಿತ್ತು. ವಿಶ್ವದಾದ್ಯಂತ ಮಹಿಳೆಯರಿಗೆ ಸಮಾನತೆಯನ್ನು ನೀಡಬೇಕು ಎಂಬ ದೃಷ್ಟಿಯಿಂದ ಹಲವಾರು ಹೋರಾಟಗಳು ನಡೆದಿರುವುದನ್ನು ಕಾಣುತ್ತೇವೆ. ಪ್ರಸ್ತುತ ಮಹಿಳೆಯನ್ನು ಯಾವುದೇ ತಾರತಮ್ಯ ಮಾಡದೆ ಸಮಾನವಾಗಿ ಕಾಣಬೇಕು ಎಂಬುದು ಚಿಂತಕರ, ತಜ್ಞರ, ಬುದ್ಧಿ ಜೀವಿಗಳ ಅಭಿಪ್ರಾಯವಾಗಿದೆ. ಮಹಿಳೆಯನ್ನು ಲಿಂಗತಾರತಮ್ಯ ದೃಷ್ಟಿಯಿಂದ ನೋಡದೆ ಸಮಾನತೆಯಿಂದ ಕಾಣಬೇಕು ಎಂಬುದು ಲೇಖಕರ ಅಭಿಪ್ರಾಯವಾಗಿದೆ.

ಪ್ರಾಚೀನ ಕಾಲದಲ್ಲಿ ಮಹಿಳೆಯು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಳು ಅಂದರೆ ಶಿಕ್ಷಣದಿಂದ ವಂಚಿತೆ, ಉದ್ಯೋಗದಲ್ಲಿನ ತಾರತಮ್ಯತೆ, ಬಾಲ್ಯ ವಿವಾಹ, ಸತಿಪದ್ಧತಿ, ದೇವದಾಸಿ ಪದ್ಧತಿ, ಪರದಾ ಪದ್ಧತಿಯಂತಹ ಅನಿಷ್ಟ ಆಚರಣೆಗಳನ್ನು ಅಂದಿನ ಕಾಲದಲ್ಲಿ ರೂಢಿಯಲ್ಲಿದ್ದವು.

ಪ್ರಾಚೀನ ಕಾಲದಲ್ಲಿ ಬಾಲ್ಯವಿವಾಹ ಎಂಬುದು ಸಾಮಾಜಿಕ ಪದ್ಧತಿಯಾಗಿದ್ದು, ಅತಿ ಚಿಕ್ಕವಯಸ್ಸಿನಲ್ಲಿಯೇ ಹೆಣ್ಣು ಮಕ್ಕಳನ್ನು ವಿವಾಹ ಮಾಡುವುದು ಬಾಲ್ಯವಿವಾಹವೆನಿಸಿ-ಕೊಳ್ಳುತ್ತದೆ. ವಿವಾಹದ ನಂತರದಲ್ಲಿ ಹೆಣ್ಣು ಕೌಟುಂಬಿಕ ಹೊಂದಾಣಿಕೆಯಲ್ಲಿ ಅಸಮರ್ಥತೆ, ಲೈಂಗಿಕ ಅಪಕ್ವತೆ, ವರದಕ್ಷಿಣೆ ಕಿರುಕುಳ, ದೌರ್ಜನ್ಯ ಮೊದಲಾದವುಗಳನ್ನು ಅನುಭವಿಸುತ್ತ ಜೀವನ ಸಾಗಿಸಬೇಕಾದ ಅನಿವಾರ್ಯವಿತ್ತು.

ಸತಿಪದ್ಧತಿ ಗಂಡಸತ್ತ ಸಂದರ್ಭದಲ್ಲಿ ಆತನ ಜೊತೆಯಲ್ಲಿಯೇ ಹೆಂಡತಿ ಮರಣ ಹೊಂದುವುದು ರೂಢಿಯಲ್ಲಿರುತ್ತಿತ್ತು. ಇದರಿಂದಾಗಿ ಹೆಣ್ಣಿನ ಸ್ಥಿತಿ ಶೋಚನೀಯವಾಗಿತ್ತು.

ಪರದಾಪದ್ಧತಿ ಅಂದರೆ ಮುಸ್ಲಿಂ ಮಹಿಳೆಯರು ತಮ್ಮ ಸೌಂದರ್ಯವೇ ತಮಗೆ ಶತ್ರು ಎಂದು ಭಾವಿಸಿ. ಲೈಂಗಿಕ ಶೋಷಣೆಗಳಿಂದ ತಪ್ಪಿಸಿಕೊಳ್ಳಲು ತಮ್ಮ ರಕ್ಷಣೆಗಾಗಿ ಅವರು ಮುಖದ ಮೇಲೆ ಕಪ್ಪು ಬಟ್ಟೆಯನ್ನು ಧರಿಸಿ ಓಡಾಡಬೇಕಾದ ಸಂದರ್ಭ ಅನಿವಾರ್ಯವಾಯಿತು.

ಪ್ರಾಚೀನ ಮತ್ತು ಮಧ್ಯಕಾಲೀನ ಸಮಾಜದ ಹೋರಾಟದ ಫಲವಾಗಿ ಸತಿ ಪದ್ಧತಿ, ಬಾಲ್ಯವಿವಾಹ, ದೇವದಾಸಿ ಪದ್ಧತಿಯಂತಹ ಅನೇಕ ಸಮಸ್ಯೆಗಳು ನಿವಾರಣೆಯಾದರೂ, ಆಧುನಿಕತೆಗೆ ಹೊರಳಿದಂತೆಯೂ ಮಹಿಳೆಯು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರು-ವುದನ್ನು ಕಾಣುತ್ತಿದ್ದೇವೆ. ಆಧುನಿಕ ಕಾಲದ ಮಹಿಳೆಯ ಸಮಸ್ಯೆಯನ್ನು ಅಧ್ಯಯನದ ಅನುಕೂಲಕ್ಕಾಗಿ ಈ ಕೆಳಕಂಡಂತೆ ವಿಭಾಗಿಸಿಕೊಳ್ಳಲಾಗಿದೆ.

- ಶೈಕ್ಷಣಿಕ ತಾರತಮ್ಯ
- ಉದ್ಯೋಗದಲ್ಲಿ ತಾರತಮ್ಯ
- ರಾಜಕೀಯದಲ್ಲಿ ತಾರತಮ್ಯ
- ಕುಟುಂಬದಲ್ಲಿ ತಾರತಮ್ಯ
- ಧಾರ್ಮಿಕ ತಾರತಮ್ಯ
- ಸವಲತ್ತುಗಳನ್ನು ನೀಡುವುದರಲ್ಲಿ ತಾರತಮ್ಯ

ಪ್ರಾಚೀನ ಕಾಲದಲ್ಲಿ ಹೆಣ್ಣಿನ ಭದ್ರತೆಯ ದೃಷ್ಟಿಯಿಂದ ಶಿಕ್ಷಣವನ್ನು ಕೊಡಿಸಲು ಹಿಂಜರಿಯಲಾಗುತಿತ್ತು. ಕುಟುಂಬದಲ್ಲಿ ಹೆಣ್ಣು ಮಕ್ಕಳನ್ನು ಉದಾಸೀನವಾಗಿ ನೋಡುವ, ಗಂಡು ಮಕ್ಕಳನ್ನು ವಿಶೇಷವಾಗಿ ಕಾಣುವುದು, ಗಂಡು ಮಕ್ಕಳು ಕುಟುಂಬಕ್ಕೆ ಆಸರೆಯಾಗುತ್ತಾರೆ ಎಂಬ ನಂಬಿಕೆ, ಹೆಣ್ಣು ಆರ್ಥಿಕ ಹೊರೆ ಎಂಬ ಮನೋಧೋರಣೆಯಿಂದ ಆಕೆಯನ್ನು ಶಿಕ್ಷಣದಿಂದ ವಂಚಿತಳನ್ನಾಗಿ ಮಾಡುವ ಪ್ರಯತ್ನ ಮೊದಲಿನಿಂದಲೂ ಕಂಡುಬರುತ್ತಿದೆ.

ಮಹಿಳೆಯು ಸಬಲೆಯಲ್ಲ ಅಬಲೆ ಎಂದು ಪುರುಷ ಸಮಾಜವು ಬಿಂಬಿಸಿ, ಸ್ತ್ರೀಯು ಶಕ್ತಿಹೀನಳು ಎಂದು ಭಾವಿಸಿ ದೈಹಿಕ ಸಾಮರ್ಥ್ಯದ ಉದ್ಯೋಗಗಳಿಗೆ ಅನರ್ಹಳೆಂದು, ಅಸಮರ್ಥಳೆಂದು ಭಾವಿಸಲಾಗುತ್ತಿತ್ತು. ಹಾಗಾಗಿ ಇದು ಸೇವಾಕ್ಷೇತ್ರ, ಔದ್ಯೋಗಿಕ ಕ್ಷೇತ್ರದಲ್ಲಿ ಮಹಿಳೆಯು ಹೊಂದಿರುವ ಸ್ಥಾನಮಾನವನ್ನು ತಿಳಿಸುತ್ತದೆ.

ಪ್ರಾಚೀನ ಕಾಲದಿಂದಲೂ ಮಹಿಳೆಗೆ ರಾಜಕೀಯ ಪ್ರಾತಿನಿಧ್ಯ ನೀಡದೆ ನಿರ್ಲಕ್ಷಿಸಿಸಲಾಗುತ್ತಿತ್ತು. ಆಕೆಯನ್ನು ಕೌಟುಂಬಿಕ ಪರಿಸರಕ್ಕೆ ಮಾತ್ರ ಸೀಮಿತಗೊಳಿಸಿ ಒಂದು ದೇಶದ, ರಾಜ್ಯದ ಆಡಳಿತವನ್ನು ನಡೆಸಲು ಸಮರ್ಥಳಲ್ಲ ಎಂದು ಭಾವಿಸಿ ಆಕೆಯನ್ನು ರಾಜಕೀಯದಿಂದ ದೂರವಿರಿಸಲಾಗುತ್ತಿತ್ತು. ಹಾಗಾಗಿ ಪುರುಷ ಸಮಾಜವು ಮಹಿಳೆಯನ್ನು ಎಲ್ಲಾ ಕ್ಷೇತ್ರಗಳಲ್ಲಿ ವಂಚಿಸುವ ಪ್ರಯತ್ನ ಮಾಡಲಾಗುತ್ತಿತ್ತು.

ಕುಟುಂಬದಲ್ಲಿ ಮಹಿಳೆಗೆ ಯಾವುದೇ ಸ್ಥಾನಮಾನವನ್ನು ನೀಡದೆ ನಿರ್ಲಕ್ಷಿಸಲಾಗುತ್ತಿದೆ. ಅಂದರೆ ಕುಟುಂಬದಲ್ಲಿ ಮಹಿಳೆಯ ಮಾತಿಗೆ ಯಾವುದೇ ಮನ್ನಣೆ ನೀಡುವುದಿಲ್ಲ. ಪುರುಷನ ಅಧಿಕಾರವೇ ಅಂತಿಮವಾಗಿರುತ್ತದೆ. ಹಾಗಾಗಿ ಮಹಿಳೆಯನ್ನು ಕುಟುಂಬದಲ್ಲಿ ನಿರ್ಲಕ್ಷಿಸುತ್ತಿರುವುದನ್ನು ಕಾಣುತ್ತಿದ್ದೇವೆ.

ಧಾರ್ಮಿಕ ಕ್ಷೇತ್ರದಲ್ಲಿ ಮಹಿಳೆಯನ್ನು ತಾರತಮ್ಯದಿಂದ ನೋಡಲಾಗುತ್ತಿದೆ. ಮಹಿಳೆಯರಿಗೆ ದೇವಾಲಯಗಳಿಗೆ ಪ್ರವೇಶವಿಲ್ಲ, ಯಜ್ಞ-ಯಾಗ ಮೊದಲಾದ ಸಂದರ್ಭಗಳಲ್ಲಿ

ಮಹಿಳೆಯರಿಗೆ ಪ್ರವೇಶವನ್ನು ನಿರಾಕರಿಸಲಾಗುತ್ತದೆ. ಮಹಿಳೆಯರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಮಹಿಳೆಯರಿಗೆ ನೀಡಲು ತಾರತಮ್ಯ ನೀಡಲಾಗುತ್ತಿದೆ. ಇದು ಕೇವಲ ಪುರುಷರ ಪಾಲಾಗುತ್ತಿದೆ ಹೊರತು ಸೂಕ್ತಕಾಲದಲ್ಲಿ ಮಹಿಳೆಯರಿಗೆ ಸೌಲಭ್ಯಗಳು ತಲುಪುವುದು ಅಪರೂಪವಾಗಿರುತ್ತದೆ.

ಒಟ್ಟಾರೆಯಾಗಿ ಮಹಿಳೆಯರ ಅಸಮಾನತೆಯನ್ನು ಕುರಿತಂತೆ ಅದರ ವಿರುದ್ಧವಾಗಿ ಹೋರಾಟಗಳು ಚಳುವಳಿಗಳು ನಡೆದು ಸಮಾನತೆಯನ್ನು ತರುವ ಪ್ರಯತ್ನ ನಡೆಯಿತು. ಅಂದರೆ ಚಳುವಳಿಗಾರರು ಹೋರಾಟಗಾರರು ಸರ್ಕಾರಗಳ ಮೇಲೆ ಒತ್ತಡ ಹೇರಿ ಅನೇಕ ಕಾನೂನು, ಕಾಯಿದೆಗಳು ಜಾರಿಗೆ ಬಂದಿರುವುದನ್ನು ಕಾಣುತ್ತೇವೆ.

ಶಿಕ್ಷಣದಲ್ಲಿ ಮಹಿಳೆಯರಿಗೆ ಮೀಸಲಾತಿ, ಉದ್ಯೋಗದಲ್ಲಿ ಮೀಸಲಾತಿ, ಉದ್ಯೋಗ ಮಾಡುವ ಮಹಿಳೆಯರಿಗೆ ಮೂಲಭೂತ ಸೌಕರ್ಯಗಳ ಒದಗಿಸುವಿಕೆ, ಸಮಾನ ಕೆಲಸಕ್ಕೆ ಸಮಾನವೇತನ, ಪ್ರಸೂತಿಯ ರಜೆಗಳು ಅಲ್ಲದೆ ಕುಟುಂಬದಲ್ಲಿ ದೌರ್ಜನ್ಯ ಮತ್ತು ತಾರತಮ್ಯ ನಿವಾರಣೆ ಮಾಡುವ ದೃಷ್ಟಿಯಿಂದ ಕೌಟುಂಬಿಕ ದೌರ್ಜನ್ಯ ಕಾಯಿದೆ, ವರದಕ್ಷಿಣೆ ವಿರುದ್ಧದ ಕಾಯಿದೆಗಳನ್ನು ಜಾರಿಮಾಡಲಾಗಿದೆ. ಶಿಕ್ಷಣ ಪಡೆದ ಮಹಿಳೆಯರು ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ವಿಜ್ಞಾನ, ತಂತ್ರಜ್ಞಾನ, ಬಾಹ್ಯಾಕಾಶ, ಕ್ರೀಡೆ, ಸಾಮಾಜಿಕ, ರಾಜಕೀಯ ಮೊದಲಾದ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರುವುದನ್ನು ಕಾಣುತ್ತಿದ್ದೇವೆ.

೨. ಲೈಂಗಿಕ ಶಿಕ್ಷಣ – 'ಶಿಕ್ಷಣ ಮತ್ತು ಲೈಂಗಿಕ ಜೀವನ' ಈ ಪ್ರಬಂಧದಲ್ಲಿ ಎನ್ ಬೋರಲಿಂಗಯ್ಯ ಅವರು ಶಾಲಾ-ಕಾಲೇಜುಗಳಲ್ಲಿ ಲೈಂಗಿಕ ಶಿಕ್ಷಣದ ಅವಶ್ಯಕತೆಯನ್ನು ಹೇಳುತ್ತಾರೆ. ಇಂದಿನ ದಿನಗಳಲ್ಲಿ ಶಾಲೆಗಳಲ್ಲಿ-ಕಾಲೇಜುಗಳಲ್ಲಿ ಹದಿಹರೆಯದ ವಯಸ್ಸಿನ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ. ಪ್ರಾರಂಭದಲ್ಲಿ ಮಕ್ಕಳಿಗೆ ಲೈಂಗಿಕತೆ ಬಗ್ಗೆ ಯಾವುದೇ ಪರಿಜ್ಞಾನವಿರುವುದಿಲ್ಲ. ತದನಂತರ ವಯಸ್ಸಿಗೆ ತಕ್ಕಂತೆ ಮಕ್ಕಳಲ್ಲಿ ಆಸೆಗಳು, ಬಯಕೆಗಳು, ಕಾಮನೆಗಳು ಮೂಡುತ್ತವೆ. ಇಂತಹ ಸಂದರ್ಭದಲ್ಲಿ ಮಕ್ಕಳು ಬದಲಾವಣೆಗಳನ್ನು ಸಂದರ್ಭಗಳನ್ನು ಹೇಗೆ ನಿಭಾಯಿಸಿಕೊಳ್ಳಬೇಕು ಎಂಬುದನ್ನು ಅರಿವಿರುವುದಿಲ್ಲ. ಹಾಗಾಗಿ ಮಕ್ಕಳು ತಪ್ಪುದಾರಿ ಹಿಡಿಯುವ ಸಾಧ್ಯತೆಯಿರುತ್ತದೆ. ಆದ್ದರಿಂದ ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳ, ಮಕ್ಕಳ ಮಾನಸಿಕ ಸ್ಥಿತಿಯ ಸಮತೋಲನವನ್ನು ಕಾಪಾಡುವ ದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ಲೈಂಗಿಕ ಶಿಕ್ಷಣ ನೀಡಬೇಕಾದ ಅವಶ್ಯಕತೆಯಿರುತ್ತದೆ.

ಲೈಂಗಿಕ ಶಿಕ್ಷಣ ಎಂದರೆ ಶಾಲಾ-ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಮತ್ತು ಮಕ್ಕಳಿಗೆ ಬದುಕಿನ ಒಂದು ಭಾಗವಾದ ಲೈಂಗಿಕ ವಿಷಯಗಳನ್ನು

ತಿಳಿಸಿಕೊಟ್ಟು ಆ ಮೂಲಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನಿಡಿ ಅದಕ್ಕೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುವಂತೆ ಮಾಡುವ ಒಂದು ನೈತಿಕ ಬೋಧನೆಯೇ ಲೈಂಗಿಕ ಶಿಕ್ಷಣ ಹಾಗಾಗಿ ಲೈಂಗಿಕ ಶಿಕ್ಷಣ ಇಂದು ಎಲ್ಲರಿಗೂ ಅವಶ್ಯಕತೆಯಾಗಿದೆ.

ಲೈಂಗಿಕ ಶಿಕ್ಷಣ ಅವಶ್ಯಕತೆ

- ವಿದ್ಯಾರ್ಥಿಗಳಲ್ಲಿ ಲೈಂಗಿಕತೆಯ ಬಗ್ಗೆ ತಿಳುವಳಿಕೆಯನ್ನು ಮೂಡಿಸುವುದು.
- ವಿದ್ಯಾರ್ಥಿಗಳ ಮಾನಸಿಕ ಶಾಂತಿಯನ್ನು ಕಾಪಾಡಲು.
- ವಿದ್ಯಾರ್ಥಿಗಳಿಗೆ ನೈತಿಕತೆಯನ್ನು ಬೋದಿಸಲು
- ವಿದ್ಯಾರ್ಥಿಗಳನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಲು.
- ವಿದ್ಯಾರ್ಥಿಗಳು ಅಡ್ಡದಾರಿಗಳ ಪ್ರಚೋದಿತವಾಗದಿರಲು.
- ತಮ್ಮ ಗುರಿ ಸಾಧನೆಗಳನ್ನು ಮಾಡಲು.

ಹೀಗೆ ಹಲವಾರು ಅವಶ್ಯಕತೆಗಳನ್ನು ಲೈಂಗಿಕ ಶಿಕ್ಷಣ ಹೊಂದಿದೆ. ಆದರೂ ಇಂದಿನ ದಿನಗಳಲ್ಲಿ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಲೈಂಗಿಕ ಶಿಕ್ಷಣವನ್ನು ನೀಡಲಾಗುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳು ತಮ್ಮ ಗಮನವನ್ನು ಐಂದ್ರಿಕಭೋಗದೆಡೆಗೆ ಹರಿಬಿಟ್ಟು ತಮ್ಮ ಅಮೂಲ್ಯವಾದ ಬದುಕನ್ನು ಪತನಗೊಳಿಸಿಕೊಳ್ಳುತ್ತಿದ್ದಾರೆ. ತಮ್ಮ ಮಕ್ಕಳನ್ನೇ ಭವಿಷ್ಯದ ಭರವಸೆಗಳೆಂದು ಭಾವಿಸಿರುವ ತಂದೆ-ತಾಯಿಯಂದಿರು ಆತಂಕಕ್ಕೆ ಒಳಗಾಗುವುದನ್ನು ಕಾಣಬಹುದು. ಆದ್ದರಿಂದ ಪ್ರಸ್ತುತ ದಿನಗಳಲ್ಲಿ ಲೈಂಗಿಕ ಶಿಕ್ಷಣ ಅತ್ಯಂತ ಸೂಕ್ತವಾದುದು.

ಈ ನಿಟ್ಟಿನಲ್ಲಿ ಸರ್ಕಾರಗಳು ಶಾಲಾ-ಕಾಲೇಜುಗಳಲ್ಲಿ ಲೈಂಗಿಕ ವಿಷಯವನ್ನು ಬೋಧಿಸುವುದರಿಂದ ವಿದ್ಯಾರ್ಥಿಗಳಲ್ಲಿ ಆರೋಗ್ಯದ ಅರಿವು ಮತ್ತು ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗುತ್ತದೆ.

ಶಾಲಾ-ಕಾಲೇಜುಗಳಲ್ಲಿ ಲೈಂಗಿಕ ಶಿಕ್ಷಣ ನೀಡುವ ಸಂದರ್ಭದಲ್ಲಿ ನಾಲ್ಕು ತತ್ವಗಳನ್ನು ಅನುಸರಿಸಬೇಕು ಎಂದಿದ್ದಾರೆ. ಅವುಗಳೆಂದರೆ.

- ಕಲಾತ್ಮಕತೆ
- ನೈತಿಕತೆ
- ಬೌದ್ಧಿಕತೆ
- ಸಮಾನತೆ ಅಥವಾ ಸಾಮಾಜಿಕ ನ್ಯಾಯ

- **ಕಲಾತ್ಮಕತೆ**

'ಶಿಕ್ಷಣ ಮತ್ತು ಲೈಂಗಿಕ ಜೀವನ' ಈ ಕೃತಿಯಲ್ಲಿ ಬೋರಲಿಂಗಯ್ಯನವರು ಕಲಾತ್ಮಕತೆಯ ಪರಿಕಲ್ಪನೆಯನ್ನು ವಿವರಿಸುತ್ತಾ ಪ್ರಾಣಿಲೋಕದ ಕಿರೀಟಪ್ರಾಯನಾದ ಮನುಷ್ಯ ಪ್ರಾಣಿಗಳಿಗಿಂತ ಭಿನ್ನವಾಗಿ ಬದುಕುತ್ತಿದ್ದಾನೆಂದು ತಿಳಿಯುವುದಕ್ಕೆ ನಮಗಿರುವ ಮುಖ್ಯ ಆಧಾರ ಕಲಾತ್ಮಕ ಜೀವನ ವಿನ್ಯಾಸ. ಕಲಾತ್ಮಕತೆ ಪ್ರಕೃತಿಯ ಒಂದು ಲಕ್ಷಣ. ಪ್ರಕೃತಿಯ ಚೆಲುವಲ್ಲವೂ ರತಿ ಸಂಬಂಧ ಕಾರಣಗಳಿಗಾಗಿಯೇ ಪಡಿಮಿಡಿಯುತ್ತಿರುವುದು ಮತ್ತು ಈ ತಿಳುವಳಿಕೆ ಮನುಷ್ಯನನ್ನು ಬಿಟ್ಟು ಅನ್ಯತ್ರ ಆಜ್ಞಾತವಾಗಿ ಉಳಿದಿರುವುದು. ಆದ್ದರಿಂದ ಪ್ರಕೃತಿಯ ಪರಂಪರಾಗತವಾಗಿ ಕಲಾತ್ಮಕತೆ ಮಾನವ ಲೋಕದಲ್ಲಿ ತನಗೆ ವಿಶಿಷ್ಟವಾಗಿರುವ ತಿಳುವಳಿಕೆಯ ಪರಿಣಾಮದಿಂದಾಗಿ ಪ್ರತಿಭಾಜನ್ಯ ಪ್ರತಿಮಾ ಲೋಕವೊಂದನ್ನು ಸೃಷ್ಟಿಸಿಕೊಳ್ಳುತ್ತದೆ.

ಮಾನವ ಬದುಕಿನ ಸಾರ್ಥಕತೆಯಿರುವುದು ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ಲೈಂಗಿಕ ಚಟುವಟಿಕೆ ಪ್ರಕೃತಿದತ್ತವಾಗಿದ್ದು ಎಂದಿಗೂ ಅದೇ ಪರಾಕಾಷ್ಠೆಯಾಗಿರುವುದಿಲ್ಲ. ಮನುಷ್ಯನ ಸಾಂಸ್ಕೃತಿಕ, ಆಧ್ಯಾತ್ಮಿಕದೊಂದಿಗೆ ಲೈಂಗಿಕ ಅಪೇಕ್ಷೆಗಳು ಜೀವನದ ಪರಮೋಚ್ಚತೆಗಳನ್ನು ನಿರ್ಧರಿಸುವಂತಹವುಗಳು. ಪ್ರಾಣಿಗಳಿಗೆ ಲೈಂಗಿಕ ಅಪೇಕ್ಷೆಯು ಮೂಲಭೂತವಾಗಿರುತ್ತದೆ. ಆದರೆ ಪ್ರತಿಯೊಬ್ಬ ಮನುಷ್ಯನಿಗೆ ಲೈಂಗಿಕತೆಯು ಸಂತಾನದ ಉದ್ದೇಶವನ್ನು ಹೊಂದಿರುತ್ತದೆ. ಹಾಗಾಗಿ ಮಾನವನಿಗೆ ನೈತಿಕ ಬದುಕನ್ನು ಕಟ್ಟಿಕೊಳ್ಳಲು ಲೈಂಗಿಕ ಶಿಕ್ಷಣದ ಅವಶ್ಯಕತೆಯಿದೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

- **ನೈತಿಕತೆ**

'ಶಿಕ್ಷಣ ಮತ್ತು ಲೈಂಗಿಕ ಜೀವನ' ಈ ಕೃತಿಯಲ್ಲಿ ಬೋರಲಿಂಗಯ್ಯನವರು ನೈತಿಕತೆಯ ಪರಿಕಲ್ಪನೆಯನ್ನು ವಿವರಿಸುತ್ತಾ ಲೈಂಗಿಕ ಶಿಕ್ಷಣ ನೀಡುವ ಸಂದರ್ಭದಲ್ಲಿ ನೈತಿಕತೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕಾಗುತ್ತದೆ. ನೀತಿ ಬದುಕಿನ ಮೂಲ ಮಂತ್ರ, ಜೀವನದಲ್ಲಿ ಏನನ್ನೇ ಸಾಧಿಸಬೇಕಾದರೂ ನೀತಿ–ನೈತಿಕತೆ ಬಹಳ ಮುಖ್ಯ. ಲೈಂಗಿಕ ವಿಷಯದಲ್ಲಿಯೂ ನೀತಿ ಪರಿಪಾಲನೆ ಮುಖ್ಯವಾಗಿದ್ದು, ಇದನ್ನು ಸಮಾಜದಿಂದ, ತಂದೆ–ತಾಯಿಯಂದಿರು, ಸ್ನೇಹಿತರು, ಶಿಕ್ಷಕರುಗಳಿಂದ ನೀತಿಪಾಠವನ್ನು ಕಲಿಯುವ ಪ್ರಸ್ತುತತೆ ಅಗತ್ಯವಾಗಿದೆ ಎಂಬುದನ್ನು ಹೇಳಿದ್ದಾರೆ.

- **ಬೌದ್ಧಿಕತೆ**

'ಶಿಕ್ಷಣ ಮತ್ತು ಲೈಂಗಿಕ ಜೀವನ' ಈ ಕೃತಿಯಲ್ಲಿ ಬೋರಲಿಂಗಯ್ಯನವರು ಬೌದ್ಧಿಕ ಪರಿಕಲ್ಪನೆಯನ್ನು ವಿವರಿಸುತ್ತಾ ಬೌದ್ಧಿಕತೆ ಎಂಬುದು ಮಕ್ಕಳ ಮಾನಸಿಕ ಸ್ಥಿತಿಗೆ ಸಂಬಂಧಿಸಿದ್ದು, ವ್ಯಕ್ತಿಯಲ್ಲಿ ಆಸೆಗಳು, ಬಯಕೆಗಳು, ಕಾಮನೆಗಳು ಮೂಡಿದಂತಹ ಸಂದರ್ಭದಲ್ಲಿ ವ್ಯಕ್ತಿ ಮಾನಸಿಕ ತೊಳಲಾಟಕ್ಕೀಡಾಗುವುದರೊಂದಿಗೆ ಆತನ ಮನೋಧೋರಣೆಯು ವಿಭಿನ್ನವಾಗಿರುತ್ತದೆ. ಆದ್ದರಿಂದ ವ್ಯಕ್ತಿಗೆ ಸಂಯಮಯೊಂದಿಗೆ ಬೌದ್ಧಿಕ ಮನಸ್ಥಿತಿಯನ್ನು ಕಾಪಾಡುವಂತಹ ಲೈಂಗಿಕ ಶಿಕ್ಷಣದ ಅವಶ್ಯಕತೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

- **ಸಮಾನತೆ ಅಥವಾ ಸಾಮಾಜಿಕ ನ್ಯಾಯ**

'ಶಿಕ್ಷಣ ಮತ್ತು ಲೈಂಗಿಕ ಜೀವನ' ಈ ಕೃತಿಯಲ್ಲಿ ಬೋರಲಿಂಗಯ್ಯನವರು ಸಮಾನತೆ ಅಥವಾ ಸಾಮಾಜಿಕ ನ್ಯಾಯ ಪರಿಕಲ್ಪನೆಯನ್ನು ವಿವರಿಸುತ್ತಾ ಶಾಲಾ-ಕಾಲೇಜುಗಳಲ್ಲಿ ಲೈಂಗಿಕ ಶಿಕ್ಷಣ ನೀಡುವ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿ ವಿದ್ಯಾರ್ಥಿಯರು, ವಿದ್ಯಾರ್ಥಿನಿಯರು ಎಂದು ಯಾವುದೇ ತಾರತಮ್ಯ ಮಾಡದೇ ಎಲ್ಲರಿಗೂ ಸಮಾನತೆಯ ಮನೋಭಾವನೆಗಳನ್ನು ಬೆಳೆಸುವಂತಹ ಶಿಕ್ಷಣ ಚಟುವಟಿಕೆಗಳನ್ನು ನೀಡುವುದು ಮತ್ತು ಬೆಳೆಸುವುದು ಅವಶ್ಯಕ ಎಂದು ಈ ಪ್ರಬಂಧದಲ್ಲಿ ಪ್ರತಿಪಾದಿಸುತ್ತಾರೆ.

೩. ವಿವಾಹ ಪೂರ್ವ ಲೈಂಗಿಕ ಸಂಬಂಧಗಳ ಅವಶ್ಯಕತೆ ಮತ್ತು ಸ್ವರೂಪ

ಎನ್.ಬೋರಲಿಂಗಯ್ಯ ಅವರು ವಿವಾಹ ಪೂರ್ವದ ಲೈಂಗಿಕ ಸಂಬಂಧಗಳ ಅವಶ್ಯಕತೆಯನ್ನು ಕುರಿತು 'ಶಿಕ್ಷಣ ಮತ್ತು ಲೈಂಗಿಕ ಜೀವನ' ಪ್ರಬಂಧ ಸಂಕಲನದಲ್ಲಿ ತಿಳಿಸುತ್ತಾರೆ. ಇದು ಕೂಡ ವ್ಯಕ್ತಿಯ ಖಾಸಗಿ ಬದುಕಿಗೆ ಸಂಬಂಧಪಟ್ಟ ವಿಷಯವಾಗಿದೆ. ಹಾಗಾಗಿ ಪ್ರಬಂಧಕಾರರು ಸಮಾಜದ ಬಗ್ಗೆ ಕಳಕಳಿ, ಕಾಳಜಿವುಳ್ಳವರಾದ್ದರಿಂದ ಸಮಾಜದಲ್ಲಿ ವಿವಾಹ ಪೂರ್ವ ಲೈಂಗಿಕಸಂಬಂಧವನ್ನು ಕುರಿತು ವಿಶ್ಲೇಷಿಸಿದ್ದಾರೆ.

ಮಾನವ ಬದುಕಿನಲ್ಲಿ ಲೈಂಗಿಕ ಪ್ರವೃತ್ತಿ, ಭೋಗ ಮತ್ತು ಸಂಭೋಗ ಎರಡು ಸ್ತರಗಳಲ್ಲಿ ಕೆಲಸ ಮಾಡುತ್ತಿರುವುದರಿಂದ ಅದು ಹೆಚ್ಚು ಸಂಕೀರ್ಣ ಮತ್ತು ಸೂಕ್ಷ್ಮ ಸಮಸ್ಯೆಯಾಗಿ ಪರಿಣಮಿಸಿದೆ. ಯಾವಾಗ ಲೈಂಗಿಕತೆ ನಮ್ಮ ಬದುಕಿನಲ್ಲಿ ಭೋಗ ಜೀವನದ ಒಂದು ಪ್ರಮುಖ ಭಾಗವಾಗಿ ಪರಿಣಮಿಸಿತೋ ಬಹುಶಃ ಆಗಲೇ ಅದರ ಮೇಲೆ ಇನ್ನಿಲ್ಲದ ನಿರ್ಬಂಧಗಳನ್ನು ಹೇರಲು ಪ್ರಾರಂಭಿಸಿದ್ದಿರಬಹುದು. ಆಸ್ತಿರಕ್ಷಣೆಗೂ ಸ್ತ್ರೀಯ ಶೀಲಕ್ಕೂ

ಸಂಬಂಧ ಕಲ್ಪಿಸಿಕೊಂಡಿರುವ ಮಾನವ ಬದುಕು ಲೈಂಗಿಕ ಅದರಲ್ಲಿಯೂ ಸ್ತ್ರೀ ಜೀವನದಲ್ಲಿ ಪರಮ ಪಾವಿತ್ರ್ಯತೆಯನ್ನು ಗುರುತಿಸಿಕೊಳ್ಳಲು ಅವಕಾಶ ಕಂಡುಕೊಳ್ಳಬೇಕಾಯಿತು. ಈ ಎರಡು ಕಾರಣಗಳಿಂದ ಸಂತಾನಕ್ಕಾಗಿ ಪ್ರಕೃತಿ ನಿಯಮಿಸಿದ ಸಂಭೋಗಕ್ರಿಯೆ ಗೌಣಗೊಂಡು ಮಾನವ ವೈಯಕ್ತಿಕವಾಗಿ ವೃದ್ಧಿಸಿಕೊಂಡಿರುವ ಬೋಗ ಜೀವನದ ಹೆಗ್ಗಳಿಕೆ ಪಡೆಯುವುದು ಅನಿವಾರ್ಯವಾಯಿತು. ಆದ್ದರಿಂದ ಪ್ರೌಢರಿಂದ ವೃದ್ಧಾಪ್ಯ ಗಂಡಸರಲ್ಲಿಯೂ ಪರಸ್ತ್ರೀಯರನ್ನು ಭೋಗಿಸುವುದು ಮತ್ತು ಅತ್ಯುಚ್ಛ ಲೈಂಗಿಕತೆಯನ್ನು ಬಯಸುವುದು ಒಂದು ಧೀರೋದ್ಧಾತನ ವರ್ತನೆಯನ್ನು ಕಂಡುಕೊಳ್ಳುವ ಪ್ರವೃತ್ತಿಗೆ ಇದು ಕಾರಣವಾಗುತ್ತದೆ ಎಂದು ಹೇಳಬಹುದು.

- **ಶಾರೀರಿಕ ಆರೋಗ್ಯ**

‘ಶಿಕ್ಷಣ ಮತ್ತು ಲೈಂಗಿಕ ಜೀವನ’ ಈ ಕೃತಿಯಲ್ಲಿ ಬೋರಲಿಂಗಯ್ಯನವರು ಶಾರೀರಿಕ ಆರೋಗ್ಯ ಪರಿಕಲ್ಪನೆಯನ್ನು ವಿವರಿಸುತ್ತಾ ಯಾವುದೇ ಜೀವಿಯ ಬದುಕು ಸುಲಲಿತವಾಗಿ ಸಾಗಬೇಕಾದರೆ ಆರೋಗ್ಯಕರವಾದ ಶಾರೀರಿಕ ಸದೃಢತೆಯ ಅಗತ್ಯವಿದೆ ಎಂಬುದನ್ನು ಎಲ್ಲರೂ ಬಲ್ಲರು. ಆದರೆ ಮಾನವನ ಜೀವನದಲ್ಲಿ ಶಾರೀರಿಕ ಆರೋಗ್ಯ ಜೀವನ ವಿಧಾನವು ಸಾರ್ಥಕತೆಯ ದೃಷ್ಟಿಯಿಂದ ಮುಖ್ಯವಾದುದೆಂಬುದು ಮನದಟ್ಟಾದಂತೆ ತೋರುವುದಿಲ್ಲ. ಮಕ್ಕಳು ತಮ್ಮ ಪ್ರೌಢಾವಸ್ಥೆಯಲ್ಲಿ ಲೈಂಗಿಕ ಕುತೂಹಲಕ್ಕೊಳಗಾಗಿ ಮುಷ್ಟಿ ಮೈಥುನ, ಸಲಿಂಗರತಿ ಸಂಬಂಧಗಳು, ಲೈಂಗಿಕ ಚಿಲ್ಲರೆ ಸಾಹಿತ್ಯ, ಮೊಬೈಲ್ ಹಾಗೂ ಅಂತರ್ಜಾಲಗಳಲ್ಲಿ ಅಶ್ಲೀಲ ಚಿತ್ರ ವೀಕ್ಷಣೆಯಂತಹ ಚಟುವಟಿಕೆಗಳಲ್ಲಿ ಅತಿಯಾಗಿ ತೊಡಗಿ ಮಾನಸಿಕ ಹಾಗೂ ಶಾರೀರಿಕ ಆರೋಗ್ಯ ಹಾಳುಮಾಡಿಕೊಳ್ಳುವುದನ್ನು ಕಾಣುತ್ತೇವೆ.

- **ಮಾನಸಿಕ ಆರೋಗ್ಯ**

‘ಶಿಕ್ಷಣ ಮತ್ತು ಲೈಂಗಿಕ ಜೀವನ’ ಈ ಕೃತಿಯಲ್ಲಿ ಬೋರಲಿಂಗಯ್ಯನವರು ಮಾನಸಿಕ ಆರೋಗ್ಯ ಪರಿಕಲ್ಪನೆಯನ್ನು ವಿವರಿಸುತ್ತಾ ‘ಶಕ್ತಿಯುತ ಮನಸ್ಸು ಶಕ್ತಿಯುತ ಶರೀರದಲ್ಲಿ ವಾಸಿಸುತ್ತದೆ’. ಈ ಗಾದೆ ಮಾನವ ಜನಾಂಗದ ಶರೀರಕ್ಕೆ ಮನಸಿಗೂ ಇರುವ ನಿಕಟ ಸಂಬಂಧವನ್ನು ಕುರಿತು ವರ್ಣಿಸುತ್ತದೆ. ಲೈಂಗಿಕ ಸುಪ್ತಕಾಮನೆಗಳು ವ್ಯಕ್ತಿಯ ಮನಸ್ಸಿಗೆ ಹಾನಿಯುಂಟುಮಾಡುವಷ್ಟು ಶರೀರದ ಮೇಲೆ ಪರಿಣಾಮವನ್ನುಂಟುಮಾಡುವುದಿಲ್ಲ. ಮಾನಸಿಕ ಹಾದರವಂತೂ ಶಾರೀರಿಕ ಹಾದರಕ್ಕಿಂತ ಹಾನಿಕಾರಕವಾದುದು. ಹಾಗಾಗಿ ಲೈಂಗಿಕತೆಗೆ ಸಂಬಂಧಿಸಿದಂತೆ ತಮ್ಮ ಆಸೆ ಆಕಾಂಕ್ಷೆ ಬಯಕೆಯನ್ನು ಮಾನವ ಈಡೇರಿಸಿಕೊಳ್ಳದಿದ್ದ ಸಂದರ್ಭದಲ್ಲಿ ಮಾನವ ಮಾನಸಿಕ ರೋಗಿಯಾಗಿ ಬಳಲುತ್ತಾನೆ.

ಆದ್ದರಿಂದ ಮನುಷ್ಯನಿಗೆ ಯೋಗ್ಯವಯಸ್ಸಿನಲ್ಲಿ ಲೈಂಗಿಕತೆಯನ್ನು ಸಮಾಜ ಒಪ್ಪಿತ ರೀತಿಯಲ್ಲಿ ಹೊಂದುವುದು ಆತನ ಮಾನಸಿಕ ಆರೋಗ್ಯ ಕಾಪಾಡುವಲ್ಲಿ ಅತ್ಯಂತ ಅವಶ್ಯಕವಾದುದಾಗಿದೆ.

- **ಸಾಮಾಜಿಕ ಆರೋಗ್ಯ**

ಯಾವುದೇ ಒಬ್ಬ ವ್ಯಕ್ತಿಯ ಸಾಮಾಜಿಕ ಸ್ಥಾನಮಾನವು ಆ ವ್ಯಕ್ತಿಯ ಲೈಂಗಿಕ ಸಂಬಂಧಗಳ ಸ್ವರೂಪವನ್ನು ಆಧರಿಸಿರುತ್ತದೆ. ಅಂತೆಯೇ ಲೈಂಗಿಕ ವಿಷಯವು ಒಂದು ವ್ಯಾಪ್ತಿಗೆ ಒಳಪಟ್ಟಿರಬೇಕು. ಚೌಕಟ್ಟಿಗೆ ಅನುಸಾರವಾಗಿರಬೇಕು. ಯಾವುದೇ ವ್ಯಕ್ತಿಯು ಆ ವ್ಯಾಪ್ತಿಯನ್ನು ಮೀರಿದಾಗ ವ್ಯಕ್ತಿ ಸಾಮಾಜಿಕವಾಗಿ ಅನಾರೋಗ್ಯಕ್ಕೆ ತುತ್ತಾಗುತ್ತಾನೆ, ಸಮಾಜವು ಆತನನ್ನು ಅತ್ಯಂತ ನಿಕೃಷ್ಟವಾಗಿ ಕಾಣುತ್ತದೆ. ಆದ್ದರಿಂದ ವ್ಯಕ್ತಿಯ ಸಾಮಾಜಿಕ ಆರೋಗ್ಯದಲ್ಲಿ ಲೈಂಗಿಕತೆಯ ಪಾತ್ರ ಮುಖ್ಯ.

ಸಾಮಾಜಿಕ ಆರೋಗ್ಯದ ವಿಷಯದಲ್ಲಿ ಅನೇಕ ಒಳಸಂಗತಿಗಳನ್ನು ನೋಡಬೇಕಾಗುವುದು

ಅ. ಇಂದ್ರಿಯ ನಿಗ್ರಹ ಶಕ್ತಿ

ಸಮಾಜದಲ್ಲಿ ಸರಿಯಾದ ಸ್ಥಾನಮಾನ ಪಡೆಯಬೇಕಾದರೆ ಲೈಂಗಿಕತೆ ವಿಷಯದಲ್ಲಿ ಅತ್ಯಂತ ಜಾಗರೂಕವಾಗಿರಬೇಕು. ಅಂದರೆ ಇಂದ್ರಿಯಗಳನ್ನು ನಿಗ್ರಹ ಮಾಡಬೇಕಾಗುತ್ತದೆ. ಹಾಗಾದಾಗ ಮಾತ್ರ ವ್ಯಕ್ತಿಯು ಇಂದ್ರಿಯಗಳನ್ನು ನಿಗ್ರಹಿಸಿ ಸಮಾಜದಲ್ಲಿ ಒಬ್ಬ ಉತ್ತಮ ವ್ಯಕ್ತಿಯಾಗಿ ತನ್ನ ಬದುಕನ್ನ ಸಾಗಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಮಾಜವು ವ್ಯಕ್ತಿಯನ್ನು ಸಂಶಯದಿಂದ ನೋಡುತ್ತದೆ.

ಆ. ಭಾವೈಕ್ಯ ಸಾಧನೆ

ಸಮಾಜದಲ್ಲಿ ಭಾವೈಕ್ಯತೆ ಎನ್ನುವುದು ಬಹಳ ಮುಖ್ಯವಾದುದು. ಲೈಂಗಿಕ ಕಾಮನೆಗಳು, ಭಾವನೆಗಳು ಪ್ರಕೃತಿದತ್ತವಾದವುಗಳು ಈ ಬಯಕೆಗಳು, ಭಾವನೆಗಳು ಯಾವುದೇ ಜಾತಿ, ಧರ್ಮದ ಆಧಾರದ ಮೇಲೆ ನಿರ್ಧರಿತವಾಗುವಂತಹುಗಳಲ್ಲ. ಅವು ಪ್ರಕೃತಿಯು ನೀಡಿರುವ ಸೌಂದರ್ಯ ಮತ್ತು ನೈತಿಕತೆ ಆಧಾರದ ಮೇಲೆ ಗಂಡು-ಹೆಣ್ಣಿನ ಭಾವನೆಗಳು ಸಂಕಲಿತವಾಗುತ್ತದೆ. ಇಲ್ಲಿ ಜಾತಿ, ಧರ್ಮ ಗೌಣವಾಗಿ ಭಾವೈಕ್ಯತೆಯೇ ಮುಖ್ಯವಾಗುತ್ತದೆ.

ಇ. ಸಾಂಸರಿಕ ಜೀವನಕ್ಕೆ ಸಿದ್ಧತೆ

ವ್ಯಕ್ತಿಯು ವಯಸ್ಸಾಗುತ್ತಿದ್ದಂತೆ, ಯೌವನಾವಸ್ಥೆಗೆ ಬರುತ್ತಿದ್ದಂತೆ ಆತನಲ್ಲಿ ಹಲವಾರು ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಅಂದರೆ ಜ್ಞಾನ ಮೊದಲಾದವುಗಳು ವೃದ್ಧಿಯಾಗಿ

ವಿವಾಹವಾಗುದಕ್ಕೆ ಸಿದ್ದವಾಗುತ್ತಾನೆ. ಆದ್ದರಿಂದ ವ್ಯಕ್ತಿಯು ಸಾಂಸರಿಕ ಜೀವನಕ್ಕೆ ಸಿದ್ದಗೊಳ್ಳುವುದರೊಂದಿಗೆ ಬದುಕಿನ ಮಹತ್ವದ ಘಟ್ಟಕ್ಕೆ ಕಾಲಿಡಲು ಬಯಸುತ್ತಾನೆ. ಹಾಗಾಗಿ ಗೃಹಸ್ಥಾಶ್ರಮದ ಪ್ರವೇಶದ ಮೂಲಕ ಬದುಕನ್ನ ನಡೆಸುವ ಕ್ರಮವನ್ನು ಅನುಸರಿಸುತ್ತಾನೆ.

ಹೀಗೆ ಎನ್.ಬೋರಲಿಂಗಯ್ಯ ಅವರು ಸಮಾಜದಲ್ಲಿ ವ್ಯಕ್ತಿಯ ಬದುಕಿನಲ್ಲಿ ಆಗುವ ಬದಲಾವಣೆಗಳ ಸ್ವರೂಪವನ್ನು ತಿಳಿಸುವುದರೊಂದಿಗೆ ವ್ಯಕ್ತಿಯನ್ನು ಎಲ್ಲ ಬಗೆಯಲ್ಲಿ ನೋಡುವ ದೃಷ್ಟಿಕೋನವನ್ನು ತೆರೆದಿಡುವುದರೊಂದಿಗೆ ಜೀವನದ ಮಹತ್ವ ಘಟ್ಟವನ್ನು ಪರಿಶೀಲಿಸುತ್ತಾ ಅದಕ್ಕೆ ಪರಿಹಾರೋಪಾಯಗಳನ್ನು ಸೂಚಿಸುವುದು ವಿಶೇಷವಾಗಿ ಕಂಡುಬರುತ್ತದೆ. ಮದುವೆ ಎಂಬ ಪ್ರಬಂಧದಲ್ಲಿ ಎನ್.ಬೋರಲಿಂಗಯ್ಯ ಅವರು ಮಾನವನ ಬದುಕಿನ ಘಟ್ಟಗಳಲ್ಲಿ ವಿವಾಹದ ಪಾತ್ರ ಮತ್ತು ಮಹತ್ವವನ್ನು ಕುರಿತಂತೆ ಚರ್ಚಿಸಿದ್ದಾರೆ. ಹಾಗಾಗಿ ಪ್ರಬಂಧಕಾರರು ವ್ಯಕ್ತಿಯ ಬದುಕಿನ ವೈಯಕ್ತಿಕ ನೆಲೆಗಳನ್ನು ಬರವಣಿಗೆಯ ರೂಪದಲ್ಲಿ ತಂದಿರುವುದು ವಿಶೇಷವೆನಿಸುತ್ತದೆ.

ವಿವಾಹವೆನ್ನುವುದು ಮಾನವನ ಜೀವನದಲ್ಲಿ ಅತ್ಯಂತ ಮಹತ್ವವಾದ ಘಟ್ಟ. ವಿವಾಹವೆಂಬುದು ಆ ವ್ಯಕ್ತಿಗೆ ಸಮಾಜದಲ್ಲಿ ಪರಿಪೂರ್ಣತೆಯನ್ನು ತಂದುಕೊಡುತ್ತದೆ. ಇಲ್ಲವಾದಲ್ಲಿ ಆ ವ್ಯಕ್ತಿಯು ಸಮಾಜದಲ್ಲಿ ಅಪೂರ್ಣದಂತೆಯೇ. ಆದ್ದರಿಂದ ಇಂದು ಭಾರತೀಯ ಸಮಾಜದಲ್ಲಿ ವಿವಾಹವೆಂಬ ಪರಿಕಲ್ಪನೆಯು ಅತ್ಯಂತ ಮಹತ್ವಪೂರ್ಣ–ವಾದುದಾಗಿದೆ.

ವಿವಾಹವೆಂಬುದು ವಯಸ್ಕ ಗಂಡು–ಹೆಣ್ಣಿನ ನಡುವೆ ನಡೆಯುವ ಸಾಮಾಜಿಕ ಸಂಸ್ಕಾರವಾಗಿದ್ದು ಇದು ಗಂಡು–ಹೆಣ್ಣಿನ ನಡುವಿನ ದೈಹಿಕ, ಮಾನಸಿಕ, ಭಾವನಾತ್ಮಕ ಬಂಧವಾಗಿದೆ. ಅವಿವಾಹಿತನಾಗಿರುವ ವ್ಯಕ್ತಿಯು ವಿವಾಹ ನಂತರ ಕೌಟುಂಬಿಕ ಜವಬ್ದಾರಿಯನ್ನು ನಿರ್ವಹಿಸಬೇಕಾಗಿರುವುದು. ಈ ಸ್ಥಿತ್ಯಂತದ ಮೂಲಕ ವ್ಯಕ್ತಿಯು ಸಮಾಜದಲ್ಲಿ ಗೌರವವನ್ನು ಪಡೆದುಕೊಳ್ಳುವುದರೊಂದಿಗೆ, ಗಂಡು–ಹೆಣ್ಣಿನಲ್ಲಿ ವೈವಾಹಿಕ ಸಂಬಂಧದ ಸ್ವರೂಪವು ಗಟ್ಟಿಗೊಳ್ಳುವುದಲ್ಲದೆ ಹಲವಾರು ಸಂಪ್ರದಾಯ, ಆಚರಣೆ, ಆಚಾರ–ವಿಚಾರಗಳನ್ನು ಅನುಸರಿಸುತ್ತಾ ತಮ್ಮ ಬದುಕಿನಲ್ಲಿ ಮುನ್ನಡೆಯಬೇಕಾಗುತ್ತದೆ.

ವಿವಾಹವಾದ ನಂತರ ಅತ್ಯಂತ ಮಹತ್ವವಾದ ಘಟ್ಟ ಮಕ್ಕಳನ್ನು ಪಡೆಯುವುದು. ಸಂತಾನ ಪಡೆಯುವಿಕೆಯು ಸಮಾಜದಲ್ಲಿ ಅತ್ಯಂತ ಮುಖ್ಯವಾಗಿರುತ್ತದೆ. ಹಿಂದಿನಿಂದಲೂ ಪುತ್ರಸಂತಾನದ ಬಯಕೆಯು ಯಥೇಚ್ಛವಾಗಿ ಕಾಡುತ್ತಿದೆ. ತಂದೆ–ತಾಯಿಗಳ ಮರಣದ

ಸಂದರ್ಭದಲ್ಲಿ ಗಂಡುಮಕ್ಕಳೇ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದರಿಂದ ಮೋಕ್ಷ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯಿದೆ.

ವಿವಾಹದಿಂದಾಗಿ ಪುರುಷ ಮತ್ತು ಮಹಿಳೆಯಲ್ಲಾಗುವ ಬದಲಾವಣೆಗಳು

- ಸಮಾಜದ ಗೌರವಕ್ಕೆ ಪಾತ್ರನಾಗುತ್ತಾನೆ/ಳೆ.
- ಲೈಂಗಿಕ ವಿಷಯದಲ್ಲಿ ಸ್ಥಿಮಿತನಾಗುತ್ತಾನೆ/ಳೆ.
- ಕುಟುಂಬದ ಜವಬ್ದಾರಿಯನ್ನು ವಹಿಸಿಕೊಳ್ಳುತ್ತಾನೆ/ಳೆ.
- ಉದ್ಯೋಗವನ್ನು ಗಳಿಸಿಕೊಳ್ಳುತ್ತಾನೆ/ಳೆ.
- ಸಂತಾನ ಭಾಗ್ಯವನ್ನು ಪಡೆಯುತ್ತಾನೆ/ಳೆ.
- ಕುಟುಂಬದಲ್ಲಿ ಆನಂದವನ್ನು, ಹರ್ಷವನ್ನು ಕಾಣುತ್ತಾನೆ.
- ಕುಟುಂಬದಲ್ಲಿ ಏರ್ಪಾಡಾಗುವ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಾನೆ.

೪. ಆಧುನಿಕ ಸಮಾಜದಲ್ಲಿ 'ವಿವಾಹ'

ಆಧುನಿಕ ಸಮಾಜದಲ್ಲಿ ವಿವಾಹವು ತನ್ನ ಸ್ವರೂಪದಲ್ಲಿ ಬದಲಾವಣೆಯನ್ನು ಪಡೆದುಕೊಳ್ಳುತ್ತಿದೆ. ಶಿಕ್ಷಣವಂತರಾದ ಇಂದಿನ ಯುವ ಸಮುದಾಯವು ವಿವಾಹದ ಸಂದರ್ಭದಲ್ಲಿ ತಮ್ಮ ನಿರ್ಧಾರವನ್ನು ಪ್ರಕಟಿಸುತ್ತಾರೆ. ಮತ್ತು ತನ್ನ ಬಾಳಸಂಗಾತಿಯ ಆಯ್ಕೆಯಲ್ಲಿ ಸ್ವಾತಂತ್ರ್ಯವಿರುತ್ತದೆ. ಪ್ರಸ್ತುತ ಸಮಾಜದಲ್ಲಿ ಯುವಕ-ಯುವತಿಯರು ಯಾವುದೇ ಜಾತಿ, ಧರ್ಮ, ಪಂಥ, ಪಂಗಡಗಳನ್ನು ನೋಡದೆ ಅಂತರ್ಜಾತಿ ವಿವಾಹವಾಗುತ್ತಿದ್ದಾರೆ. ಈ ಬೆಳವಣಿಗೆಯು ಸಮಾಜದಲ್ಲಿರುವ ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಸಹಕಾರಿಯಾಗಿದೆ.

ಆಧುನಿಕ ಕಾಲದಲ್ಲಿ ಯುವಕ-ಯುವತಿಯರು ತಮ್ಮ ಶಕ್ತಿ ಸಾಮರ್ಥ್ಯಗಳಿಗೆ ಅನುಗುಣವಾಗಿ ತಮ್ಮ ಸಂಗಾತಿಯನ್ನು ಆಯ್ಕೆಮಾಡಿಕೊಂಡು ಅವರ ಶಕ್ತ್ಯಾನುಸಾರ ವಿವಾಹಮಾಡಿಕೊಳ್ಳುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಹಾಗೂ ಆಧುನಿಕತೆಯ ಪ್ರಭಾವದಿಂದ ಸರಳ ವಿವಾಹ, ಪ್ರೇಮ ವಿವಾಹ ಮತ್ತು ಸಾಮೂಹಿಕ ವಿವಾಹಗಳು ನಡೆಯುತ್ತಿವೆ. ಹೀಗೆ ಪ್ರಸ್ತುತ ಸಮಾಜದಲ್ಲಿ ವಿವಾಹವು ಸರಳತೆಯ ರೂಪವಾಗಿ ಒಂದುಕಡೆ ಕಂಡುಬಂದರೆ ಮತ್ತೊಂದು ಕಡೆ ದುಂದುವೆಚ್ಚವಾಗುತ್ತಿರುವುದನ್ನು ಕಾಣಬಹುದು.

ಒಟ್ಟಾರೆಯಾಗಿ 'ಶಿಕ್ಷಣ ಮತ್ತು ಲೈಂಗಿಕ ಜೀವನ' ಈ ಪ್ರಬಂಧ ಸಂಕಲನದಲ್ಲಿ ಎನ್.ಬೋರಲಿಂಗಯ್ಯ ಅವರ ಆಲೋಚನೆಗಳು, ಚಿಂತನೆಗಳು ಸಮಾಜಮುಖಿ-

ಯಾದವುಗಳು. ಅವರ ಈ ಚಿಂತನೆಗಳು ಯುವ ಸಮುದಾಯಕ್ಕೆ ಯುವಪಡೆಗೆ ಮಾರ್ಗದರ್ಶಿ ಕೈಪಿಡಿಗಳಂತಿದೆ. ಹಾಗಾಗಿ ಈ ಮಾತುಗಳು ಒಬ್ಬ ವ್ಯಕ್ತಿಯ ಬದುಕಿನಲ್ಲಿ ಯೌವನಾವಸ್ಥೆಯಲ್ಲಿ ವ್ಯಕ್ತಿಯು ಅನುಭವಿಸುವ ಸಮಸ್ಯೆಗಳು ಮತ್ತು ಅದಕ್ಕೆ ಪರಿಹಾರೋಪಗಳನ್ನು ತಿಳಿಸುತ್ತಾರೆ.

ಎನ್.ಬೋರಲಿಂಗಯ್ಯ ಅವರು ಸಮಾಜದ ಬಗ್ಗೆ ಕಾಳಜಿಯುಳ್ಳವರಾದುದರಿಂದ ಸಮಾಜವನ್ನು ಕುರಿತಂತೆ, ವ್ಯಕ್ತಿಯ ಬದುಕನ್ನು ಕುರಿತಂತೆ ಪ್ರಬಂಧ ರಚಿಸುವುದರಿಂದ ಒಬ್ಬ ಸಮರ್ಥ ಪ್ರಬಂಧಕಾರರಾಗಿ ನಿಲ್ಲುತ್ತಾರೆ. ಅವರ ಬರವಣಿಗೆಯ ಶೈಲಿ, ಸರಳ ಸ್ಪಷ್ಟವಾಗಿದ್ದು, ಆಕೆ ಆಕರ್ಷಕವಾಗಿದ್ದು, ವೈಜ್ಞಾನಿಕ ಮತ್ತು ಸಾಂಪ್ರದಾಯಿಕ ಮಾದರಿ ಮತ್ತು ರೀತಿಗಳನ್ನು ಬಳಸಿಕೊಂಡಿರುವ ಬೋರಲಿಂಗಯ್ಯ ಮಾದರಿಯ ವಿಶಿಷ್ಟವಾದುದು. ಹೊಸಗನ್ನಡ ಪ್ರಬಂಧ ಬರವಣಿಗೆಯಲ್ಲಿ ಎನ್.ಬೋರಲಿಂಗಯ್ಯ ಅವರು ಗಟ್ಟಿ ಪ್ರಬಂಧಕಾರರಾಗಿ ನಿಲ್ಲುತ್ತಾರೆ ಎಂದು ಹೇಳಬಹುದು.

೩.೫. ವಿಮರ್ಶಾ ಲೇಖನಗಳಲ್ಲಿ ನವೋದಯ ಪ್ರಜ್ಞೆ

ಎನ್.ಬೋರಲಿಂಗಯ್ಯ ಅವರು ಕನ್ನಡ ವಿಮರ್ಶಾ ಲೋಕಕ್ಕೆ ಎರಡು ಉತ್ಕೃಷ್ಟ ಕೃತಿಗಳನ್ನು ನೀಡಿರುವುದು ವಿಶೇಷವಾಗಿ ಕಂಡುಬರುತ್ತದೆ. ಅವರ ವಿಮರ್ಶಾ ಬರವಣಿಗೆಯು ವಿವಿಧ ನೆಲೆಗಳಲ್ಲಿ ನೆಲೆಗೊಂಡಿರುವುದನ್ನು ಕಾಣಬಹುದು. ಅವರ ವಿಮರ್ಶೆಯ ಕೃತಿಗಳು ೧. 'ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು' ೨. 'ವಚನ ಕಟ್ಟಿದ ಅಲ್ಲಮ'ಗಳಾಗಿವೆ. ಈ ವಿಮರ್ಶಾ ಕೃತಿಗಳನ್ನು ರಚಿಸುವುದರ ಮೂಲಕ ಕನ್ನಡ ವಿಮರ್ಶೆಗೊಂಡು ಹೊಸ ಚೌಕಟ್ಟೊಂದನ್ನು ನಿರ್ಮಿಸಿದ್ದಾರೆ. ವಚನ ಸಾಹಿತ್ಯದಲ್ಲಿ ಮಧ್ಯಕಾಲೀನ ಸಾಹಿತ್ಯದ ಸಂದರ್ಭದಲ್ಲಿ ಅಲ್ಲಮ ಪ್ರಭು ಮಹತ್ವದ ವಚನಕಾರರನಾಗಿ ನಿಲ್ಲುತ್ತಾರೆ. ಅವರ ವಚನದ ಸಾಲುಗಳನ್ನು ತೆಗೆದುಕೊಂಡು ಒರೆಹಚ್ಚಿ ನೋಡುವುದು ಕಂಡುಬರುತ್ತದೆ. ಅಂದರೆ ವಚನಗಳ ಒಳಾರ್ಥವನ್ನು, ತಾತ್ವಿಕತೆಯನ್ನು ಹೊರಗೆಡಹುದು ಬೋರಲಿಂಗಯ್ಯ ಅವರ ನಿಲುವಾಗಿರುತ್ತದೆ. ಮತ್ತೊಂದು ಕೃತಿ 'ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು'. ಈ ಕೃತಿಯಲ್ಲಿ ಹೊಸಗನ್ನಡ ಸಾಹಿತ್ಯದ ವಿಮರ್ಶೆಯ ಸ್ವರೂಪ, ಕಾವ್ಯ, ಕಥೆ, ನಾಟಕ, ಕಾದಂಬರಿ ಮೊದಲಾದಗಳ ವಸ್ತು ನಿಷ್ಠ ವಿಮರ್ಶೆ ಮತ್ತು ಈ ಸಂದರ್ಭದಲ್ಲಿ ಕುವೆಂಪು ಅವರ ಸ್ಥಾನದ ಮಹತ್ವವನ್ನು ಹೊರಗೆಳೆಯುವುದು ಬೋರಲಿಂಗಯ್ಯ ಅವರ ವೈಶಿಷ್ಟ್ಯವಾಗಿರುತ್ತದೆ.

ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು

ಈ ವಿಮರ್ಶೆ ಕೃತಿಯಲ್ಲಿ ೨೪ ಅಧ್ಯಾಯಗಳಿರುವುದನ್ನು ಕಾಣಬಹುದಾಗಿದೆ. ಈ ವಿಮರ್ಶಾ ಕೃತಿಯು ಬರವಣಿಗೆಯು ಎನ್.ಬೋರಲಿಂಗಯ್ಯ ಅವರ ವಿಮರ್ಶಾಶಕ್ತಿಗೆ ಉದಾಹರಣೆಯಾಗಿದೆ. ಈ ಕೃತಿಯ ಬರವಣಿಗೆಯ ಮುಖಾಂತರ ಎನ್.ಬೋರಲಿಂಗಯ್ಯ ಅವರ ವಿಮರ್ಶೆಯ ಒಳನೋಟ ಎಂತಹುದು ಎಂಬುದು ತಿಳಿಯುತ್ತದೆ. ಇವರ ಬರವಣಿಗೆಯ ಮೇಲೆ ಪ್ರಧಾನವಾಗಿ ಕುವೆಂಪು ಅವರ ಪ್ರಭಾವವಿದೆ. ಕುವೆಂಪು ಅವರ ಬರವಣಿಗೆಯನ್ನು ಆಳವಾಗಿ ಅಧ್ಯಯನ ಮಾಡಿದ ಅನುಭವ ಇವರ ಬರವಣಿಗೆಯಿಂದ ತಿಳಿಯುವುದರೊಂದಿಗೆ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಕುವೆಂಪು ಅವರ ಸ್ಥಾನವನ್ನು ಗುರುತಿಸುವುದು ಕಂಡುಬರುತ್ತದೆ.ಸ

ಈ ಕೃತಿಯಲ್ಲಿ ೨೪ ಅಧ್ಯಾಯಗಳಿದ್ದು ಒಂದೊಂದು ಅಧ್ಯಾಯವು ವೈಶಿಷ್ಟ್ಯಪೂರ್ಣವಾದ ಒಳಹುಗಳಿಂದ ಕೂಡಿದೆ. ಈ ಕೃತಿಯಲ್ಲಿ ಕಂಡುಬರುವ ವಿಮರ್ಶಾ ಲೇಖನಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಈ ಕೆಳಕಂಡಂತೆ ವಿಭಾಗಿಸಿಕೊಳ್ಳಲಾಗಿದೆ.

ಅ. ಸಾಹಿತ್ಯ ವಿಮರ್ಶೆ ಸಾಧ್ಯತೆಗಳು

ಎ. ಸಾಹಿತ್ಯ ಮತ್ತು ಸಮಕಾಲೀನತೆ

ಬಿ. ಹೊಸಗನ್ನಡ ಸಾಹಿತ್ಯ ವಿಮರ್ಶೆಗೊಂದು ಪೂರ್ವಪೀಠಿಕೆ

ಸಿ. ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ವಿಮರ್ಶೆ.

ಡಿ. ನಾಳಿನ ಕನ್ನಡ ಸಾಹಿತ್ಯ ವಿಮರ್ಶೆಯ ಸ್ವರೂಪ.

ಇ. ಬೇಂದ್ರೆ ಅವರ ಸಾಹಿತ್ಯ ವಿಮರ್ಶೆ

ಆ. ಮೈಸೂರು ನಗರ ಸಾಹಿತ್ಯ

ಇ. ಕಾವ್ಯ ವಿಮರ್ಶೆ

ಎ. ಬೇಂದ್ರೆ ಅವರ ಜೋಗಿ

ಬಿ. ಬೇಂದ್ರೆ ಅವರ 'ನೃತ್ಯ ಯಜ್ಞ'

ಸಿ. ದ.ರಾ.ಬೇಂದ್ರೆ, ಶ್ರೀಮಾತಾ

ಡಿ. ಚಂದ್ರಕಾಂತ ಕುಸುನೂರರ – ನಂದಿಕೋಲು

ಇ. ಕಿರಣ ಅವರ ಒಳದನಿ

ಎಫ್. ಎಂ ಲೋಕೇಶ – ಬರುತ್ತಾನೆ ಸೂರ್ಯ.

ಜಿ. ಪ್ರಹ್ಲಾದ್ ಬೆಟಗೇರಿ – ಗುಲಾಬಿ

ಹೆಚ್. ಪ್ರಭುದೇವರ ಹಾದಿಮನಿ – ಹೆಸರಿದಲ್ಲದವರ ಹಾಡು

ಐ. ಜಿ.ಎಸ್.ಉಬರಡ್ಕ – ಅರಣ್ಯಕಾಂಡೆ

ಜೆ. ಚೆನ್ನವೀರ ಕಣವಿ ಅವರ ಹೊಂಬೆಳಕು

ಕೆ. ಎಸ್.ವಿ.ಪರಮೇಶ್ವರ ಭಟ್ಟರ – ಉಪ್ಪು ಕಡಲು

ಎ. ಸಣ್ಣ ಕಥೆಗಳ ವಿಮರ್ಶೆ

ಸುಧಾಕರ್ ಅವರ ೧೦ ಕಥೆಗಳನ್ನು ವಿಮರ್ಶಿಸಲಾಗಿದೆ. 'ಕಣಿ ಕಿತ್ತ ಹಸು', 'ಸಾಕಿದನಾಯಿ' ಮತ್ತು 'ನಕ್ಷತ್ರ ನಕ್ಕವು' ಕೋಡಿ ಬಿತ್ತು ಕೋಡಿ, ಮೆರವಣಿಗೆ ಹೊರಲಾರದ ಹೊರೆ' 'ಕಣ್ಣು ಮತ್ತು ಸೆಳೆತ' ಉನ್ಮಾದ ಮತ್ತು ಸಮಾನಾಂತರ ರೇಖೆಗಳುಗಳ ವಿಮರ್ಶೆಯ ಸೊಗಡು ಕಂಡುಬರುತ್ತದೆ.

ಉ. ಕಾದಂಬರಿಗಳ ವಿಮರ್ಶೆ

ಎ. ಕುಸುಮಾಕರ ದೇವಗೇಣ್ಣೂರ ಅವರ 'ನಾಲ್ಕನೆ ಆಯಾಮ'

ಬಿ. ಮಾಸ್ತಿ ಅವರ 'ಚಿಕ್ಕವೀರ ರಾಜೇಂದ್ರ'

ಸಿ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು'

ಊ. ನಾಟಕ ವಿಮರ್ಶೆ

ಎ. ವಿ.ಸುಬ್ಬಣ್ಣ ಅವರ – 'ಲೋಕ ಶಾಕುಂತಲೆ'

ಬಿ. ಡಾ. ಚಂದ್ರಶೇಖರ ಕಂಬಾರ – ಹುಲಿಯ ನೆರಳು.

ಋ. ವ್ಯಕ್ತಿ ಜೀವನ ಚರಿತ್ರೆ ಮತ್ತು ಅನುವಾದಗಳು.

ವ್ಯಕ್ತಿ ಚರಿತೆ – ಅ. ಸುಭಾಷ್ ಚಂದ್ರ ಬೋಸ್

ಆ. ಬಸವಣ್ಣನವರು

ಇ. ಎತ್ತರದ ವ್ಯಕ್ತಿಗಳು – ಎಚ್ಚೆಸ್ಕೆ

ಅನುವಾದ ಅ. ಕೆ. ವೀರಬದ್ರಪ್ಪ

ೠ. ಕುವೆಂಪು ಸಾಹಿತ್ಯ ವಿಮರ್ಶೆ.

ಅ. ಮಹಾಕಾವ್ಯ – ರಾಮಾಯಣ ದರ್ಶನಂ

ಆ. ಆತ್ಮಕಥೆ – ನೆನಪಿನ ದೋಣಿಯಲ್ಲಿ

ಇ. ಕಾವ್ಯ – ಕಾವ್ಯ ಕಲ್ಪನೆ ಮತ್ತು ಗಣೇಶಗಾಥಾ

ಈ. ಕಾದಂಬರಿ – ಮಲೆಗಳಲಿ ಮದುಮಗಳು

ಎ. ವಿಮರ್ಶೆ – ೧. ಕುವೆಂಪು ಸಾಹಿತ್ಯ ಮತ್ತು ನವ್ಯ ಸಾಹಿತ್ಯ.

೨. ಕುವೆಂಪು ನಾಟಕಗಳಲ್ಲಿ ವೈಚಾರಿಕತೆಯ ಸ್ವರೂಪ.

೩. ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ ಮತ್ತು ವೈಜ್ಞಾನಿಕತೆ

ಏ. **ಪ್ರಬಂಧ ವಿಮರ್ಶೆ**

೧. ಯು.ಆರ್.ಅನಂತಮೂರ್ತಿ ಅವರ 'ಪ್ರಜ್ಞೆ ಮತ್ತು ಪರಿಸರ' ಒಂದು ಪ್ರತಿಕ್ರಿಯೆ.

೨. ಎಂ.ಜಿ.ಕೃಷ್ಣಮೂರ್ತಿ ಅವರ ಆಧುನಿಕ ಭಾರತೀಯ ಸಾಹಿತ್ಯ – ಒಂದು ಪ್ರತಿಕ್ರಿಯೆ

೩. ಹಳಗನ್ನಡದಲ್ಲಿ ನಾಟಕದ ಸಮಸ್ಯೆ.

ಐ. ಸಂದರ್ಶನ ಮತ್ತು ಪತ್ರಗಳು – ಕುವೆಂಪು ಅವರ 'ಸಂದರ್ಶನ' ಮತ್ತು 'ಪತ್ರಬರವಣಿಗೆ'.

ಹೀಗೆ ಎನ್.ಬೋರಲಿಂಗಯ್ಯ ಅವರ ವಿಮರ್ಶೆಯ ನೆಲೆಗಟ್ಟು, ವಿಮರ್ಶೆಯಲ್ಲಿನ ವಸ್ತುನಿಷ್ಠತೆಯನ್ನು ಕಾಣಬಹುದಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳನ್ನು ತಮ್ಮ ವಿಮರ್ಶೆಗೆ ಒಳಪಡಿಸಿರುವ ಇವರು ಹೊಸಗನ್ನಡದ ಸಾಹಿತ್ಯ ವಿಮರ್ಶೆಯಲ್ಲಿ ಗಟ್ಟಿ ವಿಮರ್ಶಾಕರಾಗಿ ನಿಲ್ಲುತ್ತಾರೆ.

ಹೊಸಗನ್ನಡ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದಂತೆ ಎನ್.ಬೋರಲಿಂಗಯ್ಯ ಅವರ ವಿಮರ್ಶಾ ಬರವಣಿಗೆಯು ವಸ್ತುನಿಷ್ಟವಾಗಿದ್ದು ಸಮಾಜವಾದಿ ಮತ್ತು ಮಾನವತಾವಾದದ ನೆಲೆಯಲ್ಲಿ ಕಾಣಿಸಿಕೊಂಡಿದೆ. ಒಬ್ಬ ವಿಮರ್ಶಕನಾದವನಿಗೆ ಒಂದು ಕೃತಿಯನ್ನು ಎಲ್ಲ ನೆಲೆಗಳಲ್ಲಿ ನೋಡುವ ಗುಣವಿರಬೇಕು. ಆ ಕೃತಿಯ ಗುಣ ದೋಷಗಳೆರಡನ್ನು ಸಮವಾಗಿ ತೂಗುವ ಮನಸ್ಥಿತಿ ವಿಮರ್ಶಕನಿಗಿರಬೇಕು. ಇಲ್ಲವಾದಲ್ಲಿ ಆ ಕೃತಿ ಮೌಲ್ಯ ಕಳೆದುಕೊಂಡಂತೆಯೇ ಸರಿ. ಒಂದು ಕೃತಿಯ ವಿಮರ್ಶೆಯಿಂದ ವಿಮರ್ಶಕ ಮತ್ತು ಕವಿ ಇಬ್ಬರು ಮುಖ್ಯರಾಗುತ್ತಾರೆ. ಅಂದರೆ, ಒಂದು ಸಾಹಿತ್ಯ ಕೃತಿಯ ಬರವಣಿಗೆಯು ಬದುಕಿನ ಎಲ್ಲ ಅನುಭವಗಳ ಸಾರದ ಪ್ರತಿಬಿಂಬವಾಗಿರುತ್ತದೆ. ವಿಮರ್ಶಕನಾದವನು ಬರಹಗಾರರ, ಕವಿಗಳ, ಸಾಹಿತಿಗಳ ನೆಲೆಗಳ ಹುಡುಕಾಟದ ಅವಶ್ಯಕತೆಯನ್ನು ಗುರುತಿಸಬೇಕಾದುದು ಅಗತ್ಯವಾಗಿದೆ. ಇಲ್ಲಿ ಕೃತಿ, ಕೃತಿಕಾರ ಮತ್ತು ವಿಮರ್ಶಕ ಮುಖ್ಯರಾಗಿ ನಿಲ್ಲುತ್ತಾರೆ.

ಕಾಲ ಬದಲಾದಂತೆ ಸಾಹಿತ್ಯದಲ್ಲಿಯೂ ಅನೇಕ ಬದಲಾವಣೆಗಳು ಕಾಣಿಸಿಕೊಳ್ಳ-ತೊಡಗಿದವು. ಕನ್ನಡ ಸಾಹಿತ್ಯದಲ್ಲಿಯೂ ಕೂಡ ಪಾಶ್ಚಾತ್ಯರ ಪ್ರೇರಣೆಗೊಳಗಾದ ಪ್ರಭಾವ 'ಆಧುನಿಕ ಕನ್ನಡ ಕವಿಗಳು' ಪಾಶ್ಚಾತ್ಯರ ವಿಮರ್ಶೆಯ ಮಾನದಂಡಗಳನ್ನು ಅನುಸರಿಸಿ ಕನ್ನಡ ವಿಮರ್ಶಕರು ವಿಮರ್ಶೆ ಮಾಡತೊಡಗಿದರು. ಕನ್ನಡ ವಿಮರ್ಶಕರು ಪ್ರಾರಂಭದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯವನ್ನು ದೇಶೀಯ ನೆಲೆಯಲ್ಲಿಯೇ ನೋಡುವ ಪ್ರಯತ್ನ ಮಾಡಿದರು. ಅಂದರೆ ಕನ್ನಡ ವಿಮರ್ಶೆಯನ್ನು ಪ್ರಾಚೀನ ಕನ್ನಡ ಸಾಹಿತ್ಯದ ವಿಮರ್ಶೆಯಲ್ಲಿ ಧರ್ಮ, ದೇಶೀಯ ಸಾಹಿತ್ಯ, ರಾಜಾಶ್ರಯ, ಭಾಷಾ ಸಾಹಿತ್ಯದ ಹಿನ್ನೆಲೆಯಲ್ಲಿ ನೋಡುವ ಪರಿಪಾಠ ಕಂಡು ಬಂದಿತು. ತದನಂತರ ಪಾಶ್ಚಾತ್ಯರ ವಿಮರ್ಶಾ ಮಾನದಂಡಗಳನ್ನು ಅನುಸರಿಸಿ ಕನ್ನಡ ವಿಮರ್ಶೆ ಪರಂಪರೆಯನ್ನು ಮುಂದುವರಿಸಿದರು. ಅಂತಹುಗಳಲ್ಲಿ ಪಾಶ್ಚಾತ್ಯರ ವಿವಿಧ ಸಿದ್ಧಾಂತಗಳಾದ ಅಸ್ಥಿತ್ವವಾದ, ಅಸಂಗತವಾದ, ಮನೋವೈಜ್ಞಾನಿಕ ತತ್ವ, ಸಮಾಜವಾದಿ ಶಾಸ್ತ್ರೀಯ ತತ್ವ ಮೊದಲಾದವುಗಳ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ಪರಾಮರ್ಶಿಸುವ ಕಾರ್ಯ ಮುಂದುವರೆಯಿತು. ಅಲ್ಲದೆ ದೇಶೀಯ ನೆಲೆಗಳಲ್ಲಿ ಲೋಹಿಯಾವಾದ, ಅಂಬೇಡ್ಕರ್‌ವಾದ, ಸ್ತ್ರೀವಾದ, ಗಾಂಧೀವಾದ ಕಾರ್ಲ್‌ಮಾರ್ಕ್ಸ್‌ವಾದ ಮೊದಲಾದವುಗಳು ವಿಮರ್ಶೆಯಲ್ಲಿ ಕಂಡುಬಂದವು. ಹೀಗೆ ಈ ಮೇಲಿನ ಒಟ್ಟು ವಿಮರ್ಶೆಯನ್ನು ಆಧರಿಸಿ ಕನ್ನಡ ವಿಮರ್ಶೆಯು ಹಲವಾರು ಘಟ್ಟಗಳನ್ನು ಪಡೆದುಕೊಂಡಿದೆ. ನವೋದಯ ವಿಮರ್ಶೆ, ನವ್ಯ ವಿಮರ್ಶೆ, ದಲಿತ-ಬಂಡಾಯ ವಿಮರ್ಶೆ, ಸ್ತ್ರೀವಾದಿ ವಿಮರ್ಶೆಯಾಗಿ ಕವಲೊಡದಿರುವುದನ್ನು ಕಾಣುತ್ತೇವೆ. ಈ ಪರಿಧಿಯ ಒಳಗೆ ಪ್ರಾಚೀನ ಕನ್ನಡ ಸಾಹಿತ್ಯ ವಿಮರ್ಶೆ ಮಧ್ಯಕಾಲೀನ ಸಾಹಿತ್ಯ, ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯು ಬಂತು ಅದರಲ್ಲಿ ಜಾತಿ, ಲಿಂಗ, ವರ್ಣ, ಸಮಾಜಶಾಸ್ತ್ರೀಯ ವಿಮರ್ಶೆ ಮೊದಲಾದವು ವಿಮರ್ಶೆಯೊಳಗೆ ಹಾಸುಹೊಕ್ಕಾದವು.

ಹೀಗೆ ಎನ್.ಬೋರಲಿಂಗಯ್ಯ ಅವರು ವಿಮರ್ಶೆಯನ್ನು ಕುರಿತಂತೆ ತಮ್ಮ ಅಭಿಪ್ರಾಯಗಳನ್ನು ವಿಮರ್ಶಾ ಲೇಖನಗಳಲ್ಲಿ ಮಂಡಿಸಿದ್ದಾರೆ.

ವಿಮರ್ಶಕ – ವಿಮರ್ಶಕನಾದವನು ಒಂದು ಕೃತಿಯನ್ನು ಒಳಹೊಕ್ಕಿ ನೋಡಬೇಕಾದ ಸೂಕ್ಷ್ಮತೆ ಮತ್ತು ವಿಷಯ ಜ್ಞಾನವಿದ್ದಾಗ ಮಾತ್ರ ಒಂದು ಕೃತಿಯನ್ನು ವಿಮರ್ಶೆಮಾಡಲು ಸಾಧ್ಯವಾಗುತ್ತದೆ. ವಿಮರ್ಶಕನು ಪಾಂಡಿತ್ಯವನ್ನು ಪಡೆದಿರಬೇಕು. ಒಂದು ಕೃತಿಯ ಗುಣ-ದೋಷಗಳನ್ನು ಪರಿಶೀಲನೆ ಮಾಡುವ ಗುಣವಿರಬೇಕು. ಹಾಗಿದ್ದಲ್ಲಿ ಮಾತ್ರ ಕೃತಿಯ ಮೌಲ್ಯ ಹೆಚ್ಚಾಗುತ್ತದೆ. ವಿಮರ್ಶಕನು ಕೃತಿಯನ್ನು ವ್ಯಕ್ತಿ ನಿಷ್ಠವಾಗಿ ನೋಡಬಾರದು. ವಸ್ತುನಿಷ್ಠವಾಗಿ

ನೋಡಬೇಕು. ವಿಮರ್ಶಾ ಮಾನದಂಡಗಳನ್ನು ಅನುಸರಿಸಬೇಕು. ಈ ಎಲ್ಲಾ ನೆಲೆಗಟ್ಟಿನಲ್ಲಿ ಬೋರಲಿಂಗಯ್ಯನವರು ಒಬ್ಬ ಗಟ್ಟಿ ವಿಮರ್ಶಕರಾಗಿ ಕಾಣಿಸಿಕೊಳ್ಳುತ್ತಾರೆ.

ಕೃತಿ ಮತ್ತು ಸಮಕಾಲೀನತೆ

ಒಂದು ಸಾಹಿತ್ಯ ಕೃತಿಯು ವಸ್ತುನಿಷ್ಠವಾಗಿರಬೇಕು. ವ್ಯಕ್ತಿನಿಷ್ಠವಾಗಿರಬಾರದು. ಪ್ರಾಚೀನ ಸಾಹಿತ್ಯ ಪರಧಿಯೊಳಗೆ ಪುರಾಣ, ಇತಿಹಾಸ, ರಾಮಾಯಣ, ಮಹಾಭಾರತದಲ್ಲಿರುವ ವಸ್ತುಗಳನ್ನು ಸನ್ನಿವೇಶ ಪ್ರಸಂಗಗಳನ್ನು ಆಧರಿಸಿ ಸಾಹಿತ್ಯ ರಚನೆಯಾಗುತ್ತಿತ್ತು. ಹಾಗಾಗಿ ಪ್ರಾಚೀನ ಕನ್ನಡ ಸಾಹಿತ್ಯ ಪುರಾಣಾಧಾರಿತವಾದ, ಸಂಸ್ಕೃತ ಭೂಯಿಷ್ಠವಾದ ಶೈಲಿಯಲ್ಲಿ ಸೃಷ್ಟಿಯಾಗುತ್ತಿತ್ತು. ಸಮಕಾಲೀನ ಬದುಕಿನೆಡೆಗೆ ಗಮನ ಕೊಡಲಿಲ್ಲ. ಪ್ರಾಚೀನ ಹಾಗೂ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಜಾತಿ, ಲಿಂಗ ತಾರತಮ್ಯ, ವರ್ಣ ವ್ಯವಸ್ಥೆ, ಅಸ್ಪೃಶ್ಯತೆಯಂತಹ ಸಮಸ್ಯೆಗಳು ಸಾಹಿತ್ಯದ ವಸ್ತುವಾದವು. ಮುಂದುವರೆದಂತೆ ಆಧುನಿಕ ಕನ್ನಡ ಸಾಹಿತ್ಯವು ಸಮಕಾಲೀನ ಬದುಕಿನೆಡೆಗೆ ಆದ್ಯತೆ ನೀಡುತ್ತದೆ. ಒಂದು ಸಾಹಿತ್ಯ ಕೃತಿಯು ಸಮಕಾಲೀನ ಸಂವೇದನೆಗಳ ರೂಪವನ್ನು ಕೇಂದ್ರೀಕರಿಸಿಕೊಂಡು ಸಮಾಜದ ಹಿನ್ನೆಲೆಯಲ್ಲಿ ರಚನೆಯಾಗಿರಬೇಕು. ಆಗ ಮಾತ್ರ ವಿಮರ್ಶಕನು ಒಂದು ಕೃತಿಯನ್ನು ಎಲ್ಲಾ ನೆಲೆಗಟ್ಟಿನಿಂದ ನೋಡಲು ಸಾಧ್ಯವಾಗುತ್ತದೆ. ಹೀಗೆ ಎನ್.ಬೋರಲಿಂಗಯ್ಯನವರು ತಮ್ಮ ವಿಮರ್ಶಾ ಕೃತಿ ಎಲ್ಲಾ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಕಾಣಿಸಿಕೊಳ್ಳುತ್ತದೆ.

ಕಾವ್ಯ ವಿಮರ್ಶೆ

ಎನ್.ಬೋರಲಿಂಗಯ್ಯನವರು ನವೋದಯ ಕವಿಗಳ ಮತ್ತು ಹೊಸ ತಲೆಮಾರಿನ ಕವಿಗಳ, ಕಾವ್ಯಗಳನ್ನು ವಿಮರ್ಶೆ ಮಾಡಿರುವುದು ಅವರ 'ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು' ಎಂಬ ವಿಮರ್ಶಾಕೃತಿಯಲ್ಲಿ ಕಂಡುಬರುತ್ತದೆ. ಅವರ ಕಾವ್ಯ ವಿಮರ್ಶೆಯ ಒಳಹುಗಳು ಹೊಸಗನ್ನಡ ಕಾವ್ಯ ಮತ್ತು ವಚನಗಳ ಕುರಿತದ್ದಾಗಿವೆ. ಇವುಗಳನ್ನು ಸಮತಟ್ಟಾಗಿ ಕಾವ್ಯ ಪ್ರಯೋಗದ ಮೂಲಕ ಪ್ರಾಯೋಗಿಕ ವಿಮರ್ಶೆಯನ್ನು ಬರವಣಿಗೆಯ ರೂಪದಲ್ಲಿ ತಂದಿರುವುದು ಕಂಡುಬರುತ್ತದೆ. ಹಾಗಾಗಿ ಎನ್.ಬೋರಲಿಂಗಯ್ಯ ಅವರು ಕಾವ್ಯ ವಿಮರ್ಶಕರಾಗಿ ನಿಲ್ಲುತ್ತಾರೆ.

ದ.ರಾ.ಬೇಂದ್ರೆ ಅವರ 'ಜೋಗಿ' – ಇದು ಯೋಗಿಯ ತದ್ಭವವಾಗಿದೆ. ಬೇಂದ್ರೆ ಅವರ ಆಧುನಿಕ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ಜೋಗಿ ಯೋಗಿಗಿಂತ ಹೆಚ್ಚು ಸಾಮಾನ್ಯ ಮನಸ್ಸಿಗೆ ಹತ್ತಿರದ ಪ್ರತಿಮೆಯಾಗಿ ಕಾಣುತ್ತಾನೆ. ಈ ಅನುಭಾವಿಕ ವೈಚಾರಿಕತೆ ಈ

ಕವನದಲ್ಲಿ ಕಾಣಿಸಿಕೊಳ್ಳುತ್ತದೆ. ಬೇಂದ್ರೆ ಇಲ್ಲಿ ಭಾರತೀಯ ತತ್ವ ವಿಕಾಸಗೊಂಡ ಮೂರು ಮಜಲುಗಳನ್ನು ಮುಖ್ಯವಾಗಿ ಸೂಚಿಸುತ್ತಿದ್ದಾರೆ. ಧ್ವನಿಪೂರ್ಣ ಪ್ರತಿಮೆಗಳ ಮೂಲಕ ದೇಹ ಸುಖದ ಮೂಲಗಳಾದ ಇಂದ್ರಿಯಗಳನ್ನು ಅವುಗಳ ಆಹಾರ ಬಿಡುಗಡೆ ಮಾಡಿ ದೈವದ ಆಹಾರವಾದ ನಿರಂತರ ಧ್ಯಾನದ ಕಡೆಗೆ ಗಮನಹರಿಸುವುದು. ಅಂತಿಮಜ್ಞಾನವೇ ಅದರ ಗುರಿ.

ಮೂರು ಕಾವ್ಯ ಸಂಕಲನಗಳು:

ಶ್ರೀಮತಾ – ದ.ರಾ.ಬೇಂದ್ರೆ

ನಂದಿಕೋಲು – ಚಂದ್ರಕಾಂತ ಕುಸನೂರು

ಒಳದನಿ – ಕಿರಣ

ಸಾಹಿತ್ಯ ನಿರ್ಮಿತಿಯು ಒಂದು ವಿಶಿಷ್ಟ ಮನೋಧರ್ಮ ಅನಿಸಿಕೆಗಳನ್ನು ಅವುಗಳ ಎಲ್ಲ ಸಂಕೀರ್ಣಗಳ ಭಾವಸತ್ಯಗಳೊಡನೆ ಸಂಕಲನದಲ್ಲಿ ಪ್ರಕೃತಿ ತತ್ವವನ್ನು ನಿರೂಪಿಸಲಾಗಿದೆ. ನೈತಿಕ ಶ್ರದ್ಧೆ, ವೈಚಾರಿಕ ಪರಿಣಿತಿ ಮೊದಲಾದವುಗಳನ್ನು ಹೇಳಲಾಗಿದೆ. ಅಲ್ಲದೆ ನೈತಿಕತೆಯನ್ನು ಬೋಧಿಸುವ ಮುಖಾಂತರ ಸಮಾಜ ಸುಧಾರಕನಾಗಿ ಕಾಣಿಸಿಕೊಳ್ಳುತ್ತಾನೆ ಕವಿ. ಹಾಗಾಗಿ ಬೇಂದ್ರೆ ಅವರು ಹೊಸ ಕಾವ್ಯ ನಿರ್ಮಿತಿಯನ್ನು ಕುರಿತಂತೆ ಬೋರಲಿಂಗಯ್ಯನವರು ಕಾವ್ಯ ವಿಮರ್ಶೆಯಲ್ಲಿ ಹೇಳಿದ್ದಾರೆ.

ಚಂದ್ರಕಾಂತ ಕುಸನೂರ ಅವರ 'ನಂದಿಕೋಲು' ಕಾವ್ಯದಲ್ಲಿ ಭಾರತೀಯ ಸಮಾಜದಲ್ಲಿ ವಿಧವಿಧವಾಗಿ ತಾಂಡವಾಡುತ್ತಿರುವ ಅಸಂಬದ್ಧ ಮತ್ತು ಅನುಚಿತ ಸಮಸ್ಯೆಗಳ ಮುಖವನ್ನು ತಮ್ಮದೇ ಆದ ನೆಲೆಗಟ್ಟನ್ನು ನಿರ್ಮಿಸಿದ್ದಾರೆ. ಲೈಂಗಿಕ ಸಮಸ್ಯೆ ಎಷ್ಟೇ ಪ್ರಮುಖವಾದರೂ ಜೀವನ ವಿಧಾನದ ಒಂದು ಅಂಗ ಮಾತ್ರ, ಅಲ್ಲಿಯ ಸಮಸ್ಯೆಗಳು ಒಂದು ಕಾಲಕ್ಕೆ ಪರಿಮಿತವಾದವುಗಳೂ ಅಲ್ಲ ಅದು ಎಲ್ಲಾ ಕಾಲದ, ಎಲ್ಲಾ ದೇಶದ ಒಂದು ಎಚ್ಚೆತ್ತ ಸಮಸ್ಯೆಯಾಗಿ ಉಳಿದಿರುವುದನ್ನು ಕಾವ್ಯಗಳು ಹೇಳುತ್ತವೆ.

'ಕಿರಣ' ಕಾವ್ಯನಾಮದಿಂದ ಪ್ರಸಿದ್ಧರಾದ ಕುತ್ಯಾಳ ನಾಗಪ್ಪಗೌಡರ 'ಒಳದನಿ' ಒಂದು ಭರವಸೆಯನ್ನು ಮೂಡಿಸುವ ಕವನ ಸಂಗ್ರಹ. ನೆಲದ ಮೇಲೆ ನಿಂತು ಹೊಸ ರೀತಿಯಲ್ಲಿ ರೂಪಿಸಲು ಹವಣಿಸಿರುವುದು ಅವರ ಬೆಳವಣಿಗೆ ಕಳಕಳಿಯನ್ನು ತೋರಿಸುತ್ತದೆ. ಅವರ ಜೀವನಾನುಭವಕ್ಕೊ, ಅನಿಸಿಕೆಗಳಿಗೂ ಮೇಳವಿದ್ದು ವಿಚಾರ ಸರಣಿ ಹೊಂದಿಬರುವುದರಿಂದ ಕಾವ್ಯ ಸಹಜವಾಗಿ ರೂಪ ತಳೆಯುತ್ತದೆ.

ಹೊಸ ತಲೆಮಾರಿನ ಕವಿಗಳ ಕಾವ್ಯಗಳನ್ನು ಎನ್.ಬೋರಲಿಂಗಯ್ಯ ಅವರು ಪ್ರಾಯೋಗಿಕ ವಿಮರ್ಶೆಗೆ ಗುರಿ ಮಾಡಿದ್ದಾರೆ. ಅಂದರೆ ಹೊಸ ತಲೆಮಾರಿನ ಕವಿಗಳ ವೈಶಿಷ್ಟ, ಕಾವ್ಯದ ಆಯಾಮಗಳು ಮೊದಲಾದವುಗಳನ್ನು ಪರಾಮರ್ಶಿಸಿದ್ದಾರೆ.

೧. ಬರುತ್ತಾನೆ ಸೂರ್ಯ – ಎಂ.ಲೋಕೇಶ

೨. ಗುಲಾಬಿ – ಪ್ರಹ್ಲಾದ್ ಬೇಟಗೇರಿ

೩. ಹೆಸರಿಲ್ಲದವರ ಹಾಡು – ಪ್ರಭುದೇವ ಹಾದಿಮನಿ

೪. ಅರಣ್ಯ ಕಾಂಡ – ಜಿ.ಎಸ್‌ಉಬರಡ್ಕ

ಇವು ಕ್ರಾಂತಿಯ ಬಂಡಾಯದ ಕೆಲವು ಸರ್ವೇಸಾಮಾನ್ಯ ಸಂಗತಿಗಳನ್ನು ಹೇಳುತ್ತವೆ. ಸಾಮಾಜಿಕ ಕಳಕಳಿಯನ್ನು ಕಾವ್ಯದ ಮೂಲಕ ಎತ್ತಿ ತೋರಿಸುವುದು ಕಂಡುಬರುತ್ತದೆ. ಇಲ್ಲಿ ವ್ಯಕ್ತಿಯ ಕ್ರಿಯಾಶೀಲತೆಯ ಮುಖಾಂತರ ಕನಸುಗಾರಿಕೆಯನ್ನು ಚಿತ್ರಿಸುವುದು ಕಂಡುಬರುವುದು.

ಚೆನ್ನವೀರ ಕಣವಿಯವರ 'ಹೊಂಬೆಳಕು' – ಇದು ಚೆನ್ನವೀರ ಕಣವಿಯವರ ಅಭಿನಂದನಾ ಗ್ರಂಥವಾಗಿದ್ದು, ಕಣವಿಯವರ ಕಾವ್ಯ ಧೋರಣೆಯಲ್ಲಿ ಇಂದ್ರಿಯಗಮ್ಯ ಅನುಭವಗಳ ಮೂಲಕ ಜೀವನ ಸತ್ಯವನ್ನು ಶೋಧಿಸ ಹೊರಟ ನವ್ಯ ಸಾಹಿತ್ಯ ಮುಖ್ಯವಾಗಿ ಒಂದು ಧೋರಣೆಯೇ ಹೊರತು ಧಾಟಿಯಲ್ಲ ಎಂಬುದನ್ನು ಗುರುತಿಸಿದ್ದಾರೆ. ೧. ನವೋದಯಕಾವ್ಯ ೨. ನವ್ಯಕಾವ್ಯ. ಈ ಎರಡು ಮಾರ್ಗಗಳಲ್ಲಿ ಕಾಣಿಸಿಕೊಳ್ಳುವ ಕಣವಿಯವರು ಇಂದ್ರಿಯಾಗಮ್ಯ ವಾಸ್ತವಾನುಭವಗಳ ಅಭಿವ್ಯಕ್ತಿಯನ್ನು ತರುವುದನ್ನು ಬೋರಲಿಂಗಯ್ಯನವರು ತಮ್ಮ ವಿಮರ್ಶಾ ಲೇಖನದಲ್ಲಿ ಗುರುತಿಸಿದ್ದಾರೆ.

ಗಾಂಧೀಜಿ ಅವರ ಆದರ್ಶಗಳನ್ನು ಆಶಯಗಳನ್ನು ಕಾವ್ಯದ ಮುಖಾಂತರ ತರುವುದು. ಕಣವಿಯವರ ಉದ್ದೇಶವಾಗಿರುತ್ತದೆ.

ಎಸ್.ವಿ.ಪರಮೇಶ್ವರ ಭಟ್ಟ ಅವರ 'ಉಪ್ಪುಕಡಲು' ಇದೊಂದು ಆಧುನಿಕ ವಚನ ಸಂಕಲನ. ಇದು ಎಸ್.ವಿ.ಪರಮೇಶಭಟ್ಟ ಅವರ ಸ್ವಂತ ರಚನೆಯಾಗಿರುತ್ತದೆ. ಆಧುನಿಕ ವಚನ ಸಾಹಿತ್ಯಕ್ಕೆ ಒಂದು ಹೆದ್ದಾರಿಯನ್ನು ನಿರ್ಮಿಸಿದವರು ಇವರು. ಆಧುನಿಕ ವಚನ, ಮಧ್ಯಕಾಲೀನ ವಚನ ಸಾಹಿತ್ಯದ ಮರುರೂಪವೇ ಆದರೂ, ಹೊಸ ತಲೆಮಾರಿನ ಬರಹಗಾರರಲ್ಲಿ ವಿಭಿನ್ನ ದೃಷ್ಟಿಕೋನಗಳನ್ನು ಪಡೆದುಕೊಳ್ಳುತ್ತದೆ. ದೈವ, ಆತ್ಮ, ಪರಮಾತ್ಮ ಮೊದಲಾದವುಗಳನ್ನು ಚಿತ್ರಿಸಲಾಗಿದೆ.

ಕಾದಂಬರಿಗಳ ವಿಮರ್ಶೆ

ಎನ್.ಬೋರಲಿಂಗಯ್ಯ ಅವರು ನವೋದಯ ಮತ್ತು ನವ್ಯ ಸಾಹಿತ್ಯದ ಪ್ರಕಾರಗಳಾದ ಕಾದಂಬರಿಯನ್ನು ತಮ್ಮ ವಿಮರ್ಶೆಯ ಪಯಣಕ್ಕೆ ಆಯ್ದುಕೊಂಡಿರುವುದು ಕಂಡುಬರುತ್ತದೆ. ನವೋದಯ ಮತ್ತು ನವ್ಯ ಪಂಥದಲ್ಲಿ ಕಾಣಬರುವ ವಸ್ತು ವೈವಿಧ್ಯವನ್ನು ಅನುಸರಿಸಿ ಕಾದಂಬರಿ ರಚನೆಯಾಗಿರುವುದು ವಿಶೇಷವಾಗಿದೆ.

ಯಾವುದೇ ಒಂದು ಕಾದಂಬರಿಯನ್ನು ವಿಮರ್ಶೆ ಮಾಡಬೇಕಾದಗ ಅದನ್ನು ವಿಭಿನ್ನ ನೆಲೆಗಟ್ಟಿನಲ್ಲಿ ನೋಡಬೇಕಾಗುತ್ತದೆ.

ಪಾತ್ರಗಳ ದೃಷ್ಟಿಯಲ್ಲಿ ಅಂದರೆ ಕಾದಂಬರಿಯ ರಚನೆಯ ಸಂದರ್ಭದಲ್ಲಿ ಸೃಷ್ಟಿಯಾಗುವ ಪಾತ್ರಗಳು ಕಾದಂಬರಿಕಾರರ ಅನುಭವದ ವ್ಯಾಪ್ತಿಯೊಳಗೆ ಬರುವ ಪಾತ್ರಗಳನ್ನು ಸೃಷ್ಟಿಮಾಡಬೇಕಾಗುವುದು. ಹಾಗಾಗಿ ಮಹಿಳಾ ಪಾತ್ರ ಮತ್ತು ಪುರುಷ ಪಾತ್ರಗಳು ಸಂದರ್ಭಾನುಸಾರಿಯಾಗಿ ಬರುತ್ತದೆ. ಹಾಗಾಗಿ ಬೋರಲಿಂಗಯ್ಯನವರು ಪಾತ್ರಗಳನ್ನು ವಿಭಿನ್ನನೆಲೆಯಲ್ಲಿ ನೋಡುತ್ತಾರೆ.

ವಸ್ತುವಿನ ದೃಷ್ಟಿಯಲ್ಲಿ ವಸ್ತುವನ್ನು ಸಾಮಾಜಿಕವಾಗಿ, ಧಾರ್ಮಿಕವಾಗಿ, ನೈತಿಕವಾಗಿ, ಲೌಕಿಕವಾಗಿ ನೋಡುವ ಮನೋಭಾವವಿರಬೇಕು.

ಕೃತಿಯ ಕಾದಂಬರಿಯ ಎಲ್ಲ ಮಜಲುಗಳನ್ನು ಎಲ್ಲ ನೆಲೆಯಲ್ಲಿ ನೋಡಬೇಕಾಗುತ್ತದೆ. ಸನ್ನಿವೇಶಗಳು ಸಂದರ್ಭಗಳು, ಆಯಾ ಕಾದಂಬರಿಯ ಚೌಕಟ್ಟನ್ನು ವಿಸ್ತಾರಗೊಳಿಸುತ್ತದೆ. ಹಾಗಾಗಿ ಕಾದಂಬರಿಯು ಇದರಿಂದ ಬರವಣಿಗೆಯಲ್ಲಿ ಮುಂದೆ ಸಾಗುತ್ತದೆ.

ನಾಟಕಗಳ ವಿಮರ್ಶೆ

ವಿ.ಸುಬ್ಬಣ್ಣ ಅವರ 'ಲೋಕ ಶಾಕುಂತಲೆ' ಡಾ. ಚಂದ್ರಶೇಖರ ಕಂಬಾರ ಅವರ 'ಹುಲಿಯ ನೆರಳು' ನಾಟಕಗಳು ಅತ್ಯಂತ ಮಹತ್ವವಾದವುಗಳು.

ಶಾಕುಂತಲೆ ನಾಟಕವು ಪೌರಾಣಿಕ, ಇತಿಹಾಸಗಳ ಹಿನ್ನೆಲೆಯಿಂದ ಹೊರ-ಹೊಮ್ಮಿರುವಂತಹುದು. ಹಾಗಾಗಿ ಶಾಕುಂತಲೆಯ ಪಾತ್ರವನ್ನು ಆಧುನಿಕ ಬದುಕಿಗೆ ಸಮೀಕರಿಸುವುದು ಕಂಡುಬರುತ್ತದೆ. ಯಾವುದೇ ಆದರೂ ಪುರಾಣವನ್ನು ಪೌರಾಣಿಕ ಸಂದರ್ಭವನ್ನು, ಸನ್ನಿವೇಶವನ್ನು ಸಮಕಾಲೀನ ವಿನ್ಯಾಸಕ್ಕೆ ಒಳಗುವುದು ಕಂಡುಬರುತ್ತದೆ. ಹಾಗಾಗಿ ನಾಟಕ ವಿಮರ್ಶೆ ಸಮಕಾಲೀನ ಸಮಾಜದ ಸ್ವರೂಪವನ್ನು ಚಿತ್ರಿಸುವುದಾಗಿರುತ್ತದೆ.

ಚಂದ್ರಶೇಖರ ಕಂಬಾರ ಅವರ 'ಹುಲಿಯ ನೆರಳು' ಜಾನಪದೀಯ ನೆಲೆಯಲ್ಲಿ ರಚನೆಯಾದ ನಾಟಕವಾಗಿದೆ. ಇದರಲ್ಲಿ ಸಾಮಾಜಿಕ ಜೀವನ ಮತ್ತು ರಾಜಕೀಯ ವೈಪರೀತ್ಯಗಳನ್ನು ಎತ್ತಿ ಹೇಳುವುದು ಕಂಡುಬರುತ್ತದೆ. ಇಲ್ಲಿ ಕಂಬಾರರ 'ಜಾನಪದ ಸಂಸ್ಕೃತಿ ಪ್ರಜ್ಞೆ'ಯನ್ನು ಎನ್.ಬೋರಲಿಂಗಯ್ಯನವರು ತಮ್ಮ ವಿಮರ್ಶಾ ನೆಲೆಗಟ್ಟಿನಲ್ಲಿ ನಾಟಕಗಳನ್ನು ವಿಮರ್ಶಿಸಿದ್ದಾರೆ.

ವ್ಯಕ್ತಿ ಚರಿತ್ರೆ ಮತ್ತು ಅನುವಾದಗಳು

ಯಾವುದೇ ಜೀವನ ಚರಿತ್ರೆಗಳು ಆ ವ್ಯಕ್ತಿಯ ಬದುಕಿನ ವಿವಿಧ ಘಟ್ಟಗಳನ್ನು ಅನಾವರಣ ಮಾಡುವ ಕೃತಿಗಳಾಗಿರುತ್ತವೆ. ಅವರ ಬಾಲ್ಯ ಯೌವ್ವನಾವಸ್ಥೆ, ಬೆಳೆದುಬಂದ ರೀತಿ ಅವರ ಸಾಧನೆಗಳನ್ನು ಕುರಿತಂತೆ ವಿವರಿಸಲಾಗುತ್ತದೆ. ಎನ್.ಬೋರಲಿಂಗಯ್ಯ ಅವರು ವಿವಿಧ ಲೇಖಕರು ಬರೆದಿರುವ ವ್ಯಕ್ತಿಯ ಜೀವನ ಚರಿತ್ರೆಗಳನ್ನು ಪರಾಮರ್ಶಿಸಿದ್ದಾರೆ.

ಸುಭಾಷ್ ಚಂದ್ರಬೋಸ್, ಬಸವಣ್ಣನವರು ಮತ್ತು ಎಚ್ಚೆಸ್ಕೆ ಅವರ ಜೀವನ ಚರಿತ್ರೆಯನ್ನು ವಿಮರ್ಶಿಸಿದ್ದಾರೆ. ಸುಭಾಷ್‌ಚಂದ್ರಬೋಸ್‌ರವರು ಭಾರತ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ರೀತಿ ಮತ್ತು ಅವರ ಸಾಧನೆಗಳನ್ನು ಕುರಿತಂತೆ ಪರಾಮರ್ಶಿಸಲಾಗಿದೆ. ಮಧ್ಯಕಾಲೀನ ಕನ್ನಡದ ವಚನ ಚಳುವಳಿಯು ಅತ್ಯಂತ ಮಹತ್ವದ ಘಟ್ಟವಾಗಿದ್ದು, ಈ ವಚನ ಚಳುವಳಿಯ ಸಂದರ್ಭದಲ್ಲಿ ಬಸವಣ್ಣ ಅವರ ಸ್ಥಾನ ಮತ್ತು ಅವರ ವಚನಗಳ ಮೌಲ್ಯ, ಮೊದಲಾದವುಗಳನ್ನು ಕುರಿತಂತೆ, ಮಧ್ಯಕಾಲೀನ ಸಮಾಜ ಎದುರಿಸುತ್ತಿದ್ದ ಹಲವಾರು ಸಾಮಾಜಿಕ ಸಮಸ್ಯೆಗಳಾದ ಜಾತಿ, ಅಸ್ಪೃಶ್ಯತೆ, ಲಿಂಗ ತಾರತಮ್ಯ, ಶೋಷಣೆ, ಆರ್ಥಿಕ ಶೋಷಣೆ, ಬಡವ-ಶ್ರೀಮಂತ ಎಂಬ ತಾರತಮ್ಯತೆಗಳ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವುದರೊಂದಿಗೆ ವಚನಗಳನ್ನು ಬರೆದರು. ಈ ವಚನ ಸಾಹಿತ್ಯದಲ್ಲಿ ಬಸವಣ್ಣನವರ ಸ್ಥಾನವೇನು ಎಂಬುದನ್ನು ತಿಳಿಸಿದ್ದಾರೆ.

ಎಚ್ಚೆಸ್ಕೆ ಅವರು ವಿಮರ್ಶಕರು ಮತ್ತು ಅಂಕಣ ಬರಹಗಾರರು. ಅವರ ವ್ಯಕ್ತಿ ಚಿತ್ರಗಳು ಅಥವಾ ಜೀವನ ಚರಿತ್ರೆಗಳು ತಮ್ಮ ಜೀವನದಲ್ಲಿ ಮಾಡಿದ ಸಾಧನೆಗಳ ವಿವರಗಳನ್ನೊಳಗೊಳ್ಳುತ್ತವೆ. ಹೀಗೆ ಅವರ ಬರವಣಿಗೆಯು ಸಾಹಿತ್ಯದಲ್ಲಿ ಅತ್ಯಾಕರ್ಷಕ-ವಾದುದಾಗಿದೆ. ಸಮಕಾಲೀನ ವಸ್ತುಗಳನ್ನು ಆಧರಿಸಿ. ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುವುದು ಮತ್ತು ಗ್ರಂಥ ಬರವಣಿಗೆಯು ಕಂಡುಬರುತ್ತದೆ. ಅಂಕಣಬರಹದ ಬರಹಗಾರರಲ್ಲಿ ಇವರು ಉತ್ತಮ ಬರಹಗಾರರಾಗಿ ಗುರುತಿಸಿಕೊಂಡಿದ್ದಾರೆ.

ಪ್ರಬಂಧ ವಿಮರ್ಶೆ

ಎನ್.ಬೋರಲಿಂಗಯ್ಯ ಅವರು ಪ್ರಬಂಧ ಸಾಹಿತ್ಯವನ್ನು ತಮ್ಮ ವಿಮರ್ಶಾ ನೆಲೆಯನ್ನು ಕಡೆದಿದ್ದಾರೆ. ಅಂದರೆ ಪ್ರಬಂಧಗಳು ಸಮಕಾಲೀನತೆಯನ್ನು ಹೇಗೆ ಪ್ರತಿಬಿಂಬಿಸುತ್ತವೆ ಎಂಬುದನ್ನು ತಿಳಿಸಿದ್ದಾರೆ. ಯು.ಆರ್.ಅನಂತಮೂರ್ತಿ ಅವರ 'ಪ್ರಜ್ಞೆ ಮತ್ತು ಪರಿಸರ ಒಂದು ಪ್ರತಿಕ್ರಿಯೆ' – ಇದು ಅನಂತಮೂರ್ತಿ ಅವರ ಒಂದು ಪ್ರಬಂಧವಾಗಿದ್ದು ಪರಿಸರದ ಬಗ್ಗೆ ತಮಗಿರುವ ಕಾಳಜಿ ಮತ್ತು ಪರಿಸರವನ್ನು ಕಾಪಾಡಬೇಕಾದ ಸೂಕ್ತ ಮಾರ್ಗೋಪಾಯಗಳು, ಒಟ್ಟು ಮಾನವ ಸಮುದಾಯ ಹೇಗೆ ಪರಿಸರ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಸನ್ನದ್ದವಾಗಬೇಕು ಎಂಬುದನ್ನು ತಿಳಿಸಿದ್ದಾರೆ. ಹೀಗೆ ಎನ್.ಬೋರಲಿಂಗಯ್ಯ ಅವರ ಪರಿಸರ ಕಾಳಜಿ ಇದರಿಂದ ತಿಳಿಯುತ್ತದೆ.

ಎಂ.ಜಿ.ಕೃಷ್ಣಮೂರ್ತಿ ಅವರ "ಆಧುನಿಕ ಭಾರತೀಯ ಸಾಹಿತ್ಯ ಒಂದು ಪ್ರತಿಕ್ರಿಯೆ". ಈ ಪ್ರಬಂಧದಲ್ಲಿ ಆಧುನಿಕ ಭಾರತೀಯ ಸಾಹಿತ್ಯದ ಹರವನ್ನು ಕುರಿತಂತೆ ನೋಡಲಾಗಿದೆ. ಭಾರತದೇಶವು ಹಲವು, ವಿವಿಧ ಭಾಷೆಗಳ ತವರಾಗಿದ್ದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಹೊಂದಿವೆ. ಆದುದರಿಂದ ಆಧುನಿಕ ಭಾರತೀಯ ಸಾಹಿತ್ಯವು ವಿವಿಧ ನೆಲೆಗಳಲ್ಲಿ ಒಡಮೂಡಿ ವಿಶ್ವದ ಮಟ್ಟದಲ್ಲಿ ಹೇಗೆ ತನ್ನ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಳ್ಳುತ್ತಿದೆ ಎಂಬುದನ್ನು ಈ ಪ್ರಬಂಧ ತಿಳಿಸುತ್ತದೆ. ಹೀಗೆ ಎನ್.ಬೋರಲಿಂಗಯ್ಯ ಅವರು ಆಧುನಿಕ ಭಾರತೀಯ ಸಾಹಿತ್ಯವನ್ನು ಕುರಿತಂತೆ ಪರಾಮರ್ಶಿಸಿದ್ದಾರೆ.

'ಹಳಗನ್ನಡದಲ್ಲಿ ನಾಟಕದ ಸಮಸ್ಯೆ' ಈ ಪ್ರಬಂಧದಲ್ಲಿ ಎನ್.ಬೋರಲಿಂಗಯ್ಯ ಅವರಿಗೆ ಹಳಗನ್ನಡ ಕಾವ್ಯದಲ್ಲಿ ಕಂಡುಬರುವ ಪೌರಾಣಿಕತೆ, ಈ ಸಂದರ್ಭದಲ್ಲಿ ಹಳಗನ್ನಡ ಕಾವ್ಯಗಳನ್ನು ನಾಟಕದ ರೀತಿಯಲ್ಲಿ ನೋಡಲು ಎದುರಾಗುವ ಸಮಸ್ಯೆಗಳನ್ನು ವಿಶ್ಲೇಷಿಸಿದ್ದಾರೆ. ಕಾವ್ಯದಲ್ಲಿ ಕಂಡುಬರುವ ವಸ್ತು, ಪಾತ್ರ, ರೀತಿ, ಸನ್ನಿವೇಶ ಮೊದಲಾದವುಗಳನ್ನು ಕುರಿತಂತೆ, ನಾಟಕೀಯ ನೆಲೆಯಲ್ಲಿ ನೋಡಬೇಕಾದಾಗ ಎದುರಾಗುವ ಸವಾಲುಗಳು ಮತ್ತು ಸಮಸ್ಯೆಗಳನ್ನು ಕುರಿತಂತೆ ವಿಶ್ಲೇಷಣೆ ಮಾಡುವುದರೊಂದಿಗೆ ಹಳಗನ್ನಡ ಕಾವ್ಯದ ವಿವಿಧ ನೆಲೆಗಳನ್ನು ನಾಟಕಕ್ಕೆ ಸಮೀಕರಿಸುತ್ತಾರೆ.

ಕುವೆಂಪು ಅವರ ಸಾಹಿತ್ಯ ವಿಮರ್ಶೆ

ನವೋದಯ ಸಾಹಿತ್ಯದಲ್ಲಿ ಕುವೆಂಪು ಅವರ ಕೊಡುಗೆ ಮಹತ್ವವಾದುದು. ಅವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ತಮ್ಮದೇ ಆದ ಕೊಡುಗೆಗಳನ್ನು ನೀಡುವುದರ ಮೂಲಕ

ವಿಶಿಷ್ಟವಾಗಿ ನಿಲ್ಲುತ್ತಾರೆ. ಅಂದರೆ ಮಹಾಕಾವ್ಯ ಆತ್ಮಕಥೆ, ಕಾವ್ಯ, ಕಾದಂಬರಿ, ವಿಮರ್ಶೆ ಹೀಗೆ ಎಲ್ಲ ಪ್ರಕಾರಗಳನ್ನು ಸಹೃದಯ ಲೋಕಕ್ಕೆ ನೀಡಿದವರು ಕುವೆಂಪು.

ಕುವೆಂಪು ಅವರು ಮೂಲತಃ ಮಲೆನಾಡಿನವರು. ಮಲೆನಾಡು ಪ್ರದೇಶದ ಅನುಭವಗಳು ಸಾಹಿತ್ಯ ರಚಿಸುವಂತೆ ಪ್ರೇರಣೆ ನೀಡುತ್ತದೆ. ಅವರ ಸಾಹಿತ್ಯವು ಪ್ರಧಾನವಾಗಿ ಗ್ರಾಮೀಣ ಸಂಸ್ಕೃತಿ ಮತ್ತು ಅದರಲ್ಲಿರುವ ಆಚಾರ, ವಿಚಾರ, ಸಂಪ್ರದಾಯ, ರೀತಿ ನೀತಿಗಳು ಮೊದಲಾದವುಗಳನ್ನು ಸಾಹಿತ್ಯದಲ್ಲಿ ತಂದರು. ಅಲ್ಲದೆ ರಾಮಾಯಣವನ್ನು ಆಧರಿಸಿ ಬರೆದ ಶ್ರೀರಾಮಾಯಣ ದರ್ಶನಂ ಮಹಾಕಾವ್ಯವನ್ನು ರಚಿಸಿದರು. ಈ ಕಾವ್ಯವನ್ನು ಹೊಸ ವಸ್ತು ವಿಷಯ ಹೇಳುವುದರೊಂದಿಗೆ ಅಲ್ಲಿನ ಪಾತ್ರಗಳಿಗೆ ಸಮಕಾಲೀನ ಬದುಕನ್ನು ಕಟ್ಟಿಕೊಡುವುದು ಕಂಡುಬರುತ್ತದೆ. ಹೀಗೆ ಪುರಾಣವನ್ನು ಸಮಕಾಲೀನ ಬದುಕಿನ ಚಿತ್ರಣದೊಂದಿಗೆ ನೋಡುವುದು ಕಂಡುಬರುತ್ತದೆ. ಈ ನೆಲೆಯಲ್ಲಿ ಎನ್.ಬೋರಲಿಂಗಯ್ಯ ಅವರು ಪುರಾಣವನ್ನು ಒಮ್ಮೆ ತಿರುಗಿನೋಡುವ ಸ್ವಭಾವದವರು.

ಕುವೆಂಪು ಅವರ ಕಾವ್ಯಕಲ್ಪನೆ ಕುರಿತಂತೆ ಎನ್.ಬೋರಲಿಂಗಯ್ಯರವರು ತಮ್ಮದೇ ಆದ ಅಭಿಪ್ರಾಯಗಳಲ್ಲಿ ವ್ಯಕ್ತಪಡಿಸಿದ್ದಾರೆ. ಇವರ ದೃಷ್ಟಿಯಲ್ಲಿ ಕಾವ್ಯ ಪ್ರಧಾನವಾಗಿ ಸಮಾಜ ಮುಖಿಯಾಗಿರಬೇಕು. ಸಮಾಜದಲ್ಲಿರುವ ಸಮಸ್ಯೆಗಳನ್ನು ಕಾವ್ಯದ ವಸ್ತುಗಳನ್ನಾಗಿ ಸ್ವೀಕರಿಸಿರಬೇಕು. ಹಾಗಾದಾಗ ಮಾತ್ರ ಕಾವ್ಯ ಒಂದು ಮೌಲ್ಯವನ್ನು ಪಡೆದುಕೊಳ್ಳುತ್ತದೆ ಎಂದಿದ್ದಾರೆ.

ಅವರ 'ನೆನಪಿನ ದೋಣಿ' ಆತ್ಮಕಥೆಯಲ್ಲಿ ಗ್ರಾಮೀಣ ಪರಿಸರ ಸಂಸ್ಕೃತಿ, ವಿವಿಧ ಆಯಾಮಗಳೊಂದಿಗೆ ತಮ್ಮ ಜೀವನದ ಮಾದರಿ ಮತ್ತು ತಮ್ಮ ಜೀವನದಲ್ಲಿ ಎದುರಾದ ಸಮಸ್ಯೆಗಳ ಅನಾವರಣ ಮತ್ತು ಸಾಧನೆಗಳು ಸಿದ್ಧಿಯನ್ನು ಕುರಿತಂತೆ ವಿವರಿಸಿದ್ದಾರೆ.

'ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು' ಎಂಬ ವಿಮರ್ಶಾ ಲೇಖನದಲ್ಲಿ ಎನ್.ಬೋರಲಿಂಗಯ್ಯನವರು ಕುವೆಂಪು ಅವರ ವಿಮರ್ಶೆಯ ಬರವಣಿಗೆಯನ್ನು ವಿಮರ್ಶಿಸಿದ್ದಾರೆ. ಕುವೆಂಪು ಅವರ ನವೋದಯ ಸಾಹಿತ್ಯದ ಸಂದರ್ಭದಲ್ಲಿ ನವ್ಯ ಸಾಹಿತ್ಯದ ಕೇಂದ್ರಿಕೃತ ಶೈಲಿಯನ್ನು ವಿಶ್ಲೇಷಿಸಿದ್ದಾರೆ. ಮತ್ತು ನಾಟಕದಲ್ಲಿ ಕಂಡುಬರುವ ವಾಸ್ತವಿಕತೆಯ ಒಳನೋಟವನ್ನು ಮತ್ತು ವೈಜ್ಞಾನಿಕತೆಯನ್ನು ವಿಶ್ಲೇಷಿಸಿದ್ದಾರೆ.

ಹೀಗೆ ಎನ್.ಬೋರಲಿಂಗಯ್ಯ ಅವರು ವಿಮರ್ಶೆ ಕ್ಷೇತ್ರದಲ್ಲಿ ತಮ್ಮದೇ ಆದ ಮಾನದಂಡಗಳನ್ನು ಅನುಸರಿಸುತ್ತಾ ವಿಮರ್ಶೆಯನ್ನು ಮತ್ತಷ್ಟು ಗಟ್ಟಿಗೊಳಿಸುವಲ್ಲಿ ಕ್ರಿಯಾಶೀಲರಾಗಿರುವುದನ್ನು ಕಾಣಬಹುದು.

ಅಧ್ಯಾಯ – ೪

ಕೃತಿಗಳಲ್ಲಿ ಪ್ರತಿಪಾದಿಸುವ ತಾತ್ವಿಕತೆ

ಭಾರತ ದೇಶವು ಹಳ್ಳಿಗಳಿಂದ ಕೂಡಿದ ಕೃಷಿ ಪ್ರಧಾನವಾದ ರಾಷ್ಟ್ರವಾಗಿದೆ. ಶೇಕಡ ೫೫% ರಷ್ಟು ಜನರು ಕೃಷಿಯನ್ನೆ ಅವಲಂಬಿಸಿದ್ದಾರೆ. ಆಯಯಾ ಭೌಗೋಳಿಕ ಪ್ರದೇಶಕ್ಕನುಗುಣವಾಗಿ ಆಹಾರ ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯುವುದು ಕಂಡುಬರುತ್ತದೆ. ಮಹಾತ್ಮಗಾಂಧೀಜಿ ಅವರು ಹೇಳುವಂತೆ ಹಳ್ಳಿಗಳು ಉದ್ಧಾರವಾದಾಗ ಮಾತ್ರ ದೇಶದ ಉದ್ಧಾರ ಸಾಧ್ಯ. ಹೀಗೆ ಹಳ್ಳಿಗಳಿಗೆ ಎಲ್ಲಾ ರೀತಿಯ ಮೂಲ ಸೌಕರ್ಯಗಳಗಳನ್ನು ನೀಡಿದಾಗ ಕೃಷಿಯ ಪ್ರಗತಿಯೊಂದಿಗೆ, ದೇಶದ ಉತ್ಪಾದನೆಯೂ ಹೆಚ್ಚಾಗುತ್ತದೆ. ಪ್ರಸ್ತುತ ಆಧುನಿಕತೆಯ ಪ್ರವೇಶದ ಪರಿಣಾಮ ಕೃಷಿಯಲ್ಲಿನ ಅವಲಂಭನೆ ಕಡಿಮೆಯಾಗುತ್ತಿರುವುದನ್ನು ಕಾಣಬಹುದು.

ವ್ಯವಸಾಯ ಪ್ರಧಾನವಾದ ಭಾರತ ದೇಶದಲ್ಲಿ ಹಲವು ಗಣರಾಜ್ಯಗಳ ಒಕ್ಕೂಟ ವ್ಯವಸ್ಥೆಯನ್ನು ಒಳಗೊಂಡಿದ್ದು, ಪ್ರಮುಖ ಆಹಾರದ ಬೆಳೆಗಳಾಗಿ ಭತ್ತ, ರಾಗಿ, ಗೋಧಿ, ಜೋಳ, ನವಣೆ, ಸಜ್ಜೆ, ಮೊದಲಾದವುಗಳನ್ನು ಬೆಳೆಯುವುದರ ಮೂಲಕ ದೇಶದಲ್ಲಿರುವ ಆಹಾರದ ಸಮಸ್ಯೆಯನ್ನು ನಿವಾರಿಸಿಕೊಂಡು ಕೃಷಿಯಲ್ಲಿ ಪ್ರಗತಿ ಸಾಧಿಸಬಹುದಾಗಿದೆ. ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳ ಪರ್ಯೆಕೆ ಮತ್ತು ಅವುಗಳ ಬಳಕೆಯ ಅವಶ್ಯಕತೆಯನ್ನು ಎನ್.ಬೋರಲಿಂಗಯ್ಯ ಅವರು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದ್ದಾರೆ.

ದೇಶದಲ್ಲಿ ತಯಾರಿಸಿದ ಉತ್ಪನ್ನಗಳಿಗೆ ಸರ್ಕಾರವು ಬೆಂಬಲ ಬೆಲೆಯನ್ನು ನೀಡಿ ಅದನ್ನು ಖರೀದಿಸಿದಾಗ ಮಾತ್ರ ಬೆಳೆಯನ್ನು ಬೆಳೆಯುವ ರೈರಿಗೆ ಸರಿಯಾದ ನ್ಯಾಯ ದೊರೆತು ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಕೃಷಿ ವಿನಾಶದತ್ತ ಸಾಗುವುದು.

ಆಧುನಿಕತೆಯ ಪ್ರವೇಶದಿಂದಾಗಿ ಕೃಷಿಯ ಸಲಕರಣೆಗಳು ತಂತ್ರಜ್ಞಾನದಿಂದ ಪ್ರೇರಿತಗೊಂಡು ರಚನೆಯಾದಂತವು. ಆದರೂ ದೇಶದಲ್ಲಿ ರೈತರು ಪ್ರಾಚೀನ ಕಾಲದಲ್ಲಿ ಬಳಸುತ್ತಿದ್ದ, ಮರದ ನೇಗಿಲು, ಕುಂಟೆ, ಪಿಕಾಸಿ, ಹಾರೆ, ಗುದ್ದಲಿ, ಮೊದಲಾದವುಗಳ ರೈತರು ಇಂದೂ ಬಳಸುತ್ತಿದ್ದಾರೆ. ಇವುಗಳು ಆಧುನಿಕ ಕೃಷಿ ಸಲಕರಣೆಗಳಿಗಿಂತ ಭಿನ್ನವಾದವು. ಆದ್ದರಿಂದ ಆಧುನಿಕತೆಯೊಂದಿಗೆ ಪರಂಪರೆಯ ಸಲಕರಣೆಗಳು ಇರಬೇಕಾದ ಅವಶ್ಯಕತೆ ಒತ್ತಿ ಹೇಳಿದ್ದಾರೆ.

ಒಟ್ಟಾರೆ ಎನ್.ಬೋರಲಿಂಗಯ್ಯ ಅವರು ನಮ್ಮ ಭಾರತ ದೇಶದಲ್ಲಿರುವ ಸಂಪನ್ಮೂಲಗಳನ್ನು ಸರಿಯಾಗಿ ಬಳಕೆಮಾಡಿಕೊಂಡರೆ ನಮ್ಮ ದೇಶದಲ್ಲಿಯೇ ಉತ್ಪಾದಿಸಿ,

ತಯಾರಿಸಿ, ಜನರಿಗೆ ಉದ್ಯೋಗ ನೀಡಿ, ನಮ್ಮಲ್ಲಿರುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಬಹುದು ಎಂದಿದ್ದಾರೆ.

ಸ್ತ್ರೀವಾದಿ ಚಿಂತನೆ

ಸ್ತ್ರೀವಾದ ಎಂದರೆ ಸ್ತ್ರೀಯರ ಪರವಾದ ಆಲೋಚನೆ, ಚಿಂತನೆಯುಳ್ಳದ್ದನ್ನು ಸ್ತ್ರೀವಾದ ಎಂದು ಕರೆಯುತ್ತಾರೆ. ಪ್ರಾಚೀನ ಕಾಲದಿಂದಲೂ ಪುರುಷ ಪ್ರಧಾನ ಸಮಾಜದಿಂದ ಶೋಷಣೆಗೆ, ಕಿರುಕುಳಕ್ಕೆ ಒಳಗಾಗಿ ತನ್ನ ಬದುಕನ್ನು ಸಾಗಿಸುತ್ತಿದ್ದಳು. ಸ್ತ್ರೀಯರಿಗೆ ಯಾವುದೇ ಸ್ಥಾನಮಾನವಿಲ್ಲದೆ ಅವಳ ಸ್ಥಿತಿ ಶೋಚನೀಯವಾಗಿತ್ತು. ಅಂದರೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಕೌಟುಂಬಿಕವಾಗಿ ಬದುಕಿನ ಎಲ್ಲಾ ಮಜಲುಗಳಲ್ಲಿ ಶೋಷಿತಗಳಾಗಿದ್ದಳು. ಇದರಿಂದ ಸ್ತ್ರೀ ಅಶಕ್ತಳು, ಅಬಲೆ ಎಂದು ಬಿಂಬಸಲಾಗುತ್ತಿತ್ತು. ಆದರೆ ಪ್ರಾಚೀನ ಕಾಲದಿಂದಲೂ ಮಹಿಳೆಯರ ಸಮಸ್ಯೆಗಳ ಕುರಿತಂತೆ ಹಲವಾರು ಹೋರಾಟಗಳು, ಚಳುವಳಿಗಳು ನಡೆದವು. ಇವುಗಳ ಮುಖ್ಯ ಉದ್ದೇಶ ಸ್ತ್ರೀಯರಿಗೆ ಸಾಮಾಜಿಕ ಸ್ಥಾನಮಾನ ಕೊಡಿಸುವುದಾಗಿತ್ತು. ಮಧ್ಯಕಾಲೀನ ಸಮಾಜದಲ್ಲಿ ತಲೆದೋರಿದ್ದ ಹಲವಾರು ಸಮಸ್ಯೆಗಳ ವಿರುದ್ಧ ಧನಿ ಎತ್ತಿದ ಸಮಾಜ ಸುಧಾರಕರು ಅಂದಿನ ಸರ್ಕಾರದ ಮೇಲೆ ಒತ್ತಡ ತರುವುದರ ಮುಖಾಂತರ ಮಹಿಳೆಯರ ಪರವಾದ ಕಾನೂನುಗಳನ್ನು ಜಾರಿಗೆ ತರುವುದರ ಮೂಲಕ ಸುಧಾರಣೆಗೆ ಕಾರಣವಾಯಿತು. ಆಧುನಿಕ ಶಿಕ್ಷಣದ ಪರಿಣಾಮವಾಗಿ ಮಹಿಳಾ ಸಮಸ್ಯೆ, ಸವಾಲುಗಳನ್ನು ಸುಧಾರಿಸಲು ಬರಹಗಾರರು, ಚಿಂತಕರು ತಮ್ಮದೇ ಆದ ಚಿಂತನೆಗಳು, ಬರವಣಿಗೆಗಳು ಆಲೋಚನೆಗಳ ಮೂಲಕ ವೈಚಾರಿಕತೆಯನ್ನು ಬಿತ್ತುವುದರ ಮೂಲಕ ಮಹಿಳೆಯರ ಸ್ಥಿತಿಗತಿಯಲ್ಲಿನ ಬದಲಾವಣೆ, ಸಾಮಾಜಿಕ ಮನೋಧೋರಣೆಯನ್ನು ತಮ್ಮ ಸಾಹಿತ್ಯ ಕೃಷಿಯ ಮುಖಾಂತರ ತಿದ್ದುವ ಪ್ರಯತ್ನವನ್ನು ಮಾಡಿದ್ದಾರೆ. ಹೀಗೆ ಬೋರಲಿಂಗಯ್ಯನವರ 'ಜವನಕ್ಕ', 'ಕಡಿವಾಣ' ಹಾಗೂ 'ಸೃಜನ ಸಿರಿ' ಕೃತಿಗಳಲ್ಲಿ ಸ್ತ್ರೀವಾದಿ ಚಿಂತನೆಯನ್ನು ಕಾಣುತ್ತೇವೆ.

ಕೌಟುಂಬಿಕವಾಗಿ ಸ್ತ್ರೀಯರಿಗೆ ಯಾವುದೇ ಸ್ಥಾನಮಾನ ಇರಲಿಲ್ಲ. ಆಕೆಯನ್ನು ಕೇವಲ ಮಕ್ಕಳ ಹಡೆಯುವ ಮತ್ತು ಭೋಗದ ವಸ್ತುವನ್ನಾಗಿ ಕಾಣಲಾಗುತ್ತಿತ್ತು. ಕುಟುಂಬದಲ್ಲಿನ ನಿರ್ಲಕ್ಷ್ಯ, ದೌರ್ಜನ್ಯಗಳನ್ನು ಅನುಭವಿಸುವುದರೊಂದಿಗೆ ತನ್ನ ಬದುಕನ್ನು ಸಾಗಿಸುತ್ತಿದ್ದಳು. ಎನ್.ಬೋರಲಿಂಗಯ್ಯ ಅವರು ತಮ್ಮ ಕೃತಿಗಳಲ್ಲಿ ಪ್ರಧಾನ ಸ್ಥಾನಮಾನವನ್ನು ನೀಡುವುದರ ಮೂಲಕ ಸ್ತ್ರೀಯರನ್ನು ಗೌರವಿಸಬೇಕೆಂದು ಹೇಳಿದ್ದಾರೆ. ಆಕೆಯನ್ನು ಕುಟುಂಬದ ಕರ್ತಳಾಗಿ

ಬಿಂಬಿಸುವ ಮೂಲಕ ಸ್ತ್ರೀಯನ್ನು ಆಧುನಿಕತೆ ಮತ್ತು ಸಮಕಾಲೀನ ಸಮಾಜಕ್ಕೆ ಮುಖಾಮುಖಿಯಾಗಿಸುವ ಪ್ರಯತ್ನವಾಗಿದೆ.

ಸ್ತ್ರೀಯನ್ನು ಆರ್ಥಿಕತೆಯ ಪ್ರತೀಕವಾಗಿರಸುವುದರ ಮೂಲಕ ಉದ್ಯೋಗಕ್ಕಾಗಿ ಸ್ತ್ರೀಯು ಪುರುಷ ಪ್ರಧಾನ ಸಮಾಜವನ್ನು ಮೊರೆಹೋಗುವಬದಲು ಕೃಷಿ ಚಟುವಟಿಕೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಸ್ವಾವಲಂಬನೆ ಜೀವನ ಮಾಡಬಹುದಾಗಿದೆ ಎಂದು ಹೇಳುತ್ತಾರೆ. ಕೃಷಿ ಚಟುವಟಿಕೆಯಲ್ಲಿ ಸಂಪೂರ್ಣ ತೊಡಗಿಸಿಕೊಂಡು ಔದ್ಯೋಗಿಕ ಕ್ಷೇತ್ರದಲ್ಲಿ ಮಹಿಳೆಯು ಗುರುತಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಹೆಣ್ಣಿಗೆ ಶಿಕ್ಷಣವನ್ನು ನೀಡುವುದರಿಂದ, ಶಿಕ್ಷಿತಳಾಗಿ ಸಮಾಜದಲ್ಲಿನ ಎಲ್ಲಾ ಸಮಸ್ಯೆ ಸವಾಲುಗಳನ್ನು ಎದುರಿಸಿ ನಿಲ್ಲಲು ಸಾಧ್ಯವಾಗುತ್ತದೆ. ಹೀಗೆ ಗ್ರಾಮೀಣ ಮಹಿಳೆಯರ, ಕೃಷಿ ಕಾರ್ಮಿಕರ ಹಾಗೂ ಹೆಣ್ಣಿನ ಬೌದ್ಧಿಕ ಸ್ಥಿತಿಗತಿಗಳಲ್ಲಿನ ಬದಲಾವಣೆಗಳನ್ನು ಗುರುತಿಸುವುದನ್ನು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

ಗ್ರಾಮೀಣ ಸಮಾಜ ಚಿತ್ರಣ

ಎನ್.ಬೋರಲಿಂಗಯ್ಯ ಅವರ 'ಜವನಕ್ಕ' ಮತ್ತು 'ಕಡಿವಾಣ' ಎಂಬ ಎರಡು ಕಾದಂಬರಿಗಳು ಗ್ರಾಮೀಣ ಸಮಾಜದ ಸ್ಪಷ್ಟಚಿತ್ರಣವನ್ನು ತೆರೆದಿಡುತ್ತವೆ. ಅವರು ಮೂಲತಃ ಗ್ರಾಮೀಣ ಪರಿಸರದಿಂದ ಬೆಳೆದುಬಂದವರಾದರಿಂದ ಅವರ ಬದುಕಿನ ಅನುಭವಗಳು ಕಾದಂಬರಿಯ ಬರವಣಿಗೆಯೂ ಆಗಿದೆ. ಹಾಗಾಗಿ ಹಾಸನ ಪ್ರಾಂತ್ಯವನ್ನು ಒಳಗೊಂಡಂತೆ ಚನ್ನರಾಯಪಟ್ಟಣದ ಗ್ರಾಮೀಣ ಪ್ರದೇಶವನ್ನು ಕಾದಂಬರಿಯೊಳಗೆ ಕಾಣಿಸಿಕೊಳ್ಳುವುದು ಕಂಡುಬರುತ್ತದೆ.

ಗ್ರಾಮೀಣ ಪ್ರದೇಶ ಎಂಬುದು ಹಳ್ಳಿಗಳನ್ನು ಒಳಗೊಂಡಂತೆ ಪ್ರದೇಶವಾಗಿರುತ್ತದೆ. ಈ ಗ್ರಾಮೀಣ ಜನರ ಪ್ರಧಾನ ವೃತ್ತಿ ವ್ಯವಸಾಯವಾಗಿರುತ್ತದೆ. ಮತ್ತು ವ್ಯವಸಾಯದ ಉಪಕುಲ ಕಸುಬುಗಳಾದ ಪಶುಪಾಲನೆ, ಹೈನುಗಾರಿಕೆ, ಕುರಿಸಾಕಾಣಿಕೆ ಮೊದಲಾದವುಗಳನ್ನು ಒಳಗೊಂಡಂತಿರುತ್ತದೆ. ಗ್ರಾಮೀಣ ಪ್ರದೇಶದ ಜನರು ಹೆಚ್ಚಾಗಿ ಅವಿದ್ಯಾವಂತರಾಗಿದ್ದು, ಸಾಂಪ್ರದಾಯಿಕ ಶಿಕ್ಷಣದಿಂದ ವಂಚಿತರಾದವರು. ತಮ್ಮ ಬದುಕಿನ ಎಲ್ಲ ಸಮಸ್ಯೆಗಳಿಗೆ ಹೆಚ್ಚಾಗಿ ಪ್ರಕೃತಿಯನ್ನೇ ಅವಲಂಭಿಸಿರುತ್ತಾರೆ. ಅಂದರೆ ಗ್ರಾಮೀಣ ಪರಿಸರವು ಹಳ್ಳಿಗರಿಗೆ ಆದಾಯದ ಮೂಲವಾಗಿ, ಆಹಾರದ ಮೂಲವಾಗಿ, ವಾಣಿಜ್ಯ ಚಟುವಟಿಕೆಯ ಭಾಗವಾಗಿರುವುದನ್ನು ಕಾಣುತ್ತೇವೆ. ವ್ಯವಸಾಯವೇ ಪ್ರಧಾನವಾದ ಗ್ರಾಮೀಣ ಪ್ರದೇಶದಲ್ಲಿ ಸಂಪ್ರದಾಯಿಕ

ಕೃಷಿಯೊಂದಿಗೆ ಆಧುನಿಕ ವಿಧಾನವನ್ನು ಅಳವಡಿಸಿಕೊಂಡು ಕೃಷಿಯಲ್ಲಿ ಮುನ್ನಡೆ ಸಾಧಿಸುತ್ತಿರುವುದನ್ನು ಕಾಣುತ್ತಿದ್ದೇವೆ.

ಗ್ರಾಮೀಣ ಭಾಗದಲ್ಲಿ ಆಧುನಿಕತೆಯ ಪ್ರವೇಶದಿಂದಾಗಿ ಜನರು ಅನ್ಯ ಉದ್ಯೋಗಗಳಿಗೆ ಮಾರುಹೋಗದೇ ಕೃಷಿಯಲ್ಲಿ ತಾವು ಹೆಚ್ಚಾಗಿ ತೊಡಗಿಕೊಂಡಾಗ ಮಾತ್ರ ರೈತನು ಸ್ವಾವಲಂಬನೆಯ ಬದುಕು ಕಟ್ಟಿಕೊಳ್ಳಬಹುದು ಎಂದಿದ್ದಾರೆ.

ಕೃಷಿಯ ಉಪಕಸುಬುಗಳಿಗೆ ಆಧಾರವಾದ, ಕೆರೆಗಳು, ಕಟ್ಟೆಗಳು, ಕಾಲುವೆಗಳ ಚಿತ್ರಣವನ್ನು ಕಾದಂಬರಿಕಾರರು ಕಾದಂಬರಿಗಳಲ್ಲಿ ತರುತ್ತಾರೆ. ಎನ್.ಬೋರಲಿಂಗಯ್ಯ ಅವರು ಪಶುಪಾಲನೆ ಮತ್ತು ಪಶುಸಂಗೋಪನೆಯ ಕಾರ್ಯದಲ್ಲಿ ಗ್ರಾಮೀಣ ಭಾಗದ ಪಾತ್ರವನ್ನು ವಿಶ್ಲೇಷಿಸುತ್ತಾರೆ.

ಗ್ರಾಮೀಣ ಪ್ರದೇಶದ ಕಾಡು–ಮೇಡುಗಳು, ಗಿಡ–ಮರಗಳು, ಪಕ್ಷಿಗಳು, ಬೆಳೆಗಳು ಮತ್ತು ಅವುಗಳ ವಿಧಗಳು, ವಿವಿಧ ರೀತಿಯ ಹೂಗಳು, ವನ್ಯಪ್ರಾಣಿಗಳು, ಸಾಕುವ ಪ್ರಾಣಿಗಳು, ಸಾಕುವ ಪಕ್ಷಿಗಳು, ಮಳೆಯ ಬೀಳುವ ವಾತಾವರಣದ ಸಂದರ್ಭಗಳು, ಬೇಸಾಯದ ಋತುಗಳು, ಋತುಗಳ ಸಂದರ್ಭಗಳಿಗನುಸಾರವಾಗಿ ಬೆಳೆಯುವ ಬೆಳೆಗಳು, ಹಳ್ಳಿಗಳಲ್ಲಿನ ಶಿಕ್ಷಣದ ವ್ಯವಸ್ಥೆ, ಶಾಲಾ ಭೌತಿಕ ಪರಿಸರ, ಆರೋಗ್ಯ, ನೈರ್ಮಲ್ಯ ಮೊದಲಾದವುಗಳನ್ನು ಎನ್.ಬೋರಲಿಂಗಯ್ಯ ಅವರು ಕಾದಂಬರಿಯೊಳಗೆ ತರುವುದು ವಿಶೇಷವಾಗಿ ಕಂಡುಬರುತ್ತದೆ.

ಕೌಟುಂಬಿಕ ಪ್ರಜ್ಞೆ

'ಜವನಕ್ಕ' ಮತ್ತು 'ಕಡಿವಾಣ' ಈ ಎರಡು ಕಾದಂಬರಿಯೊಳಗೆ ಎನ್.ಬೋರಲಿಂಗಯ್ಯ ಅವರು ಸಾಂಪ್ರದಾಯಿಕ ಮಾದರಿಯ ಕುಟುಂಬ ಚಿತ್ರಣವನ್ನು ತರುವುದು ಕಂಡುಬರುತ್ತದೆ. ಕುಟುಂಬ ಅಂದರೆ ಐದು ಅಥವಾ ಅದಕ್ಕಿಂತ ಹೆಚ್ಚು ಜನರು ಒಂದೇ ಮನೆಯಲ್ಲಿ ವಾಸವಾಗಿದ್ದರೆ ಅಂತಹ ಒಂದು ಗುಂಪನ್ನು ಕುಟುಂಬ ಎಂದು ಕರೆಯಲಾಗುತ್ತದೆ. ಹೀಗೆ ಸಮಾಜದಲ್ಲಿನ ಕೌಟುಂಬಿಕ ವ್ಯವಸ್ಥೆಯನ್ನು ಪ್ರಾಚೀನ ಮನೋಧೋರಣೆ ಕುಟುಂಬಗಳೂ ಮತ್ತು ಆಧುನಿಕ ಮನೋಧೋರಣೆ ಕುಟುಂಬಗಳು ಎಂದು ವರ್ಗೀಕರಿಸಿಕೊಳ್ಳಬಹುದಾಗಿದೆ.

ಪ್ರಾಚೀನ ಅಥವಾ ಸಾಂಪ್ರದಾಯಿಕ ಸಮಾಜದಲ್ಲಿ ಅವಿಭಕ್ತ ಕುಟುಂಬದ ಪರಿಕಲ್ಪನೆ ಪ್ರಧಾನವಾದುದು. ಅಂದರೆ ಒಂದು ಅಥವಾ ಎರಡು ತಲೆಮಾರಿನ ಕುಟುಂಬದ ಸದಸ್ಯರು

ಒಂದೇ ಮನೆಯಲ್ಲಿ ವಾಸವಾಗಿರುವಂತಹ ಕುಟುಂಬ ವ್ಯವಸ್ಥೆಯನ್ನು ಎನ್.ಬೋರಲಿಂಗಯ್ಯ ಅವರು ತಮ್ಮ ಕಾದಂಬರಿಯೊಳಗೆ ತರುವುದರ ಮೂಲಕ ಹೆಚ್ಚು ಪ್ರಸ್ತುತವಾಗುತ್ತಾರೆ. ಕೃಷಿ ಪ್ರಧಾನವಾದ ಈ ಅವಿಭಕ್ತ ಕುಟುಂಬಕ್ಕೆ ಕೃಷಿಯೇ ಜೀವಾಳ, ಕೃಷಿಯೇ ಬದುಕು ಹಳಬರಿಂದ ಹೊಸತಲೆಮಾರಿನವರೆಗೂ ಕೃಷಿ ಅವಲಂಬನೆಯ ಸ್ವರೂಪ ಕಾಣಿಸಿಕೊಳ್ಳುತ್ತದೆ. 'ಜವನಕ್ಕ' ಕಾದಂಬರಿಯಲ್ಲಿ ಜವನಕ್ಕಳು ಕುಟುಂಬದ ಮುಖ್ಯಸ್ಥಳಾಗಿ ಕಾಣಿಸಿಕೊಳ್ಳುವುದರ ಮೂಲಕ ಸ್ತ್ರೀವಾದಿ ಚಿಂತನೆಯನ್ನು ತೆರೆದಿಡುತ್ತಾರೆ.

ಸಮಾಜದಲ್ಲಿ ಪ್ರತಿಯೊಂದು ಕುಟುಂಬವು ಮಕ್ಕಳ ಭವಿಷ್ಯದ ಜವಬ್ದಾರಿಯನ್ನು ವಹಿಸಿಕೊಂಡಿರುತ್ತದೆ. ಮಕ್ಕಳನ್ನು ಸುಶಿಕ್ಷಿತರನ್ನಾಗಿ ಮಾಡುವ ತವಕ ಎಲ್ಲ ಕುಟುಂಬಗಳಿಗೂ ಇರುತ್ತದೆ. ಇಲ್ಲಿ ಗ್ರಾಮೀಣ ಪ್ರದೇಶದಲ್ಲಿ ನೀಡುತ್ತಿರುವ ಶಿಕ್ಷಣ ಅವ್ಯವಸ್ಥೆಯನ್ನು ಎತ್ತಿ ತೋರಿಸುವುದರೊಂದಿಗೆ. ಹಳ್ಳಿಗಳಲ್ಲಿ ಮಕ್ಕಳು ಪಡೆಯುವ ಶಿಕ್ಷಣವು ಗುಣಮಟ್ಟದ್ದಾಗಿರದೆ, ಅತ್ಯಂತ ಕಳಪೆಮಟ್ಟದ್ದಾಗಿದ್ದೂ ನಗರ ಪ್ರದೇಶದ ಶಾಲೆಗಳ ಶಿಕ್ಷಣ ವ್ಯವಸ್ಥೆ ಮತ್ತು ಅಲ್ಲಿನ ಆಧುನಿಕ ಪರಿಸರ ವಿದ್ಯಾರ್ಥಿಗಳ ಭವಿಷ್ಯವನ್ನು ಉತ್ತಮಗೊಳಿಸುತ್ತದೆ. ಹಾಗಾಗಿ 'ಕಡಿವಾಣ' ಕಾದಂಬರಿಯಲ್ಲಿ ಜವನಕ್ಕ ಮಕ್ಕಳನ್ನು ಕೇಂದ್ರೀಯ ಆದರ್ಶ ವಿದ್ಯಾಲಯದ ಶಿಕ್ಷಣ ಸಂಸ್ಥೆಗೆ ದಾಖಲು ಮಾಡುವುದನ್ನು ಕಾಣುತ್ತೇವೆ.

ಆಧುನಿಕ ಶಿಕ್ಷಣದ ಪ್ರಭಾವದಿಂದ ಜವನಕ್ಕಳ ಅಣ್ಣ ಕೃಷ್ಣೇಗೌಡ ಮತ್ತು ಶಾಂತಿಯರ ಮಗ ಎಂಜಿನಿಯರ್ ಉದ್ಯೋಗ ಪಡೆದಿದ್ದರೂ, ಜವನಕ್ಕ ಆ ಮಗನನ್ನು ಕೃಷಿಯಲ್ಲಿ ತೊಡಗಿಸುವುದನ್ನು ಕಾಣುತ್ತೇವೆ. ಹೀಗೆ ಎನ್.ಬೋರಲಿಂಗಯ್ಯ ಅವರು ಪ್ರಸ್ತುತ ಸಮಾಜದಲ್ಲಿ, ಕೃಷಿ ಚಟುವಟಿಕೆಯಲ್ಲಿ ಇಂದಿನ ಯುವಪೀಳಿಗೆಯ ಪ್ರಸ್ತುತತೆ ಹಾಗೂ ಪಾಲ್ಗೊಳ್ಳುವಿಕೆಯಲ್ಲಿ ಕುಟುಂಬ ವಹಿಸುವ ಪಾತ್ರವನ್ನು ಕುರಿತಂತೆ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ.

ಅಧ್ಯಾಯ – ೫

ವಸ್ತು, ಭಾಷೆ, ಶೈಲಿ

ಎನ್.ಬೋರಲಿಂಗಯ್ಯ ಅವರು ಹೊಸಗನ್ನಡ ಸಾಹಿತ್ಯ ಲೋಕದ ಕವಿಯೂ, ಕಾದಂಬರಿಕಾರರೂ, ಪ್ರಬಂಧಕಾರರೂ, ವಿಮರ್ಶಕರೂ ಆಗಿದ್ದಾರೆ. ಅವರ ಸಾಹಿತ್ಯ ಬರವಣಿಗೆಯ ಶೈಲಿಯೂ ವೈವಿಧ್ಯಮಯವಾಗಿದೆ. ಹಾಗಾಗಿ ಬೋರಲಿಂಗಯ್ಯ ಅವರು ಹೊಸಗನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಸ್ಥಾನ ಪಡೆದಿದ್ದಾರೆ.

ಕವಿಯಾಗಿ – ಎನ್.ಬೋರಲಿಂಗಯ್ಯ ಅವರು ಕಾಣಿಸಿಕೊಳ್ಳುವುದರ ಮೂಲಕ ಅವರ ಅನುಭವಗಳನ್ನು ಕಾವ್ಯದ ಮೂಲಕ ಕಡೆದಿದ್ದಾರೆ. **'ಸೃಜನಸಿರಿ'** ಕಾವ್ಯಸಂಕಲನದ ಮೂಲಕ ಸಹೃದಯ ಲೋಕಕ್ಕೆ ಮಕ್ಕಳ ಸಾಹಿತ್ಯ (ಕಾವ್ಯ) ವನ್ನು ನೀಡಿದ್ದಾರೆ. ಆಮೂಲಕ ಭಾಷೆಯನ್ನು ಒಬ್ಬ ಮಗಳು, ಮೊಮ್ಮಗಳಿಗೆ, ಚಿಕ್ಕಮ್ಮ, ಚಿಕ್ಕಪ್ಪ ಮೊದಲಾದವರು ಒಬ್ಬ ಹೆಣ್ಣುಮಗಳನ್ನು ಬಾಲ್ಯದಲ್ಲಿ ಪೋಷಿಸುವ ರೀತಿ ಮತ್ತು ತಾತ ತೋರುವ ಮಮತೆ ಪ್ರೀತಿಯನ್ನು ಕುರಿತಂತೆ ಎನ್.ಬೋರಲಿಂಗಯ್ಯ ಅವರು ಕಾವ್ಯ ರಚಿಸಿದ್ದಾರೆ. ಒಬ್ಬ ಹೆಣ್ಣು ಮಗುವನ್ನು ಕುಟುಂಬದಲ್ಲಿ ಬೆಳೆಸುವ ರೀತಿ ಮತ್ತು ಭವಿಷ್ಯದಲ್ಲಿ ಆ ಮಗು ಬೆಳೆಯಬೇಕಾದ ಹಂತಗಳನ್ನು ನಿರೂಪಿಸುತ್ತಾರೆ.

ಒಟ್ಟಾರೆ ಈ ಕವನ ಸಂಕಲನವು ಒಂದು ಹೆಣ್ಣು ಮಗುವನ್ನು ಕೇಂದ್ರೀಕರಿಸಿ ರಚನೆಯಾಗಿರುವುದರಿಂದ 'ಹೆಣ್ಣು ಹೊರೆಯಲ್ಲ ಅದು ಮನೆಯ ಆಸ್ತಿ' ಎಂದು ಹೇಳುವುದರ ಮೂಲಕ 'ಸ್ತ್ರೀವಾದ'ವನ್ನು ಕಾವ್ಯದೊಳಗೆ ತರುವುದು ವಿಶೇಷವಾಗಿ ಕಂಡುಬರುತ್ತದೆ.

ಕಾದಂಬರಿಕಾರರಾಗಿ – ಎನ್.ಬೋರಲಿಂಗಯ್ಯ ಅವರು ಕಾಣಿಸಿಕೊಳ್ಳುತ್ತಾರೆ. ಇವರು ಮೂಲತಃ ಗ್ರಾಮೀಣ ಪರಿಸರದಿಂದ ಬಂದವರು ಹಾಗಾಗಿ ಗ್ರಾಮೀಣ ಪ್ರದೇಶದ ಸಮಗ್ರ ಚಿತ್ರಣವನ್ನು ಅದರಲ್ಲಿಯೂ ಕೃಷಿಕ ಮನೆತನವನ್ನು, ಪ್ರಗತಿಪರ ಕೃಷಿಕ ಚಿಂತನೆ ಮತ್ತು ಆಲೋಚನೆಗಳನ್ನು ಕಾದಂಬರಿಯೊಳಗೆ ತರುತ್ತಾರೆ.

ಇದು ಅವಿಭಕ್ತ ಕುಟುಂಬವಾಗಿದ್ದು, ಈ ಕುಟುಂಬದಲ್ಲಿ ಎಲ್ಲ ಸಮಾನ ಮನಸ್ಥಿತಿಯುಳ್ಳವರಾಗಿರುತ್ತಾರೆ. ಹಾಗಾಗಿ ಅವರು ಕೃಷಿಯಲ್ಲಿ ಸ್ವಾವಲಂಬನೆಯನ್ನು ಸಾಧಿಸುವ ಪ್ರಯತ್ನ ಮಾಡುತ್ತಾರೆ.

ಕುವೆಂಪುರವರ ಕಾದಂಬರಿಗಳ ಮುಖೇನ ಪ್ರಭಾವಿತರಾದ ಎನ್.ಬೋರಲಿಂಗಯ್ಯ ಅವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಮಾದರಿಯಲ್ಲಿ ತಮ್ಮ ಕಾದಂಬರಿಯನ್ನು

ಕಟ್ಟುವಂತಹ ಪ್ರಯತ್ನ ಮಾಡುತ್ತಾರೆ. ಈ ಕಾದಂಬರಿಯಲ್ಲಿ ಅನೇಕ ಪಾತ್ರಗಳು ಕಂಡುಬಂದರೂ ಜವನಕ್ಕಳ ಪಾತ್ರ ಅತ್ಯಂತ ಮಹತ್ವದಾದುದಾಗಿದೆ. ಸ್ತ್ರೀಯರ ಕಾದಂಬರಿಗಳು ಸ್ತ್ರೀಕೇಂದ್ರಿತ ಕಾದಂಬರಿಗಳಾಗಿ ನಿಲ್ಲುತ್ತವೆ. ಅಂದರೆ ಇಲ್ಲಿ ಸ್ತ್ರೀವಾದಿ ಚಿಂತನೆಯೊಂದಿಗೆ, ಹೆಣ್ಣು ಅಶಕ್ತಳಲ್ಲ, ಶಕ್ತಳು, ಶಕ್ತಿವಂತಳೂ ಆಗಿದ್ದಾಳೆ, ಎಂದೂ ಕೃಷಿ ಕಾರ್ಯದಲ್ಲಿ ನಿರತರಾಗಿರುವ ಮಹಿಳೆಯ ಸ್ವಾವಲಂಭನೆಯನ್ನು ಕಾದಂಬರಿಯಲ್ಲಿ ಬಣ್ಣಿಸಿದ್ದಾರೆ.

ಗಾಂಧೀಜಿ ಅವರ ಚಿಂತನೆಗಳು ಮತ್ತು ತತ್ವಗಳು ಕಾದಂಬರಿಯಲ್ಲಿ ಹಾಸುಹೊಕ್ಕಾಗಿವೆ. ಅವರ ಗ್ರಾಮ ಸ್ವರಾಜ್ಯ ಕಲ್ಪನೆ, ಸ್ವದೇಶಿ ಚಿಂತನೆಯು ಕಾದಂಬರಿಯಲ್ಲಿ ಕಂಡುಬರುತ್ತದೆ. ಅಂದರೆ ನಮಗೆ ಬೇಕಾದ ಎಲ್ಲ ಪದಾರ್ಥಗಳನ್ನು ಗ್ರಾಮೀಣ ಪ್ರದೇಶದಲ್ಲಿಯೇ ಪಡೆದುಕೊಂಡು ಸ್ವಾವಲಂಬನೆ ಸಾಧಿಸುವುದು ಕಂಡುಬರುತ್ತದೆ.

ರಾಮಕೃಷ್ಣ ಪರಮಹಂಸ, ಶಾರಾದಾಂಬೆ, ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಚಿಂತನೆಯೂ ಐನ್‌ಸ್ಟೈನ್ ಅವರ ವೈಜ್ಞಾನಿಕ ಚಿಂತನೆಯು ಕಾದಂಬರಿಗಳಲ್ಲಿ ಕಂಡುಬರುತ್ತದೆ.

ಶಿಕ್ಷಣ ಸಮಾಜವನ್ನು ಪರಿವರ್ತನೆ ಮಾಡುತ್ತದೆ ಎಂಬಂತೆ ಎನ್.ಬೋರಲಿಂಗಯ್ಯ ಶಿಕ್ಷಣ ಮತ್ತು ಇಂದಿನ ಯುವಶಕ್ತಿಯ ಆಲೋಚನೆಯ ಚಿತ್ರಣ ಮತ್ತು ಬದಲಾವಣೆಯನ್ನು ಸೂಚಿಸುತ್ತಾರೆ.

ಹಾಸನ ಭಾಗದ ವೈವಿಧ್ಯಮಯ ಪರಿಸರವನ್ನು ಕಾದಂಬರಿಯೊಳಗೆ ತರುವುದರ ಮೂಲಕ ಪ್ರಾದೇಶಿಕತೆಯನ್ನು ಕಾದಂಬರಿಯೊಳಗೆ ತಂದಿದ್ದಾರೆ.

ಕಾದಂಬರಿಯೊಳಗೆ ಭಾಷೆಯೂ ಸರಳವಾಗಿದ್ದು, ಕುತೂಹಲದಿಂದ ಮುಂದುವರೆಯುವಂತೆ ಮಾಡುತ್ತದೆ. ಕಾದಂಬರಿಗಳಲ್ಲಿ ಗಾದೆಗಳು, ಒಗಟುಗಳು, ನುಡಿಗಟ್ಟುಗಳು ಪ್ರಸಿದ್ಧ ವಿದ್ವಾಂಸರ, ಚಿಂತಕರ ಹೇಳಿಕೆಗಳು ಕಾಣಿಸಿಕೊಳ್ಳುವುದರೊಂದಿಗೆ ಗ್ರಾಮೀಣ ಸೊಗಡು, ಕೃಷಿ ಕಾರ್ಮಿಕರ ಭಾಷೆ ನಗರ ಭಾಷೆಗಳ ಚಿತ್ರಣ ಕಾಣುತ್ತವೆ.

ವಿಮರ್ಶಕರಾಗಿ – ಎನ್.ಬೋರಲಿಂಗಯ್ಯ ಅವರು ತಮ್ಮ ಸಾಹಿತ್ಯವನ್ನು ರಚಿಸಿದ್ದಾರೆ. ಅವರ ವಿಮರ್ಶೆಯೂ ಅತ್ಯಂತ ವಿಶಿಷ್ಟವಾಗಿ ಕಾಣಿಸಿಕೊಳ್ಳುತ್ತದೆ. ಇವರು ವಚನ ಸಾಹಿತ್ಯ ಮತ್ತು ಹೊಸಗನ್ನಡ ಸಾಹಿತ್ಯದ ನವೋದಯ ಪಂಥದಿಂದ ಪ್ರೇರಿತರಾದಂತೆ ಕಾಣುತ್ತದೆ. ಇವರ ವಿಮರ್ಶೆಯ ವಿಸ್ತಾರವು ವಚನಕಾರರು ಮತ್ತು ಹೊಸಗನ್ನಡ ಸಾಹಿತ್ಯದ ಕಾವ್ಯ, ಕಥೆ, ಕಾದಂಬರಿ, ನಾಟಕ, ಅನುವಾದ ಹೀಗೆ ಎಲ್ಲ ಪ್ರಕಾರಗಳಲ್ಲಿಯೂ ಕೈಯಾಡಿಸಿರುವುದು ಕಂಡುಬರುತ್ತದೆ.

'ವಚನ ಕಟ್ಟಿದ ಅಲ್ಲಮ' ಕೃತಿಯ ಮೂಲಕ ವಚನ ಸಾಹಿತ್ಯವನ್ನು ವಿಭಿನ್ನ ದೃಷ್ಟಕೋನದಿಂದ ನೋಡುವ ರೀತಿಯನ್ನು ಕುರಿತಂತೆ ಮಾರ್ಗದರ್ಶನ ಮಾಡಿದ್ದಾರೆ. ವಚನ ಸಾಹಿತ್ಯವನ್ನು ಯಾವುದೇ ಸ್ಥಲಗಳ ಹಿನ್ನೆಲೆಯಲ್ಲಿ ವಿಮರ್ಶಿಸದೆ ಬಿಡಿ-ಬಿಡಿಯಾಗಿ ವಿಮರ್ಶೆ ಮಾಡಿದಾಗ ಅದರ ವಿಭಿನ್ನ ಚಿಂತನೆಗಳು ತೆರೆದುಕೊಳ್ಳುತ್ತವೆ ಎಂಬುದನ್ನು ಹೇಳುವುದರ ಮೂಲಕ ಅಲ್ಲಮನ ವಚನಗಳನ್ನು ವಿಮರ್ಶಿಸಿದ್ದಾರೆ.

'ಕುವೆಂಪು ಮತ್ತು ಕನ್ನಡ ಸಾಹಿತ್ಯ ಸಂದರ್ಭ' ಎಂಬ ವಿಮರ್ಶಾಕೃತಿಯಲ್ಲಿ ಹೊಸಗನ್ನಡ ಸಾಹಿತ್ಯದಲ್ಲಿ ಕುವೆಂಪು ಅವರ ಸ್ಥಾನವನ್ನು ಗುರುತಿಸುವುದರ ಮೂಲಕ ವಿಮರ್ಶಕನಿಗಿರಬೇಕಾದ ಗುಣ ಮತ್ತು ಸಾಧ್ಯತೆಗಳು ಕಥಾಸಾಹಿತ್ಯದ ಸಂದರ್ಭದಲ್ಲಿ ಲೇಖಕರಿಗೆ ಇರಬೇಕಾದ ಸಾಮಾಜಿಕ ಪ್ರಜ್ಞೆ, ಭಾಷಾಪ್ರಜ್ಞೆ ಆ ಕೃತಿಯ ತಾತ್ವಿಕತೆ, ವಸ್ತು ಆವರಣ, ಪಾತ್ರಗಳ ಅನಾವರಣ ಮೊದಲಾದವುಗಳನ್ನು ಸಾಹಿತ್ಯ ವಲಯದೊಳಗೆ ತರುವ ಸಂದರ್ಭವನ್ನು ತಿಳಿಸಿದ್ದಾರೆ.

ಪ್ರಬಂಧಕಾರರಾಗಿ – ಎನ್.ಬೋರಲಿಂಗಯ್ಯ ಅವರು ಪ್ರಬಂಧಕಾರರು ಹೌದು. ಅವರ ಪ್ರಬಂಧ ಸಂಕಲನವು ಮೌಲಿಕವಾದವು. ಅಂದರೆ 'ಶಿಕ್ಷಣ ಮತ್ತು ಲೈಂಗಿಕ ಜೀವನ' ಕೃತಿಯು ಸಮಕಾಲೀನ ಸಮಾಜದಲ್ಲಿ ವ್ಯಕ್ತಿಯು ಖಾಸಗಿ ಬದುಕನ್ನು ಸರಿಯಾಗಿ ನಿರ್ವಹಿಸುವ ರೀತಿಯನ್ನು ಕುರಿತಂತೆ ಮಾರ್ಗದರ್ಶನ ಮಾಡುತ್ತದೆ.

ಇಂದಿನ ಯುವಜನತೆಯು ಅತಿಯಾದ ಕಾಮನೆಯ ಬಯಕೆಗಳಿಂದ ತಮ್ಮ ಜೀವನವನ್ನು ಪತನದ ಹಾದಿಯಲ್ಲಿ ಸಾಗಿಸುವ ಪ್ರಯತ್ನದಲ್ಲಿರುತ್ತಾರೆ. ಹಾಗಾಗಿ ಯುವ ಜನಾಂಗ ತಮ್ಮ ಯೌವ್ವನದ ದಿನಗಳಲ್ಲಿ ಸನ್ಮಾರ್ಗದಲ್ಲಿ ಸಾಗಿ ತಮ್ಮ ಗುರಿಯನ್ನು ತಲುಪುವ ಉದ್ದೇಶದಿಂದ ಇಂದಿನ ದಿನಗಳಲ್ಲಿ ಲೈಂಗಿಕ ಶಿಕ್ಷಣದ ಅವಶ್ಯಕತೆ ಇದೆ ಎಂದು ಹೇಳುತ್ತಾ ಯುವಜನತೆಗೆ ಒಂದು ಕೈಪಿಡಿಯನ್ನು ನೀಡಿದ್ದಾರೆ. ಅವರ ಭಾಷೆ ಸರಳವಾದ ಹಾಡು ಭಾಷೆಯಾದ ಗ್ರಾಮ್ಯ ಸೊಗಡಿನೊಂದಿಗೆ ಸಾಹಿತ್ಯ ಬರವಣಿಗೆಯೂ ಕುತೂಹಲದೊಂದಿಗೆ ಸಾಗುತ್ತದೆ.

[illegible]

ಉಪಸಂಹಾರ

ಎನ್.ಬೋರಲಿಂಗಯ್ಯ ಅವರು ಹೊಸಗನ್ನಡ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಸಾಹಿತ್ಯವನ್ನು ಸೃಷ್ಟಿಮಾಡುವುದರ ಮೂಲಕ ಸಾಹಿತ್ಯ ಲೋಕದಲ್ಲಿ ಚಿರಪರಿಚಿತರಾಗಿದ್ದಾರೆ. ಅವರ ಸಾಹಿತ್ಯ ಬೆಳವಣಿಗೆಯ ವೈವಿಧ್ಯತೆಯು ಹಲವು ಆಯಾಮಗಳಲ್ಲಿ ಮೈದಾಳಿದೆ. ಅವರು ಮೂಲತಃ ಗ್ರಾಮೀಣ ಪ್ರದೇಶದಿಂದ ಬಂದವರಾದುದರಿಂದ ಅವರ ಕಾದಂಬರಿಗಳು ಗ್ರಾಮೀಣ ಪರಿಕಲ್ಪನೆಯ ಹಿನ್ನೆಲೆಯಿಂದ ರಚಿತವಾದುದು. ಕುಟುಂಬವನ್ನು ಪ್ರಧಾನವಾಗಿಟ್ಟು ಕೃಷಿಯ ಪ್ರಗತಿಯೊಂದಿಗೆ ಸ್ವಾವಲಂಭನೆಯ ಬದುಕನ್ನು ಹೇಗೆ ಕಟ್ಟಿಕೊಳ್ಳಬಹುದು ಎಂಬ ಹಂಬಲವನ್ನು ಈ ಕಾದಂಬರಿಗಳ ಮೂಲಕ ವ್ಯಕ್ತಪಡಿಸುತ್ತಾರೆ. ಇಂದಿನ ಕೈಗಾರೀಕರಣ ಮತ್ತು ನಗರೀಕರಣದ ಬೆಳವಣಿಗೆಯಿಂದಾಗಿ ಕೃಷಿಯು ಪತನದತ್ತ ಸಾಗುತ್ತಿದೆ. ಹೀಗೆ ಇಂದಿನ ಯುವ ಪೀಳಿಗೆಯು ಶಿಕ್ಷಣವನ್ನು ಕೇವಲ ಉದ್ಯೋಗದ ದೃಷ್ಟಿಯಿಂದ ನೋಡಿದರೂ ಮೂಲ ವೃತ್ತಿಯಾದ ಕೃಷಿಯನ್ನು ಮಾಡಬೇಕಾದ ಅನಿವಾರ್ಯತೆಯಿದೆ ಎಂದು ಹೇಳುತ್ತಾ, ಮುಂದಿನ ದಿನಗಳಲ್ಲಿ ಕೃಷಿಯ ಮಹತ್ವವನ್ನು ಹೇಳಲುಪಡುತ್ತಾರೆ. ಮಹಾತ್ಮಗಾಂಧೀಜಿ ಅವರ ಗ್ರಾಮಸ್ವರಾಜ್ಯ ಪರಿಕಲ್ಪನೆಯನ್ನು ಕಾದಂಬರಿಯೊಳಗೆ ತರುವಲ್ಲಿ ಯಶಸ್ವಿಯಾಗು-ವುದರೊಂದಿಗೆ, ಇವರ ಕಾದಂಬರಿಗಳಲ್ಲಿನ ಪ್ರಧಾನ ಪಾತ್ರ ಸ್ತ್ರೀ ಕೇಂದ್ರಿತವಾಗಿರು-ವುದರೊಂದಿಗೆ ಸ್ತ್ರೀವಾದಿ ಚಿಂತನೆಯನ್ನು ಕಾದಂಬರಿಯೊಳಗೆ ತರುತ್ತಾರೆ.

ಎನ್.ಬೋರಲಿಂಗಯ್ಯ ಅವರ ವಿಮರ್ಶಾ ಬರವಣಿಗೆಯು ಅತ್ಯಂತ ಮುಖ್ಯವಾಗಿದ್ದು, ಇವರು ಸಾಹಿತ್ಯದ ಹಲವು ಪ್ರಕಾರಗಳನ್ನು ವಿಮರ್ಶೆಗೆ ಒಳಪಡಿಸುವುದರ ಮುಖಾಂತರ ವಿಮರ್ಶಕರಾಗಿ ಕಾಣಿಸಿಕೊಳ್ಳುತ್ತಾರೆ. ಕಥೆ, ಕಾದಂಬರಿ, ನಾಟಕ, ಕಾವ್ಯ, ಅನುವಾದ, ಅಂಕಣ ಹೀಗೆ ಬರಹ ಮೊದಲಾದವು, ವಿಮರ್ಶಾ ನೆಲೆಗಟ್ಟಿನೊಂದಿಗೆ ಕುವೆಂಪು ರವರನ್ನು ಪ್ರಧಾನವಾಗಿಟ್ಟುಕೊಂಡು ಅವರ ಆಯ್ದ ಕೃತಿಗಳನ್ನು ವಿಮರ್ಶೆಗೆ ಒಳಪಡಿಸುವ ರೀತಿಯನ್ನು ಕಾಣಬಹುದು. ಇವರು ವಿಮರ್ಶಾ ನೆಲೆಯು ಕುವೆಂಪು ಅವರಿಂದ ಪ್ರಭಾವಿತರಾಗಿರುವುದು ಕಂಡುಬರುತ್ತದೆ. ಒಬ್ಬ ವಿಮರ್ಶಕನು ಒಂದು ಕೃತಿಯನ್ನು ಗ್ರಂಥವನ್ನು ನೋಡುವ ವಿಧಾನಗಳು, ಸಾಧ್ಯತೆಗಳು, ಮಾನದಂಡಗಳು ಸ್ವರೂಪ ಮತ್ತು ವಿಮರ್ಶಕನಿಗೆ ಎದುರಾಗುವ ಸಮಸ್ಯೆಗಳ ಸ್ವರೂಪವನ್ನು ಕುರಿತಂತೆ ವಿಮರ್ಶಕರು ಬರೆದಿರುವ ಲೇಖನಗಳ ಹಿನ್ನೆಲೆಯನ್ನು ಆಧರಿಸಿ ನವೋದಯ, ನವ್ಯ, ಪ್ರಗತಿಶೀಲ ಮತ್ತು ಇತ್ತೀಚಿನ ಬರಹಗಾರರನ್ನು ಮತ್ತು

[illegible]

[illegible]

[illegible]

[illegible]

ಅವರ ಸಾಹಿತ್ಯವನ್ನು ವಿಮರ್ಶೆಯನ್ನು ಕಾಣಬಹುದು. ಹೀಗೆ ಎನ್. ಬೋರಲಿಂಗಯ್ಯ ಅವರು ಹೊಸಗನ್ನಡ ಸಾಹಿತ್ಯ ವಿಮರ್ಶೆಯೊಂದಿಗೆ ಮಧ್ಯಕಾಲೀನ ವಚನಕಾರರಾದ ಅಲ್ಲಮಪ್ರಭುವನ್ನು ಸಮಾಜವಿಜ್ಞಾನಿಯಾಗಿ, ತತ್ವಜ್ಞಾನಿಯಾಗಿ, ಜಿಜ್ಞಾಸುವಾಗಿ ಕಾಣುವ ದೃಷ್ಟಿಕೋನವು ಹೊಸತನದಿಂದ ಕೂಡಿದುದಾಗಿದೆ. ಹಾಗಾಗಿ ಇವರು ಗಟ್ಟಿ ವಿಮರ್ಶಕರಾಗಿ ನಿಲ್ಲುತ್ತಾರೆ ಎನ್ನಬಹುದು.

ಎನ್.ಬೋರಲಿಂಗಯ್ಯ ಅವರು ಕವಿಯೂ ಹೌದು. ಅವರ ಸಾಹಿತ್ಯ ಕೃತಿಗಳಲ್ಲಿ ಹೆಣ್ಣು ಮಗುವನ್ನು ಪ್ರಧಾನವಾಗಿಟ್ಟುಕೊಂಡು ಕಾವ್ಯರಚಿಸಿರುವುದನ್ನು ಕಾಣಬಹುದು. ಒಂದು ಮಗು ಜನಿಸಿದ ನಂತರ ಆ ಮಗುವಿನ ಪಾಲನೆ, ಪೋಷಣೆ ಮತ್ತು ಆ ಮಗುವಿನ ಭವಿಷ್ಯದಲ್ಲಿ ನಿರೀಕ್ಷಿಸುವ ಆಸೆ, ಬಯಕೆಗಳನ್ನು ತಮ್ಮ ಕವನ ಸಂಕಲನದಲ್ಲಿ ಕಟ್ಟಿಕೊಡುತ್ತಾರೆ.

ಅಲ್ಲದೆ ಈ ಕವನ ಸಂಕಲನವು ಕೌಟುಂಬಿಕ ಪರಿಧಿಯೊಳಗೆ ಮುಂದೆ ಸಾಗುತ್ತಾ ಅಂದರೆ, ಮಗಳ ಮಗಳು, ಅಜ್ಜ-ಅಜ್ಜಿ, ಮಗಳು-ಅಳಿಯ, ಅಣ್ಣ-ತಮ್ಮಂದಿರು, ತಮ್ಮಂದಿರ ಮಕ್ಕಳು, ಸೊಸೆ-ಮಗ ಮೊದಲಾದ ಕೌಟುಂಬಿಕ ಸಂಬಂಧಗಳ ಸ್ವರೂಪವನ್ನು ತಿಳಿಸುತ್ತಾರೆ.

'ವಚನ ಕಟ್ಟಿದ ಅಲ್ಲಮ' ಎಂಬ ಕೃತಿಯಲ್ಲಿ ಎನ್.ಬೋರಲಿಂಗಯ್ಯನವರು ೧೨ ನೇ ಶತಮಾನದ ವಚನಕಾರನಾದ ಅಲ್ಲಮನನ್ನು ಕುರಿತ ಆತನ ವಚನಗಳನ್ನು, ಷಟ್‌ಸ್ಥಲಗಳನ್ನು ಮತ್ತು ವೀರಶೈವ ಸಿದ್ಧಾಂತಗಳನ್ನು ತಮ್ಮ ಅನುಭವವದ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಮಾಡಿರುವುದನ್ನು ಕಾಣುತ್ತೇವೆ. ಅಲ್ಲಮನನ್ನು ಒಬ್ಬ ಸಮಾಜ ವಿಜ್ಞಾನಿಯಾಗಿ, ಒಬ್ಬ ತತ್ವ ಚಿಂತಕನನ್ನಾಗಿ, ದಾರ್ಶನಿಕನನ್ನಾಗಿ, ಜ್ಞಾನಭಂಡಾರದ ಗಣಿಯಾಗಿ ನೋಡಿದ್ದಾರೆ. ಅಲ್ಲಮಪ್ರಭುವಿನ ವಚನಗಳ ತಾತ್ವಿಕತೆಯನ್ನು ಅದರ ಸಾರವನ್ನು ಸಮಾಜಕ್ಕೆ ತಿಳಿಸುವುದು ಎನ್.ಬೊರಲಿಂಗಯ್ಯನವರ ಉದ್ದೇಶವಾಗಿದೆ.

'ಶಿಕ್ಷಣ ಮತ್ತು ಲೈಂಗಿಕ ಜೀವನ' ಈ ಕೃತಿಯು ಪ್ರಬಂಧ ಸಂಕಲನವಾಗಿದೆ. ಈ ಕೃತಿಯಲ್ಲಿ ನಾಲ್ಕು ಪ್ರಬಂಧಗಳಿವೆ. ೧. ಸಮಾನತೆ ಮತ್ತು ಮಹಿಳೆ ೨. ಲೈಂಗಿಕ ಶಿಕ್ಷಣ ೩. ವಿವಾಹ ಪೂರ್ವ ಲೈಂಗಿಕ ಸಂಬಂಧಗಳ ಅವಶ್ಯಕತೆ ಮತ್ತು ಸ್ವರೂಪ ೪. ಮದುವೆ ಈ ಲೇಖನಗಳ ಒಟ್ಟು ನೋಟವು ಈ ಕೆಳಕಂಡತಿದೆ. ಅಂದರೆ ಭಾರತೀಯ ಸಮಾಜದಲ್ಲಿ ವಿವಾಹ ಒಂದು ಸಾಮಾಜಿಕ ಪದ್ಧತಿಯಾಗಿದೆ. ನಮ್ಮ ಸಮಾಜದಲ್ಲಿ ವಿವಾಹವೆಂಬುದರ

ಮೂಲಕ ವ್ಯಕ್ತಿಯು ಕುಟುಂಬವನ್ನು ಪ್ರವೇಶಿಸುತ್ತಾನೆ. ಕುಟುಂಬದಲ್ಲಿ ಮಹಿಳೆಯ ಸ್ಥಾನಮಾನ ಮತ್ತು ಇಂದಿನ ಸಮಾಜಕ್ಕೆ ಲೈಂಗಿಕ ಶಿಕ್ಷಣದ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಇಲ್ಲಿ ಸ್ತ್ರೀವಾದದ ನೆಲೆಯೊಂದಿಗೆ ವ್ಯಕ್ತಿಯ ಖಾಸಗಿ ಬದುಕಿಗೆ ಬೇಕಾದ ಲೈಂಗಿಕ ಶಿಕ್ಷಣದ ಪ್ರಸ್ತುತತೆಯನ್ನು ಈ ಕೃತಿಯಲ್ಲಿ ತಿಳಿಸಿದ್ದಾರೆ.

ಒಟ್ಟಾರೆಯಾಗಿ ಎನ್.ಬೋರಲಿಂಗಯ್ಯ ಅವರು ಒಬ್ಬ ವಿಶಿಷ್ಟ ಬರಹಗಾರನಾಗಿ, ತತ್ವ ಚಿಂತಕರಾಗಿ, ಸರಳ ಜೀವಿಯಾಗಿ, ಕೃಷಿಪರ ಕಾಳಜಿಯುಳ್ಳ ಆಲೋಚನೆಗಳನ್ನು ಮೈಗೂಡಿಸಿಕೊಂಡು ಸಾಹಿತ್ಯ ರಚನೆ ಮಾಡಿರುವುದನ್ನು ಕಾಣುತ್ತೇವೆ.

ಪರಾಮರ್ಶನ ಗ್ರಂಥಗಳು

೧. ಎನ್.ಬೋರಲಿಂಗಯ್ಯ – 'ಕಡಿವಾಣ', ದಾರಿದೀಪ ಪ್ರಕಾಶನ, ೨೦೧೪.

೨. ಎನ್.ಬೋರಲಿಂಗಯ್ಯ – 'ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು', ದಾರಿದೀಪ ಪ್ರಕಾಶನ, ೨೦೦೫.

೩. ಎನ್.ಬೋರಲಿಂಗಯ್ಯ – 'ಜನವಕ್ಕ', ದಾರಿದೀಪ ಪ್ರಕಾಶನ, ೨೦೧೧.

೪. ಎನ್.ಬೋರಲಿಂಗಯ್ಯ – 'ವಚನ ಕಟ್ಟಿದ ಅಲ್ಲಮ' ದಾರಿದೀಪ ಪ್ರಕಾಶನ, ೨೦೦೫.

೫. ಎನ್.ಬೋರಲಿಂಗಯ್ಯ – 'ಶಿಕ್ಷಣ ಮತ್ತು ಲೈಂಗಿಕ ಜೀವನ', ದಾರಿದೀಪ ಪ್ರಕಾಶನ, ೧೯೮೨.

ಆಕರ ಗ್ರಂಥಗಳು

1. ಕರ್ನಾಟಕ ಕೈಪಿಡಿ ಭಾಗ – ೧, ೨: ಪ್ರಕಟಣೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಪ್ರಥಮ ಮುದ್ರಣ, ೨೦೦೬

2. ಡಾ. ಹೆಚ್.ಆರ್.ಸಿದ್ದಗಂಗಯ್ಯ ಹೊಲತಾಳ್ – 'ಕಾವ್ಯ ಸಂವಹನ', ನಮ್ಮ ಪ್ರಕಾಶನ, ಬಿಳಿಗೆರೆ, ಮೊದಲ ಮುದ್ರಣ ೨೦೦೦

3. ಚ.ನ.ಶಂಕರ್‌ರಾವ್ – 'ಭಾರತೀಯ ಸಮಾಜ', ಕೆನರಾ ಪ್ರಕಾಶನ, ಮಂಗಳೂರು, ಮೊದಲ ಮುದ್ರಣ ೨೦೦೧

5. ಹೆಚ್. ವಿದ್ಯಾಶಂಕರ – 'ವಚನ ಸಾಹಿತ್ಯ ಸಮೀಕ್ಷೆ', ವಿದ್ಯಾನಿಧಿ ಪ್ರಕಾಶನ, ಗದಗ, ಪ್ರಥಮ ಮುದ್ರಣ ೨೦೦೪

6. ಎಸ್.ಎಲ್.ಶೇಷಗಿರಿ ರಾವ್ – 'ಹೊಸಗನ್ನಡ ಸಾಹಿತ್ಯ ಚರಿತ್ರೆ', ಸಪ್ನ ಪ್ರಕಾಶನ, ಬೆಂಗಳೂರು, ಮೊದಲ ಮುದ್ರಣ ೧೯೭೫

*****